ಶನಿವಾರ, ಸೆಪ್ಟೆಂಬರ್ 24, 2022 | ₹ 6.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗರದ 70 ವರ್ಷಗಳು ಮೇಲ್ಪಟ್ಟ ಸೋಂಕಿತರಲ್ಲಿ 5,804 ಮಂದಿ ಮರಣ

ಕೋವಿಡ್: ಮೃತರಲ್ಲಿ ವೃದ್ಧರೇ ಅಧಿಕ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರಲ್ಲಿ ವೃದ್ಧರೇ ಅಧಿಕ ಸಂಖ್ಯೆಯಲ್ಲಿ ಮೃತಪಟ್ಟಿದ್ದಾರೆ. 70 ವರ್ಷಗಳು ಮೇಲ್ಪಟ್ಟ ಸೋಂಕಿತರಲ್ಲಿ 5,804 ಮಂದಿ ಸಾವಿಗೀಡಾಗಿದ್ದಾರೆ.

ಈವರೆಗೆ 18.70 ಲಕ್ಷಕ್ಕೂ ಅಧಿಕ ಮಂದಿ ನಗರದಲ್ಲಿ ಸೋಂಕಿತರಾಗಿದ್ದಾರೆ. ಅವರಲ್ಲಿ 16,987 ಮಂದಿ ಮೃತಪಟ್ಟಿದ್ದಾರೆ. ಸೋಂಕಿನ ತೀವ್ರತೆಗೆ ಎಲ್ಲ ವಯೋಮಾನದವರೂ ಸಾವಿಗೀಡಾಗಿದ್ದಾರೆ. ಮಧುಮೇಹ, ಅಧಿಕ ರಕ್ತದೊತ್ತಡ ಸೇರಿ ವಿವಿಧ ವಯೋಸಹಜ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದವರಿಗೆ ಸೋಂಕು ಹೆಚ್ಚಿನ ಹಾನಿ ಮಾಡಿದೆ. ಇದರಿಂದಾಗಿ ವೃದ್ಧರು ಹೆಚ್ಚು ಸಂಖ್ಯೆಯಲ್ಲಿ ಸಾವಿಗೀಡಾಗಿದ್ದಾರೆ.

ನಗರದಲ್ಲಿ 2020ರ ಮಾ.8ರಂದು ಮೊದಲ ಕೋವಿಡ್ ಪ್ರಕರಣ ಪತ್ತೆಯಾಗಿತ್ತು. ಮೊದಲೆರಡು ಅಲೆಗಳಲ್ಲಿ ಸೋಂಕು ವೃದ್ಧರಿಗೆ ಹೆಚ್ಚಿನ ಅಪಾಯ ತಂದೊಡ್ಡಿತ್ತು. ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆ, ವೆಂಟಿಲೇಟರ್ ಸಂಪರ್ಕ ಹೊಂದಿದ ಹಾಸಿಗೆಗಳ ಕೊರತೆಯಿಂದಾಗಿಯೂ ಕೆಲವರಿಗೆ ಚಿಕಿತ್ಸೆಯಲ್ಲಿ ವ್ಯತ್ಯಯವಾಗಿತ್ತು. ಇದರಿಂದಾಗಿ ಎರಡು ಅಲೆಗಳಲ್ಲಿ 16,400 ಮಂದಿ ಮೃತಪಟ್ಟಿದ್ದರು. ಮೂರನೇ ಅಲೆಯಲ್ಲಿ ಸೋಂಕಿನ ತೀವ್ರತೆ ಕಡಿಮೆ ಇದ್ದಿದ್ದರಿಂದ ಆಸ್ಪತ್ರೆ ದಾಖಲಾತಿ ಹೆಚ್ಚಳವಾಗಿರಲಿಲ್ಲ.



ಮೃತರಲ್ಲಿ ಕೆಲವರು ಲಸಿಕೆ ಪಡೆದಿರಲಿಲ್ಲ. ಇದರಿಂದ ಸೋಂಕು ಜೀವಕ್ಕೆ ಹಾನಿ ಮಾಡಿದೆ ಎನ್ನುವುದು ಡೆತ್ ಆಡಿಟ್‌ನಿಂದ ದೃಢಪಟ್ಟಿದೆ.


ಡಾ.ಸಿ. ನಾಗರಾಜ್, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

ಸದ್ಯ ಸೋಂಕು ದೃಢ ಪ್ರಮಾಣ ಶೇ 1.69 ರಷ್ಟಿದೆ. ಮರಣ ಪ್ರಮಾಣ ದರವೂ ನಿಯಂತ್ರಣದಲ್ಲಿದ್ದು, ಶೇ 0.07 ರಷ್ಟಿದೆ. ನಗರದಲ್ಲಿ ವರದಿಯಾದ ಕೋವಿಡ್ ಮರಣ ಪ್ರಕರಣಗಳನ್ನು ಬಿಬಿಎಂಪಿ ವಾರ್‌ರೂಮ್ ವಿಶ್ಲೇಷಣೆಗೆ ಒಳಪಡಿಸಿದೆ.

ಮಕ್ಕಳ ಸಂಖ್ಯೆ ಕಡಿಮೆ: ಕೋವಿಡ್‌ನಿಂದ ಮೃತಪಟ್ಟವರಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಿದೆ. 10 ವರ್ಷದೊಳಗಿನವರಲ್ಲಿ 27 ಮಕ್ಕಳು ಮೃತಪಟ್ಟಿದ್ದಾರೆ. 10ರಿಂದ 20 ವರ್ಷದೊಳಗಿನವರಲ್ಲಿ 32 ಮಂದಿ ಸಾವಿಗೀಡಾಗಿದ್ದಾರೆ. 20ರಿಂದ 40 ವರ್ಷದೊಳಗಿನವರಲ್ಲಿ 1,253 ಮಂದಿ ಹಾಗೂ 40ರಿಂದ 50 ವರ್ಷದೊಳಗಿನವರಲ್ಲಿ 2,093 ಮಂದಿ ಸೋಂಕಿನ ತೀವ್ರತೆಗೆ ಮರಣ ಹೊಂದಿದ್ದಾರೆ. 50ರಿಂದ 70 ವರ್ಷದೊಳಗಿನವರಲ್ಲಿ 7,764 ಮಂದಿ ಕೊನೆಯುಸಿರೆಳೆದಿದ್ದಾರೆ.

‘ಆಸ್ಪತ್ರೆಗೆ ತಡವಾಗಿ ದಾಖಲು, ಐಸಿಯು ಹಾಸಿಗೆ ಕೊರತೆ ಕೂಡ ಮೊದಲೆರಡು ಅಲೆಯಲ್ಲಿ ಕೆಲವರ ಜೀವಕ್ಕೆ ಅಪಾಯವನ್ನು ತಂದೊಡ್ಡಿತು. ಬೇಜವಾಬ್ದಾರಿಯಿಂದ ಕೆಲವರು ಸಮಸ್ಯೆ ತಂದುಕೊಂಡರು. ಮೊದಲನೇ ಅಲೆಯಲ್ಲಿ ಹಿರಿಯ ನಾಗರಿಕರು ಸೋಂಕಿನ ತೀವ್ರತೆಗೆ ಹೆಚ್ಚಿನ ಪ್ರಮಾಣದಲ್ಲಿ ಅಸ್ವಸ್ಥರಾಗಿದ್ದರು. ಎರಡನೇ ಅಲೆಯಲ್ಲಿ ವೈರಾಣುವು ಅತಿವೇಗವಾಗಿ ವ್ಯಾಪಿಸಿಕೊಂಡಿತು. ತಡವಾಗಿ ಪರೀಕ್ಷೆ, ಮನೆ ಆರೈಕೆ ಸೇರಿ ವಿವಿಧ ಕಾರಣಗಳಿಂದ ಯುವಜನರು ಮತ್ತು ಮಧ್ಯ ವಯಸ್ಸಿನವರೂ ಮೃತಪಟ್ಟರು’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

‘ಮನೆ ಆರೈಕೆಯಲ್ಲಿರುವ ಕೆಲವರಿಗೆ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಅರಿವಿಗೆ ಬಾರದೆಯೇ ಶೇ 80ರಿಂದ ಶೇ 70ಕ್ಕೆ ದಿಢೀರ್ ಇಳಿಕೆಯಾಗುತ್ತಿತ್ತು. ಆಗ ಆಸ್ಪತ್ರೆಗೆ ತೆರಳದ ಪರಿಣಾಮ ಸೋಂಕು ಜೀವಕ್ಕೆ ಕುತ್ತಾಯಿತು’ ಎಂದು ಹೇಳಿದರು.



‘ವಿಭಜನೆ ವಿರೋಧಿಸಿ ನಡೆಯದ ಒಗ್ಗಟ್ಟಿನ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತ ಹಾಗೂ ಪಾಕಿಸ್ತಾನ ವಿಭಜನೆ ವಿರೋಧಿಸಿ ಇಡೀ ದೇಶ ಒಗ್ಗಟ್ಟಿನಿಂದ ಏಕೆ ಹೋರಾಟ ನಡೆಸಲಿಲ್ಲ’ ಎಂದು ಚಿಂತಕ ರಾಮ ಮಾಧವ್ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಮಂಥನ ಬೆಂಗಳೂರು ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದರು.

‘ನನ್ನ ‘ವಿಭಜಿತ ಸ್ವಾತಂತ್ರ್ಯ’ ಕೃತಿಯಲ್ಲಿ ಎರಡು ಭಾಗಗಳು ಇವೆ. 1905ರಲ್ಲಿ ಪೂರ್ವ ಹಾಗೂ ಪಶ್ಚಿಮ ಬಂಗಾಳದ ವಿಭಜನೆ ವೇಳೆ ಇಡೀ ದೇಶವೇ ಒಟ್ಟಾಗಿ ಹೋರಾಟ ನಡೆಸಿತ್ತು. ಅದೇ ಹಿಂದೂಗಳಿಗೆ ಹಿಂದೂಸ್ತಾನ, ಮುಸ್ಲಿಮರಿಗೆ ಪಾಕಿಸ್ತಾನವಾಗಿ ಇಡೀ ದೇಶವನ್ನೇ ವಿಭಜಿಸಿದಾಗ ಏಕೆ ಅಂತಹ ಹೋರಾಟಗಳು ಮತ್ತೆ ನಡೆಯಲಿಲ್ಲ’ ಎಂದರು.

‘ಈ ಪುಸ್ತಕವು ದೇಶದ ವಿಭಜನೆಯ ಕುರಿತು ಇದೆ. 1905, 1911 ಹಾಗೂ 1940 ಹಾಗೂ 1947ರಲ್ಲಿ ನಡೆದ ವಿಭಜನೆಯ ವಿಷಯಗಳ ಕುರಿತು ಕೃತಿಯಲ್ಲಿ ಬೆಳಕು ಚೆಲ್ಲಲಾಗಿದೆ’ ಎಂದರು.

‘ಮಹಾತ್ಮ ಗಾಂಧಿ ಹಾಗೂ ಮಹಮ್ಮದ್ ಆಲಿ ಜಿನ್ನಾ ಇಬ್ಬರೂ ಗುಜರಾತ್ ಮೂಲದವರು. ದೇಶದ ವಿಭಜನೆಯಲ್ಲಿ ಈ ಇಬ್ಬರು ನಾಯಕರ ಪಾತ್ರವೇನು ಎಂಬುದನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಜಿನ್ನಾ ಆರಂಭಿಕ ದಿನಗಳಲ್ಲಿ ದೇಶ ವಿಭಜನೆ, ಮುಸ್ಲಿಂ ಲೀಗ್‌ನ ಕಾರ್ಯತಂತ್ರ ವಿರೋಧಿಸಿದ್ದ. ಜಿನ್ನಾ ಕಾಂಗ್ರೆಸ್ ತೊರೆದ ಮೇಲೆ ಮುಸ್ಲಿಂ ಲೀಗ್‌ನ ರಾಜಕಾರಣದಲ್ಲಿ ಸಕ್ರಿಯನಾಗಿ ಪಾಕಿಸ್ತಾನದ ಉದಯಕ್ಕೆ ಕಾರಣನಾದ. ಪಾಕಿಸ್ತಾನದ ಪಿತಾಮಹ ಅನಿಸಿಕೊಂಡ’ ಎಂದರು.

‘ದಕ್ಷಿಣ ಆಫ್ರಿಕಾದಿಂದ ಮಹಾತ್ಮ ಗಾಂಧಿ ಅವರು ಆಗಮಿಸಿದ ಮೇಲೆ ಹಿಂದೂ ಹಾಗೂ ಮುಸ್ಲಿಮರನ್ನು ಒಗ್ಗಟ್ಟಿನಲ್ಲಿ ಕೊಂಡೊಯ್ಯುವ ಅಭಿಲಾಷೆ ಹೊಂದಿದ್ದರು. ಒಗ್ಗಟ್ಟಿದ್ದರೆ ಸ್ವಾತಂತ್ರ್ಯ ತಾನಾಗಿಯೇ ಬರಲಿದೆ ಎಂದು ಮಹಾತ್ಮ ಗಾಂಧಿ ಅವರು ನಂಬಿದ್ದರು. ಅದು ಸಾಧ್ಯವಾಗಲಿಲ್ಲ’ ಎಂದು ಹೇಳಿದರು.

ಗಾಂಧೀಜಿ ಆರಂಭದಲ್ಲಿ ದೇಶ ವಿಭಜನೆ ವಿರೋಧಿಸಿದ್ದರು. ಆದರೆ, ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರ ಮಾಡಬೇಕೆಂದು ಜಿನ್ನಾ ಪಟ್ಟು ಹಿಡಿದಿದ್ದರು. ನಂತರ, ಈ ವಿಚಾರದಲ್ಲಿ ಮೃದು ಧೋರಣೆ ಅನುಸರಿಸಿದರು ಎಂದು ಹೇಳಿದರು.

‘ಮುಸ್ಲಿಂ ಲೀಗ್ ಪ್ರತ್ಯೇಕ ಕ್ಷೇತ್ರಗಳೂ ಸೇರಿ ಹಲವು ಬೇಡಿಕೆ ಮುಂದಿಟ್ಟಿತ್ತು. ಅದಕ್ಕೆ ಕಾಂಗ್ರೆಸ್ ಅಂದು ಒಪ್ಪಿತ್ತು. ಅದಾದ ಮೇಲೆ ಮುಸ್ಲಿಂ ಲೀಗ್ ಮತ್ತಷ್ಟು ಸದೃಢವಾಗಿ ಬೆಳೆಯಿತು. ವಿಭಜನೆಯು ತಪ್ಪು ತೀರ್ಮಾನಗಳಿಂದ ಆಗಿರುವ ಪ್ರಮಾದ. ಸಂಧಾನಕ್ಕೆ ಮುಂದಾಗಿದ್ದು ಹಿನ್ನಡೆ ಉಂಟಾಯಿತು. ಕೊನೆಗೆ ಮಹಾತ್ಮ ಗಾಂಧಿ ಅವರು ಸೋತರು, ಜಿನ್ನಾ ಯೋಜನೆಗಳು ಯಶಸ್ವಿಯಾದವು’ ಎಂದರು.

ಸಾಫ್ಟ್‌ವೇರ್ ಎಂಜಿನಿಯರ್ ಕೆ.ಎಸ್. ಕಿರಣ್‌ಕುಮಾರ್ ಸಂವಾದ ನಡೆಸಿಕೊಟ್ಟರು. ಇದೇ ವೇಳೆ ‘ವಿಭಜಿತ ಸ್ವಾತಂತ್ರ್ಯ’ ಕೃತಿಯನ್ನು ಸಚಿವ ಅಶ್ವತ್ ನಾರಾಯಣ ಬಿಡುಗಡೆ ಮಾಡಿದರು.

ಸಂಸದರು, ರಾಜ್ಯಸಭೆ ಸದಸ್ಯರೊಂದಿಗೆ ಸಚಿವೆ ದರ್ಶನಾ ಜರ್ದೋಶ್ ಸಭೆ

ಬೆಂಗಳೂರು–ಹುಬ್ಬಳ್ಳಿ ನಡುವೆ ಮಾರ್ಚ್‌ನಲ್ಲಿ ಹೈಸ್ಪೀಡ್ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು–ಹುಬ್ಬಳ್ಳಿ ನಡುವೆ ವಂದೇ ಭಾರತ ಹೈಸ್ಪೀಡ್ ರೈಲು 2023ರ ಮಾರ್ಚ್‌ನಲ್ಲಿ ಕಾರ್ಯಾಚರಣೆ ಆರಂಭಿಸಲಿದೆ' ಎಂದು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ತಿಳಿಸಿದರು.

ರೈಲ್ವೆ ಮತ್ತು ಜವಳಿ ಖಾತೆ ರಾಜ್ಯ ಸಚಿವೆ ದರ್ಶನಾ ಜರ್ದೋಶ್ ಅವರು ಸಂಸದರು ಮತ್ತು ರಾಜ್ಯಸಭೆ ಸದಸ್ಯರೊಂದಿಗೆ ರಾಜ್ಯದ ರೈಲ್ವೆ ಯೋಜನೆ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಸಂಸದ ಲಹರ್ ಸಿಂಗ್ ಪ್ರಶ್ನೆಗೆ ಉತ್ತರಿಸಿದ ಸಂಜೀವ್ ಕಿಶೋರ್, 'ಜೋಡಿ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಹಾವೇರಿ–ದಕ್ಷಿಣ ಹುಬ್ಬಳ್ಳಿ ಮಾರ್ಗದಲ್ಲಿ 45 ಕಿಲೋ ಮೀಟರ್ ಕಾಮಗಾರಿ ಮಾತ್ರ ಬಾಕಿ ಇದೆ. ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿದೆ' ಎಂದರು.

ರಾಜ್ಯದ ರೈಲ್ವೆ ಯೋಜನೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದ ಸಚಿವೆ ದರ್ಶನಾ ಜರ್ದೋಶ್, 'ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆ ನಡುವಿನ ಸಾಮರಸ್ಯ ಹೆಚ್ಚಿಸಬೇಕಿದೆ. ಅದಕ್ಕಿರುವ ಎಲ್ಲಾ ಅಡೆತಡೆಗಳನ್ನು ತೆಗೆದುಹಾಕುವ ಉದ್ದೇಶದಿಂದ ಈ ಸಭೆ ನಡೆಸಲಾಗಿದೆ' ಎಂದು ಹೇಳಿದರು.

ಗತಿಶಕ್ತಿ ಯೋಜನೆ ಬಳಸಿಕೊಂಡು ಉಪನಗರ ರೈಲು ಯೋಜನೆ ಸೇರಿ ರಾಜ್ಯದ ಎಲ್ಲಾ ರೈಲ್ವೆ ಯೋಜನೆಗಳ ವೇಗ ಹೆಚ್ಚಿಸಲಾಗುವುದು. ತಮ್ಮ ಕ್ಷೇತ್ರಗಳ ರೈಲ್ವೆ ಯೋಜನೆ ಅನುಷ್ಠಾನಕ್ಕೆ ಇರುವ ಸವಾಲುಗಳನ್ನು ಸಂಸದರು ವಿವರಿಸಿದ್ದು, ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ವಂದೇ ಭಾರತ್, ಒಂದು ನಿಲ್ದಾಣ–ಒಂದು ಉತ್ಪನ್ನ, ಕವಚದಂತಹ ಹೊಸ ಕಾರ್ಯಕ್ರಮದಿಂದ ರೈಲ್ವೆ ಇಲಾಖೆ ಜನರಿಗೆ ಇನ್ನಷ್ಟು ಹತ್ತಿರ ಆಗಲಿದೆ ಎಂದು ತಿಳಿಸಿದರು.

ಸಂಸದರಾದ ಬಿ.ಎನ್. ಬಚ್ಚೇಗೌಡ, ಎಸ್.ಮುನಿಸ್ವಾಮಿ, ಸುಮಲತಾ ಅಂಬರೀಶ್, ಜಿ.ಎಸ್.ಬಸವರಾಜ್, ಲಹರ್ ಸಿಂಗ್, ರಾಜಾ ಅಮರೇಶ್ವರ ನಾಯ್ಕ್, ಶಿವಕುಮಾರ್ ಉದಾಸಿ, ವೈ. ದೇವೇಂದ್ರಪ್ಪ, ಉಮೇಶ್ ಜಿ. ಜಾಧವ್, ಅಣ್ಣಾಸಾಹೇಬ ಶಂಕರ ಜೊಲ್ಲೆ, ಕರಡಿ ಸಂಗಣ್ಣ, ಪ್ರತಾಪ ಸಿಂಹ ಸಭೆಯಲ್ಲಿ ಭಾಗವಹಿಸಿದ್ದರು.



ಸಂಸದರು, ರಾಜ್ಯಸಭೆ ಸದಸ್ಯರೊಂದಿಗೆ ರೈಲ್ವೆ ಖಾತೆ ರಾಜ್ಯ ಸಚಿವೆ ದರ್ಶನಾ ಜರ್ದೋಶ್ ಸಭೆ ನಡೆಸಿದರು. ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಇದ್ದರು.

ಯಶವಂತಪುರ–ಹೊಸೂರು ರೈಲಿಗೆ ಮನವಿ

ಯಶವಂತಪುರ–ಹೊಸೂರು ನಡುವೆ ರೈಲುಗಳ ಸಂಖ್ಯೆ ಹೆಚ್ಚಿಸಲು ರೈಲ್ವೆ ಸಚಿವರಿಗೆ ಮನವಿ ಮಾಡಲಾಗಿದೆ ಎಂದು ಸಂಸದ ಪಿ.ಸಿ.ಮೋಹನ್ ತಿಳಿಸಿದರು.

ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೊ ರೈಲು ಕಾಮಗಾರಿ ನಡೆಯುತ್ತಿದ್ದು, ಸಂಚಾರ ದಟ್ಟಣೆ ಹೆಚ್ಚಾಗಿದೆ. ಈ ಮಾರ್ಗದಲ್ಲಿ ರೈಲುಗಳ ಸಂಖ್ಯೆ ಹೆಚ್ಚಿಸಿದರೆ ಅನುಕೂಲ ಆಗಲಿದೆ ಎಂಬುದನ್ನು ಮನವರಿಕೆ ಮಾಡಲಾಗಿದೆ. ಉಪನಗರ ರೈಲು ಯೋಜನೆಯ ಕಾಮಗಾರಿಯನ್ನು ಕೂಡಲೇ ಆರಂಭಿಸಲು ಮನವಿ ಮಾಡಿದ್ದು, ಸಚಿವರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಯಿತು ಎಂದು ವಿವರಿಸಿದರು. 'ಕಾರ್ಮೆಲರಾಂ ರೈಲು ನಿಲ್ದಾಣದ ಬಳಿ ರೈಲ್ವೆ ಮೇಲ್ಸೇತುವೆ ನಿರ್ಮಾಣ ಮಾಡಬೇಕಿದೆ. ಈ ಸಂಬಂಧ ಹಲವು ವರ್ಷಗಳಿಂದ ಮನವಿ ಸಲ್ಲಿಸಲಾಗಿದೆ. ಕೂಡಲೇ ಈ ಯೋಜನೆ ಕೈಗೆತ್ತಿಕೊಳ್ಳಲು ಮನವಿ ಸಲ್ಲಿಸಿದ್ದೇನೆ' ಎಂದರು.

ಪೋಕ್ಸೊ: ಯೋಗ ಶಿಕ್ಷಕನಿಗೆ 5 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಪ್ರಕರಣದಲ್ಲಿ ಯೋಗ ಶಿಕ್ಷಕ ಸ್ವಾಮಿ ನಿರಂಜನ್ ಎಂಬಾತನಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ ತ್ವರಿತ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

2018ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎನ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

'ಜಯನಗರದ ಸಂಸ್ಥೆಯೊಂದರಲ್ಲಿದ್ದ ಸ್ವಾಮಿ ನಿರಂಜನ್, ಸಾರ್ವಜನಿಕರಿಗೆ ಧ್ಯಾನ ಹಾಗೂ ಯೋಗಾಸನ ಹೇಳಿಕೊಡುತ್ತಿದ್ದ. ಇದೇ ಸಂಸ್ಥೆಯಲ್ಲಿ ಬಾಲಕಿಯ ತಾಯಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದರು. ಶಾಲೆಗೆ ಹೋಗುತ್ತಿದ್ದ ಬಾಲಕಿ, ಶಾಲೆ ಮುಗಿದ ನಂತರ ಸಂಸ್ಥೆಗೆ ಬಂದು ತಾಯಿ ಜೊತೆ ಇರುತ್ತಿದ್ದರು' ಎಂದು ಪೊಲೀಸರು ಹೇಳಿದರು.

'2018ರ ಆಗಸ್ಟ್ 4ರಂದು ಶಾಲೆ ಮುಗಿದ ನಂತರ ಬಾಲಕಿ ಸಂಸ್ಥೆಯ ಕಚೇರಿಗೆ ಬಂದಿದ್ದಳು. ಅತಿಥಿ ಕೊಠಡಿಯಲ್ಲಿ ಶಾಲಾ ಪುಸ್ತಕಗಳನ್ನು ಇರಿಸಲಾಗಿತ್ತು. ಅದನ್ನು ತೆಗೆದುಕೊಂಡು ಬರುವಂತೆ ಬಾಲಕಿಗೆ ತಾಯಿ ಹೇಳಿ ಕಳುಹಿಸಿದ್ದರು. ಅದೇ ಕಾರಣಕ್ಕೆ ಬಾಲಕಿ ಕೊಠಡಿಗೆ ಹೋಗಿದ್ದಳು.'

'ಕೊಠಡಿಯಲ್ಲಿದ್ದ ನಿರಂಜನ್, ಬಾಲಕಿ ಬರುತ್ತಿದ್ದಂತೆ ಮಾತನಾಡಿಸಿದ್ದ. ಕೊಠಡಿ ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿಕೊಂಡಿದ್ದ. ನಂತರ, ಬಾಲಕಿ ಬಟ್ಟೆಗಳನ್ನು ಬಿಚ್ಚಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಬಗ್ಗೆ ತಾಯಿ ಠಾಣೆಗೆ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

₹ 13.7 ಕೋಟಿ ಮೌಲ್ಯದ ಕೊಕೇನ್ ವಶ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಘಾನಾ ದೇಶದಿಂದ ಆಗಮಿಸಿದ್ದ ವ್ಯಕ್ತಿಯೊಬ್ಬನಿಂದ ₹ 13.7 ಕೋಟಿ ಮೌಲ್ಯದ ಒಟ್ಟು 1.2 ಕೆ.ಜಿ ಕೊಕೇನ್ ವಶಪಡಿಸಿಕೊಳ್ಳಲಾಗಿದೆ.

ಆರೋಪಿಯು ಮಾದಕ ವಸ್ತುವನ್ನು ಕಳ್ಳಸಾಗಣೆ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿಯ ಆಧಾರದ ಮೇಲೆ ವಾಯು ಗುಪ್ತಚರ ದಳದ ಅಧಿಕಾರಿಗಳು ಹಾಗೂ ಬೆಂಗಳೂರು ಕಸ್ಟಮ್ಸ್ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಆರೋಪಿಯನ್ನು ಆಸ್ಪತ್ರೆಗೆ ದಾಖಲಿಸಿ ತೀವ್ರ ವೈದ್ಯಕೀಯ ಪರೀಕ್ಷೆ ನಡೆಸಿದಾಗ ಆತನ ಹೊಟ್ಟೆಯಲ್ಲಿ ಒಟ್ಟು 104 ಮಾತ್ರೆಗಳಿದ್ದವು. ಅವುಗಳಲ್ಲಿ ಕೊಕೇನ್ ತುಂಬಿಕೊಂಡು ಕಳ್ಳಸಾಗಣೆಗೆ ಯತ್ನಿಸುತ್ತಿದ್ದ ಎಂದು ತಿಳಿದುಬಂದಿದೆ.

104 ಮಾತ್ರೆಗಳಿಂದ 1.2 ಕೆ.ಜಿ ಕೊಕೇನ್ ಶೇಖರಣೆಯಾಗಿದ್ದು, ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

'ಪಾಕಿಸ್ತಾನಕ್ಕೆ ನೆರವು– ಭಾರತಕ್ಕೆ ಸಂದೇಶವಲ್ಲ'

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನವು ಎಫ್–16 ಯುದ್ಧ ವಿಮಾನಗಳನ್ನು ಕೊಳ್ಳಲು ಅಮೆರಿಕ ₹3,644 ಕೋಟಿ (45 ಕೋಟಿ ಡಾಲರ್) ಹಣಕಾಸಿನ ನೆರವು ನೀಡುತ್ತಿರುವುದು ಭಾರತದ ವಿರುದ್ಧ ನೀಡುತ್ತಿರುವ ಸಂದೇಶ ಅಲ್ಲ. ಬದಲಾಗಿ ಭಯೋತ್ಪಾದನೆ ನಿಗ್ರಹ ಮತ್ತು ಪರಮಾಣು ಭದ್ರತೆಯ ಉದ್ದೇಶವನ್ನು ಹೊಂದಿದೆ ಎಂದು ಅಮೆರಿಕ ಸ್ಪಷ್ಟಪಡಿಸಿದೆ.

ಪಾಕಿಸ್ತಾನಕ್ಕೆ ₹3,644 ಕೋಟಿ ಹಣಕಾಸಿನ ನೆರವು ನೀಡಲು ಅಮೆರಿಕ ಸೆ.8ರಂದು ಅನುಮೋದನೆ ನೀಡಿತ್ತು.

ಮೇಕೆದಾಟು: 26ರಂದು ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಇದೇ 26ರಂದು ನಿಗದಿಯಾಗಿದೆ.

ಪ್ರಕರಣದ ವಿಚಾರಣೆಯನ್ನು ಜುಲೈ 20ರಂದು ನಡೆಸಿದ್ದ ನ್ಯಾಯಮೂರ್ತಿ ಎ.ಎಂ.ಖಾನ್ವಿಲ್ಕರ್, ಅಭಯ್ ಎಸ್. ಓಕಾ ಹಾಗೂ ಜೆ.ಬಿ.ಪಾರ್ದಿವಾಲಾ ಅವರಿದ್ದ ನ್ಯಾಯಪೀಠ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಇತರರಿಗೆ ನೋಟಿಸ್ ಜಾರಿಗೊಳಿಸಿತ್ತು. 'ಪ್ರಾಧಿಕಾರವು ಡಿಪಿಆರ್ ಬಗ್ಗೆ ಚರ್ಚೆ ನಡೆಸಬಹುದು. ಆದರೆ, ಯೋಜನೆ ಕುರಿತು ಅಧಿಕೃತವಾಗಿ ಯಾವುದೇ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ನ್ಯಾಯಪೀಠ ಸೂಚಿಸಿತ್ತು. ಬಳಿಕ ಜುಲೈ 26ಕ್ಕೆ ವಿಚಾರಣೆ ಮುಂದೂಡಿತ್ತು.

ಜುಲೈ 26ರ ವಿಚಾರಣೆ ವೇಳೆ ಪ್ರಾಧಿಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ವಾದ ಮಂಡಿಸಿ, ಈ ವಿಷಯದಲ್ಲಿ ಪ್ರಮಾಣಪತ್ರ ಸಲ್ಲಿಸಲು ಕಾಲಾವಕಾಶ ಕೋರಿದ್ದ. ಬಳಿಕ ವಿಚಾರಣೆಯನ್ನು ಆಗಸ್ಟ್ 10ಕ್ಕೆ ಮುಂದೂಡಲಾಗಿತ್ತು. ಜುಲೈ ಅಂತ್ಯದಲ್ಲಿ ಎ.ಎಂ. ಖಾನ್ವಿಲ್ಕರ್ ನಿವೃತ್ತರಾಗಿದ್ದರು. ಹೀಗಾಗಿ, ಆಗಸ್ಟ್ 10ರಂದು ಅರ್ಜಿಯು ವಿಚಾರಣೆಗೆ ಬಂದಿರಲಿಲ್ಲ. ಇದೀಗ, ವಿಚಾರಣೆಯ ದಿನಾಂಕ ನಿಗದಿಯಾಗಿದೆ.

'ಕಾವೇರಿ ಜಲವಿವಾದ ನ್ಯಾಯಾಧೀಕರಣದ ಮಾರ್ಪಾಡಾಗಿರುವ ಅಂತಿಮ ತೀರ್ಪಿನ ಪ್ರಕಾರ, ಮೇಕೆದಾಟು ಯೋಜನೆಯ ಬಗ್ಗೆ ಪ್ರಾಧಿಕಾರಕ್ಕೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಈಗಾಗಲೇ ತಿಳಿಸಿದ್ದಾರೆ. ಪ್ರಾಧಿಕಾರವು ಸಾಲಿಸಿಟರ್ ಜನರಲ್ ಅವರ ಅಭಿಪ್ರಾಯವನ್ನು ಕೇಳಿತ್ತು. ಪ್ರಾಧಿಕಾರವು ಯೋಜನೆಯ ಬಗ್ಗೆ ಚರ್ಚಿಸಿ ಕೇಂದ್ರ ಜಲ ಆಯೋಗಕ್ಕೆ ವರದಿ ಸಲ್ಲಿಸಬಹುದು ಎಂದು ಮೆಹ್ತಾ ಪ್ರತಿಪಾದಿಸಿದ್ದಾರೆ.



ಸ್ವಚ್ಛತಾ ಕಾರ್ಯ ವಿಶ್ವ ನದಿ ದಿನದ ಪ್ರಯುಕ್ತ ಮಲ್ಲೇಶ್ವರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಒನ್ ಕರ್ನಾಟಕ ಬೆಟಾಲಿಯನ್‌ನ ಎನ್‌ಸಿಸಿ ಕೆಡೆಟ್‌ಗಳು ಲಾಲ್‌ಬಾಗ್‌ನ ಕೆರೆ ಸುತ್ತ ಮುತ್ತ ಪರಿಸರವನ್ನು ಸ್ವಚ್ಛಗೊಳಿಸಿದರು

ನಾವಿಕಾ ವಿರುದ್ಧದ ಎಫ್‌ಐಆರ್ ದೆಹಲಿಗೆ ವರ್ಗ

ನವದೆಹಲಿ (ಪಿಟಿಐ): ಸುದ್ದಿ ನಿರೂಪಕಿ ನಾವಿಕಾ ಕುಮಾರ್ ವಿರುದ್ಧ ದೇಶದಾದ್ಯಂತ ದಾಖಲಾಗಿದ್ದ ಎಫ್‌ಐಆರ್‌ಗಳನ್ನು ಒಗ್ಗೂಡಿಸಿ, ದೆಹಲಿ ಪೊಲೀಸರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ವರ್ಗಾಯಿಸಿದೆ. ಪ್ರವಾದಿ ಮೊಹಮ್ಮದ್ ಕುರಿತು ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದ ಟಿ.ವಿ ಚರ್ಚೆಯನ್ನು ನಾವಿಕಾ ನಿರೂಪಿಸುತ್ತಿದ್ದರು.

ಇದೇ ವೇಳೆ, 8 ವಾರಗಳವರೆಗೆ ನಾವಿಕಾ ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಹೇಳಿದೆ. ಜೊತೆಗೆ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳನ್ನು ಖುಲಾಸೆ ಮಾಡುವಂತೆ ಕೋರಿ ನಾವಿಕಾ ಅವರು ದೆಹಲಿ ಹೈಕೋರ್ಟ್‌ಗೆ ಹೋಗಬಹುದು ಎಂದು ಪೀಠ ಹೇಳಿದೆ.

ಓಣಂ ಬಂಪರ್ ಲಾಟರಿ: ಹಣದ ಸಹಾಯ ಕೇಳುವವರಿಂದ ಬೇಸತ್ತ ಅನೂಪ್

'ಯಾಕಾದರೂ ಹಣ ಗೆದ್ದೆನೋ...!'

ಪ್ರಜಾವಾಣಿ ವಾರ್ತೆ



ಅನೂಪ್

ತಿರುವನಂತಪುರ: 'ಮನೆಯಲ್ಲಿ ಇರಲು ಸಾಧ್ಯವಾಗುತ್ತಿಲ್ಲ. ಮಗನಿಗೆ ಹುಷಾರಿಲ್ಲ. ಆದರೂ ಆತನ ಜೊತೆ ಇರಲು ಆಗುತ್ತಿಲ್ಲ. ಲಾಟರಿಯನ್ನು ಗೆದ್ದಾಗ ನನಗೆ ಭಾರಿ ಸಂತೋಷವಾಗಿತ್ತು. ಆದರೆ ಈಗ, ಯಾಕಾದರೂ ಗೆದ್ದೆನೊ ಎನ್ನಿಸುತ್ತಿದೆ'.

ಇವು ಕಳೆದ ಭಾನುವಾರ ಓಣಂ ಬಂಪರ್ ಲಾಟರಿಯಲ್ಲಿ ₹25 ಕೋಟಿ ಗೆದ್ದಿರುವ ಕೇರಳದ ಆಟೊ ಚಾಲಕ ಅನೂಪ್ ಅವರ ಮಾತುಗಳು. ದೊಡ್ಡ ಮೊತ್ತದ ಬಹುಮಾನ ಗೆದ್ದಿರುವ ಅನೂಪ್ ಅವರ ಮನೆ ಮುಂದೆ ಸಕ್ಕರೆಗೆ ಇರುವೆ ಮುತ್ತಿದಂತೆ ದುಡ್ಡಿನ ಸಹಾಯ ಕೇಳಿ ಬರುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಬೇಸತ್ತಿರುವ ಅನೂಪ್ ಅವರು ಮನೆಯಿಂದ ಓಡಿ ಹೋಗಿದ್ದಾರೆ. ತಮ್ಮ ಸಹೋದರಿಯ ಮನೆಯಲ್ಲಿ, ಸ್ನೇಹಿತರ ಮನೆಯಲ್ಲಿ ಉಳಿಯುತ್ತಿದ್ದಾರೆ.

ಶುಕ್ರವಾರ ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿರುವ ಅನೂಪ್ ಅವರು, 'ನನಗೆ ಇನ್ನೂ ಹಣ ಬಂದಿಲ್ಲ ಎಂದು ಹೇಳಿದರೆ ಯಾರೂ ನಂಬುತ್ತಿಲ್ಲ. ನಾನು ಈಗ ಇರುವ ಮನೆಯನ್ನು ಬದಲಾಯಿಸಬೇಕು ಎಂದಿದ್ದೇನೆ' ಎಂದು ಹೇಳಿದ್ದಾರೆ.

ಅನೂಪ್ ಅವರ ಸಂಬಂಧಿಕರಾದ ಸೂರಜ್ ಅವರು 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ಹಣದ ಸಹಾಯ ಕೇಳಿಕೊಂಡು ಬರುತ್ತಿರುವವರಿಂದ ತಪ್ಪಿಸಿಕೊಳ್ಳಲು ದೂರದ ಊರುಗಳಿಗೆ ಅನೂಪ್ ಓಡಿಹೋಗುವಂತಾಗಿದೆ. ಆತನ ಮಗನಿಗೆ ಆರೋಗ್ಯ ಸರಿಯಿಲ್ಲ. ಆತನ ಹೆಂಡತಿ ಬಸುರಿ. ಆದರೂ ಆತನಿಗೆ ಕುಟುಂಬದೊಂದಿಗೆ ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ' ಎಂದರು. 'ಮಕ್ಕಳ ಮದುವೆಗೆ ಅಥವಾ ಚಿಕಿತ್ಸೆಗೆ, ಇಲ್ಲವೆ ಹೊಸದೊಂದು ಅಂಗಡಿ ತೆರೆಯಬೇಕು ಎಂದು ಕೆಲವರು, ಮನೆಕಟ್ಟುತ್ತಿದ್ದೇವೆ ಸಹಾಯ ಮಾಡಿ ಎಂದು ಸಹಾಯಹಸ್ತ ಕೋರಿ ಬರುತ್ತಿದ್ದಾರೆ' ಎಂದರು.

ಲಾಟರಿ ಗೆದ್ದವರಿಂದ ಹಣ ಪೋಲು: ನಿರ್ವಹಣೆಗೆ ಸರ್ಕಾರದಿಂದ ತರಬೇತಿ

ಲಾಟರಿಯಲ್ಲಿ ದೊಡ್ಡ ಮೊತ್ತದ ಬಹುಮಾನ ಗೆದ್ದವರು ಹಣವನ್ನು ಪೋಲು ಮಾಡುತ್ತಿದ್ದಾರೆ. ಆದ್ದರಿಂದ ಕೇರಳ ಸರ್ಕಾರವು ಹಣ ನಿರ್ವಹಣೆಗಾಗಿ ತರಬೇತಿ ನೀಡುತ್ತಿದೆ. ಅನೂಪ್ ಅವರು ಸದ್ಯದಲ್ಲೇ ಈ ತರಬೇತಿಗೆ ದಾಖಲಾಗಲಿದ್ದಾರೆ.

'ಲಾಟರಿ ಹಣವನ್ನು ಒಳ್ಳೆಯ ರೀತಿಯಲ್ಲಿ ಖರ್ಚು ಮಾಡು' ಎಂದು ಕಳೆದ ವರ್ಷದ ಓಣಂ ಬಂಪರ್ ಲಾಟರಿಯಲ್ಲಿ ಹಣ ಗೆದ್ದಿದ್ದ ಕೊಚ್ಚಿಯ ಆಟೊಚಾಲಕ ಜಯಪಾಲನ್ ಅವರು ಅನೂಪ್ ಅವರಿಗೆ ಎಚ್ಚರಿಕೆ ನೀಡಿದ್ದಾರೆ. ಜಯಪಾಲನ್ ಅವರು ಅಂದು ₹12 ಕೋಟಿ ಗೆದ್ದಿದ್ದರು. ತೆರಿಗೆ ಎಲ್ಲಾ ಕಡಿತಗೊಂಡು ₹7.4 ಕೋಟಿ ಅವರ ಕೈಗೆ ಸಿಕ್ಕಿತ್ತು. ಜಯಪಾಲನ್ ಅವರು ಇಂದಿಗೂ ಆಟೊ ಚಾಲಕರಾಗಿಯೇ ಕೆಲಸ ಮಾಡುತ್ತಿದ್ದಾರೆ.

ಶನಿವಾರ, ಸೆಪ್ಟೆಂಬರ್ 24, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 265 | ಪುಟ 26

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಬೇರೆ ಬೇರೆ ದೇಶಗಳಲ್ಲಿ ವಿಭಿನ್ನವಾಗಿರುವ ದೇವತೆಯ ಸ್ವರೂಪ ನಮ್ಮಲ್ಲಿ ಶಕ್ತಿಸ್ವರೂಪಿಣಿಯಾಗಿದೆ. ನವಗುಣಗಳನ್ನು ಪೂಜಿಸುವ ನವರಾತ್ರಿ ಹೆಣ್ಣಿನ ಅಸ್ಮಿತೆಯ ದ್ಯೋತಕ.



	ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
ನವರಾತ್ರಿ ಸಂಭ್ರಮ 9	58,099	17,327	₹51,740 (ಬೆಂಗಳೂರು)	₹58,900 (ಬೆಂಗಳೂರು)	81.09

ಮುರುಘಾಶ್ರೀ ಜಾಮೀನು ಅರ್ಜಿ ತಿರಸ್ಕೃತ 6

ಅ.1ರಿಂದ ವಿದ್ಯುತ್ ದರ ಪರಿಷ್ಕರಣೆ • 24 ರಿಂದ 43 ಪೈಸೆವರೆಗೆ ಏರಿಕೆ

ವಿದ್ಯುತ್: ಜನರಿಗೆ ಮತ್ತೆ ಬರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜುಲೈ ತಿಂಗಳಿನಲ್ಲಷ್ಟೇ ವಿದ್ಯುತ್ ದರ ಏರಿಕೆಯ ಬಿಸಿ ತಾಗಿಸಿಕೊಂಡಿದ್ದ ರಾಜ್ಯದ ಜನ, ಅಕ್ಟೋಬರ್ 1ರಿಂದ ಅನ್ವಯವಾಗುವಂತೆ ಪ್ರತಿ ತಿಂಗಳು ವಿದ್ಯುತ್ ಬಳಕೆಗೆ ಹೆಚ್ಚಿನ ವೆಚ್ಚ ಮಾಡಬೇಕಾಗಿದೆ.


ಇಂಧನ ಹೊಂದಾಣಿಕೆ ಶುಲ್ಕವನ್ನು (ಎಫ್‌ಎಸಿ) ಅಕ್ಟೋಬರ್ 1ರಿಂದ 2023ರ ಮಾರ್ಚ್ 31ರವರೆಗೆ ಅನ್ವಯವಾಗುವಂತೆ (6 ತಿಂಗಳ ಅವಧಿಗೆ) ಪರಿಷ್ಕರಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಆದೇಶ ಹೊರಡಿಸಿದೆ. ಹೀಗಾಗಿ, ಪ್ರತಿ ಯೂನಿಟ್‌ಗೆ 24 ಪೈಸೆಯಿಂದ 43 ಪೈಸೆಯವರೆಗೆ ಹೆಚ್ಚಿಸಿ ಆದೇಶ ನೀಡಿದೆ.

ಮೆಸ್ಕಾಂ ಎಫ್‌ಎಸಿ ಶುಲ್ಕವು ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ಮತ್ತು ಹೆಸ್ಕಾಂ ಎಫ್‌ಎಸಿ ಶುಲ್ಕವು ಹುಕ್ಕೇರಿ ಆರ್‌ಇಸಿಎಸ್ ಮತ್ತು ಏಕಸ್ ವಿಶೇಷ ಆರ್ಥಿಕ ವಲಯಕ್ಕೂ ಅನ್ವಯವಾಗುತ್ತದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಇದೇ ವರ್ಷದ ಜುಲೈ ತಿಂಗಳಿನಲ್ಲಿ 31 ಪೈಸೆಯಷ್ಟು ಬೆಸ್ಕಾಂಗೆ ಅನ್ವಯಿಸುವಂತೆ ಹೆಚ್ಚಿಸಲಾಗಿತ್ತು. ಮೆಸ್ಕಾಂ ವ್ಯಾಪ್ತಿಯಲ್ಲಿ 21 ಪೈಸೆ, ಸೆಸ್ಕ್ 19 ಪೈಸೆ, ಹೆಸ್ಕಾಂ 27 ಮತ್ತು ಜೆಸ್ಕಾಂ ವ್ಯಾಪ್ತಿಯಲ್ಲಿ 26 ಪೈಸೆಗಳಷ್ಟು ಹೆಚ್ಚಿಸಲಾಗಿತ್ತು.

ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರ (ಸಿಜಿಎಸ್), ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ಮತ್ತು ಉಡುಪಿಯ ಶಾಖೋತ್ಪನ್ನ ವಿದ್ಯುತ್ ಘಟಕದ (ಯುಪಿಸಿಎಲ್) ಮೂಲಕ ಎಲ್ಲ ಎಸ್ಕಾಂಗಳು ವಿದ್ಯುತ್ ಖರೀದಿಸುತ್ತಿವೆ.

ಎಷ್ಟು ಹೆಚ್ಚಳ
(ಪ್ರತಿ ಯೂನಿಟ್‌ಗೆ ಪೈಸೆ)



> **ಏಳು ವರ್ಷಗಳಿಂದಲೂ ಇಂಧನ ಹೊಂದಾಣಿಕೆ ಶುಲ್ಕ ಪಡೆಯುವ ವ್ಯವಸ್ಥೆ ಇದೆ. ಮೂರು ತಿಂಗಳಿಗೊಮ್ಮೆ ಪರಿಷ್ಕರಿಸಲಾಗುತ್ತಿದೆ. ಕಲ್ಲಿದ್ದಲು ದರ ಹೆಚ್ಚಳದಿಂದ ಕೆಇಆರ್‌ಸಿ ಈ ಆದೇಶ ನೀಡಿದೆ**
> **ವಿ. ಸುನೀಲ್ ಕುಮಾರ್,** ಇಂಧನ ಸಚಿವ

ಕಲ್ಲಿದ್ದಲು ದರ ಗಣನೀಯವಾಗಿ ಏರಿದ್ದರಿಂದ ಎಫ್‌ಎಸಿ ಹೆಚ್ಚಿಸಲಾಗಿದೆ. ಹೀಗಾಗಿ ವೆಚ್ಚವು ಯೂನಿಟ್‌ಗೆ 48ರಿಂದ 86 ಪೈಸೆಯಷ್ಟು ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2022ರ ಏಪ್ರಿಲ್‌ನಿಂದ ಜೂನ್‌ವರೆಗೆ ₹ 643 ಕೋಟಿಯಷ್ಟು ವಿದ್ಯುತ್ ಖರೀದಿ ವೆಚ್ಚ ಹೆಚ್ಚಳವಾಗಿದ್ದು, 80 ಪೈಸೆ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕವನ್ನು ವಸೂಲಿ ಮಾಡಲು ಅವಕಾಶ ನೀಡುವಂತೆ ಕೋರಿ ಕೆಇಆರ್‌ಸಿಗೆ ಬೆಸ್ಕಾಂ ಅರ್ಜಿ ಸಲ್ಲಿಸಿತ್ತು.

ಇದೇ ರೀತಿ, 55 ಪೈಸೆಯಷ್ಟು ಹೆಚ್ಚು ಶುಲ್ಕ ಪಡೆಯಲು ಮೆಸ್ಕಾಂ, 70 ಪೈಸೆಯಷ್ಟು ಹೆಚ್ಚಿಸುವಂತೆ ಸೆಸ್ಕ್, 81 ಪೈಸೆ ಹೆಚ್ಚಿಸುವಂತೆ ಹೆಸ್ಕಾಂ ಮತ್ತು 58 ಪೈಸೆ ಹೆಚ್ಚಿಸುವಂತೆ ಜೆಸ್ಕಾಂ ಅರ್ಜಿ ಸಲ್ಲಿಸಿದ್ದವು. ಒಟ್ಟಾರೆಯಾಗಿ ₹1244 ಕೋಟಿಗೂ ಹೆಚ್ಚು ಖರೀದಿ ವೆಚ್ಚದಲ್ಲಿ ಏರಿಕೆಯಾಗಿದೆ ಎಂದು ಎಸ್ಕಾಂಗಳು ಪ್ರಸ್ತಾವದಲ್ಲಿ ತಿಳಿಸಿದ್ದವು.

ಮೂರು ತಿಂಗಳಿಗೊಮ್ಮೆ ಇಂಧನ ಹೊಂದಾಣಿಕೆ ಶುಲ್ಕವನ್ನು ಪರಿಷ್ಕರಿಸಲಾಗುತ್ತದೆ. ಆದರೆ, ಗ್ರಾಹಕರಿಗೆ ಹೆಚ್ಚುವರಿ ಹೊರೆ ತಪ್ಪಿಸುವ ಉದ್ದೇಶದಿಂದ ಈಗ ಶುಲ್ಕವನ್ನು ಆರು ತಿಂಗಳಿಗೆ ಅನ್ವಯಿಸುವಂತೆ ಪರಿಷ್ಕರಿಸಲಾಗಿದೆ.

ಇಂಧನ ವ್ಯತ್ಯಾಸ ದರಗಳಿಗೆ ಸಂಬಂಧಿಸಿದಂತೆ 'ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳ ನಿಯಮಗಳು–2013'ರ ಅನ್ವಯ ಕೆಇಆರ್‌ಸಿಗೆ ಮೂರು ತಿಂಗಳಿಗೊಮ್ಮೆ ಎಲ್ಲ ಎಸ್ಕಾಂಗಳು ಅರ್ಜಿ ಸಲ್ಲಿಸುತ್ತವೆ. ಅರ್ಜಿಯನ್ನು ಆಯೋಗವು ಪರಾಮರ್ಶಿಸಿ, ಇಂಧನ ವ್ಯತ್ಯಾಸ ದರವನ್ನು ವಸೂಲಿ ಮಾಡಲು ಅಥವಾ ಕಡಿತಗೊಳಿಸಲು ಆದೇಶಿಸುತ್ತದೆ. ಕಲ್ಲಿದ್ದಲು ಹಾಗೂ ತೈಲ ಬೆಲೆ ಹೆಚ್ಚಾದಾಗ ಹೊಂದಾಣಿಕೆ ವೆಚ್ಚ ಹೆಚ್ಚಾಗುತ್ತದೆ. ಕಡಿಮೆಯಾದಾಗ ವೆಚ್ಚ ಇಳಿಯುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಇಟಿ: 29ಕ್ಕೆ ಪರಿಷ್ಕೃತ ರ‍್ಯಾಂಕಿಂಗ್ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಸಿಇಟಿ ರ‍್ಯಾಂಕಿಂಗ್ ಬಿಕ್ಕಟ್ಟು ಬಗೆಹರಿಸಲು ರಾಜ್ಯ ಸರ್ಕಾರ ನೇಮಿಸಿದ್ದ ಸಮಿತಿಯ ವರದಿಯನ್ನು ಹೈಕೋರ್ಟ್ ಒಪ್ಪಿಕೊಂಡಿದ್ದು, ಪರಿಷ್ಕೃತ ಪಟ್ಟಿಯನ್ನು ಸೆ.29ರಂದು ಬಿಡುಗಡೆ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಅಕ್ಟೋಬರ್ 3ರಿಂದಲೇ ಪ್ರವೇಶಕ್ಕೆ ಮೊದಲ ಸುತ್ತಿನ ಕೌನ್ಸೆಲಿಂಗ್ ಆರಂಭಿಸಲಾಗುವುದು. ಎಲ್ಲ ಪ್ರಕ್ರಿಯೆಗಳನ್ನೂ ಕಾಲಮಿತಿಯ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಭರವಸೆ ವ್ಯಕ್ತಪಡಿಸಿದರು.

ಈ ಬಾರಿಯೂ ಸಿಇಟಿ ಪರೀಕ್ಷೆ ಬರೆದಿದ್ದ ಹಿಂದಿನ ವರ್ಷದ ವಿದ್ಯಾರ್ಥಿಗಳು ಪಿಯು ಅಂಕ ಪರಿಗಣಿಸುವಂತೆ ಕೋರ್ಟ್ ಮೊರೆ ಹೋಗಿದ್ದರು. ಸಮಸ್ಯೆ ಬಗೆಹರಿಸಲು ಸಮನ್ವಯ ಸೂತ್ರ ರೂಪಿಸುವಂತೆ ಕೋರ್ಟ್ ಸೂಚಿಸಿತ್ತು. ಹಾಗಾಗಿ, ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಬಿ.ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ಐವರ ಸಮಿತಿ ರಚಿಸಿ, ಸಮಿತಿಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು. ನ್ಯಾಯಾಲಯವು ಸಮಿತಿ ಕೊಟ್ಟ ವರದಿ ಪುರಸ್ಕರಿಸಿದೆ.

ಇನ್ನೊಂದು ಸುದ್ದಿ 10

ಪರಿಶಿಷ್ಟರಿಗೆ ಮೀಸಲು: ಸದ್ಯವೇ ಸರ್ವಪಕ್ಷ ಸಭೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಹೆಚ್ಚಿಸುವ ಸಂಬಂಧ ನ್ಯಾಯಮೂರ್ತಿಗಳಾದ ಎಚ್.ಎನ್. ನಾಗಮೋಹನದಾಸ್ ಮತ್ತು ಸುಭಾಷ್ ಅಡಿ ಅವರ ವರದಿಗಳು ಬಂದಿದ್ದು, ಈ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಒಂದು ವಾರದೊಳಗೆ ಸರ್ವಪಕ್ಷಗಳ ಸಭೆ ನಡೆಸುತ್ತೇನೆ' ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

10

ಬಿಎಸ್‌ವೈ ವಿರುದ್ಧ ತನಿಖೆ: ಸುಪ್ರೀಂ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆಯೊಂದರ ಕಾಮಗಾರಿಯ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದ ಮೇಲೆ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನ ತನಿಖೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.



ತನಿಖೆಗೆ ಅನುಮತಿ ನೀಡಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಯಡಿಯೂರಪ್ಪ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ನ್ಯಾಯಪೀಠವು, ದೂರುದಾರರಾದ ಟಿ.ಜೆ. ಅಬ್ರಾಹಂ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

10ನೇ ಪುಟ ನೋಡಿ

'ಅನಂತಸ್ವಾಮಿ ಧಾಟಿಯಲ್ಲೇ ನಾಡಗೀತೆ'

ಬೆಂಗಳೂರು: ಹೆಸರಾಂತ ಸುಗಮ ಸಂಗೀತ ಗಾಯಕ ದಿವಂಗತ ಮೈಸೂರು ಅನಂತಸ್ವಾಮಿ ರಾಗ ಸಂಯೋಜಿಸಿದ್ದ ಧಾಟಿಯಲ್ಲಿಯೇ ಕುವೆಂಪು ವಿರಚಿತ ನಾಡಗೀತೆ 'ಜಯಭಾರತ ಜನನಿಯ ತನುಜಾತೆ'ಯನ್ನು ಒಂದಕ್ಷರ ಬಿಡದಂತೆ ಹಾಡುವುದಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ.

ನಾಡಗೀತೆ ಹಾಡುವ ಧಾಟಿ ಯಾವುದಿರಬೇಕು ಹಾಗೂ ಪೂರ್ಣ ಪದ್ಯವನ್ನು ಉಳಿಸಿಕೊಳ್ಳಬೇಕೇ ಎಂಬ ತಗಾದೆಯನ್ನು ಇತ್ಯರ್ಥಪಡಿಸಲು ರಾಜ್ಯ ಸರ್ಕಾರವು ಹಿರಿಯ ಸಂಗೀತ ವಿದೂಷಿ ಎಚ್.ಆರ್.ಲೀಲಾವತಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. 'ಯಾವುದೇ ಆಲಾಪ ಮತ್ತು ಪುನರಾವರ್ತನೆ ಇಲ್ಲದಂತೆ ಎರಡೂವರೆ ನಿಮಿಷಗಳಲ್ಲಿ ನಾಡಗೀತೆ ಹಾಡಲು ಸಾಧ್ಯ' ಎಂದು ಸಮಿತಿ ವರದಿ ನೀಡಿತ್ತು. ಇದನ್ನು ಆಧರಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುಮೋದನೆ ನೀಡಿದ್ದಾರೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ




ಒತ್ತುವರಿ: ಫೆರ್ನ್ಸ್ ಸಿಟಿಯಲ್ಲಿ ಸರ್ವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದ ದೊಡ್ಡನೆಕ್ಕುಂದಿಯಲ್ಲಿರುವ ಫೆರ್ನ್ಸ್ ಸಿಟಿ ಆವರಣದಲ್ಲಿ ಒತ್ತುವರಿಯಾಗಿರುವ ರಾಜಕಾಲುವೆಯನ್ನು ಭೂಮಾಪಕರು ಶುಕ್ರವಾರ ಸರ್ವೆ ನಡೆಸಿದರು.

ಈ ಸರ್ವೆ ಪೂರ್ಣಗೊಂಡ ಬಳಿಕ ತೆರವು ಕಾರ್ಯಾಚರಣೆ ನಡೆಯಲಿದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಿಳಿಸಿದೆ.

ಪಾಪಯ್ಯ ರೆಡ್ಡಿ ಲೇಔಟ್‌ನಲ್ಲಿ ನಾಲ್ಕು ಅಂತಸ್ತಿನ ಕಟ್ಟಡ ಮತ್ತು ಸರ್ಜಾಪುರ ರಸ್ತೆಯ ಗ್ರೀನ್ ವುಡ್ ರೆಸಿಡೆನ್ಸಿ ಬಳಿ ಸ್ಲ್ಯಾಬ್ ತೆರವು ಕಾರ್ಯಾಚರಣೆ ಅಕ್ಕಪಕ್ಕದ ಕಟ್ಟಡಗಳಿಗೆ ತೊಂದರೆ ಆಗದಂತೆ ನಡೆಯುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮಹದೇವಪುರದಲ್ಲಿರುವ ಫೆರ್ನ್ಸ್ ಸಿಟಿ ಆವರಣದಲ್ಲಿ ಒತ್ತುವರಿಯಾಗಿರುವ ರಾಜಕಾಲುವೆಯನ್ನು ಭೂಮಾಪಕರು ಶುಕ್ರವಾರ ಸರ್ವೆ ನಡೆಸಿದರು

‘ಕ್ಲಬ್ ನಿರ್ಧಾರ ಹಿಂಪಡೆಯಲು ಆಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಂಪರಿಕ ಕಟ್ಟಡವಾದ ಬಾಲಬ್ರೂಯಿ ಅತಿಥಿ ಗೃಹವನ್ನು ಶಾಸಕರ ಮೋಜು-ಮಸ್ತಿಗಾಗಿ ದುರ್ಬಳಕೆ ಮಾಡುವ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿಂಪಡೆಯಬೇಕು ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಬ್ರಿಜೇಶ್ ಕಾಳಪ್ಪ ಆಗ್ರಹಿಸಿದರು.

‘ಬಾಲಬ್ರೂಯಿ ಅತಿಥಿ ಗೃಹವನ್ನು ಸಾಂವಿಧಾನಿಕ ಕ್ಲಬ್ ಆಗಿ ಮಾರ್ಪಾಡು ಮಾಡುವ ಪ್ರಸ್ತಾವನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗಷ್ಟೇ ಅನುಮೋದನೆ ನೀಡಿದ್ದಾರೆ. ಇದರಿಂದಾಗಿ ಬರೋಬ್ಬರಿ 172 ವರ್ಷಗಳ ಇತಿಹಾಸವಿರುವ ಕಟ್ಟಡದ ಸ್ಥಳದಲ್ಲಿ ಶಾಸಕರಿಗೆ ಮೋಜುಮಸ್ತಿ ಮಾಡಲು ಕ್ಲಬ್ ನಿರ್ಮಿಸುವುದರಿಂದ ಆ ಸ್ಥಳದ ಪಾವಿತ್ರ್ಯಕ್ಕೆ ಧಕ್ಕೆಯಾಗಲಿದೆ. ಅಲ್ಲಿರುವ 200 ಮರಗಳಿಗೂ ಕೊಡಲಿ ಏಟು ಬೀಳಲಿದ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

‘ವಿಧಾನಸೌಧದಲ್ಲಿ 8 ಸಭಾಂಗಣ ಮತ್ತು ಒಂದು ಹುಲ್ಲು ಹಾಸಿನ ಅಂಗಳವಿದೆ. ಶಾಸಕರ ಭವನದಲ್ಲಿ 5 ಸಭಾಂಗಣಗಳಿದ್ದು, ಶಾಸಕರಿಗೆ ಕ್ಲಬ್ ಚಟುವಟಿಕೆಗಳನ್ನು ನಡೆಸಲು ಇವು ಸಾಕಾಗುತ್ತಿಲ್ಲವೇ? ಸಾಂವಿಧಾನಿಕ ಕ್ಲಬ್ ಆರಂಭಿಸಿದರೆ ಅದರಲ್ಲಿ ಯಾವ ಚಟುವಟಿಕೆಗಳನ್ನು ನಡೆಸಲಾಗುತ್ತದೆ‘ ಎಂದು ಅವರು ಪ್ರಶ್ನಿಸಿದರು.

27ಕ್ಕೆ ಸೇಂಟ್ ಜೋಸೆಫ್ಸ್ ವಿ.ವಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೇಂಟ್ ಜೋಸೆಫ್ಸ್ ಕಾಲೇಜು ವಿಶ್ವವಿದ್ಯಾಲಯವಾಗಿ ಮೇಲ್ದ-ರ್ಜೆಗೇರಿದ್ದು, ಸೆಪ್ಟೆಂಬರ್ 27ರಂದು ಸಂಜೆ 4 ಗಂಟೆಗೆ ರಾಷ್ಟ್ರಪತಿ ದ್ರೌಪದಿ ಮರ್ಮು ಉದ್ಘಾಟನೆ ಮಾಡಲಿದ್ದಾರೆ’ ಎಂದು ವಿ.ವಿಯ ಕುಲಪತಿ ಡಾ. ವಿಕ್ಟರ್ ಲೋಬೊ ಎಸ್.ಜೆ. ಮಾಹಿತಿ ನೀಡಿದರು.

‘ಸೇಂಟ್ ಜೋಸೆಫ್ಸ್ ಕಾಲೇಜು 2022ರಲ್ಲಿ ರಾಷ್ಟ್ರೀಯ ಉಚ್ಚ ಶಿಕ್ಷಣ ಅಭಿಯಾನ 2.0 (ರೂಸಾ) ಅಡಿ ವಿಶ್ವ-ವಿದ್ಯಾಲಯದ ಸ್ಥಾನಮಾನ ಪಡೆದುಕೊಂಡಿದೆ. ರಾಜ್ಯ ಶಾಸಕಾಂಗವು ವಿಶ್ವವಿ-ದ್ಯಾಲಯ ಮಸೂದೆ ಜಾರಿಗೆ ತಂದಿದ್ದು, ರಾಜ್ಯ ಪಾಲರು ಅನುಮೋದನೆ ನೀಡಿದ್ದಾರೆ’ ಎಂದು ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈ ಸಂಸ್ಥೆಯಲ್ಲಿ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಸೇರಿ 8,500 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. 34 ಪದವಿ, 16 ಸ್ನಾತಕೋತ್ತರ ಪದವಿ ಕೋರ್ಸ್‌ಗಳಿವೆ’ ಎಂದು ತಿಳಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಕ್ರೈಸ್ತ ಧರ್ಮಗುರು ಡಾ.ಪೀಟರ್ ಮಚಾಡೊ, ವಿವಿಯ ಕುಲಾಧಿಪತಿ ಫಾ.ಡೈನಿಸಿಯಸ್ ವಾಸ್ ಎಸ್.ಜೆ. ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಗೃಹ ನಿರ್ಮಾಣ ಸಹಕಾರ ಸಂಘದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿ-ದ್ಯಾಲಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2021-22ನೇ ಸಾಲಿನ ವಾರ್ಷಿಕ ಸಭೆ ಇದೇ 24ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಮಹಾಲಿಂಗಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಜ್ಞಾನಭಾರತಿ ಆವರಣದ ಡಾ. ಎಚ್.ಎನ್. ಸಭಾಂಗಣದಲ್ಲಿ ಸಭೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಚನ ನವರಾತ್ರಿ

ಬೆಂಗಳೂರು: ಈ ಬಾರಿಯ ನವರಾ-ತ್ರಿಯನ್ನು ವಚನ ನವರಾತ್ರಿ ಹಾಗೂ ವಚನಕಾರ್ತಿಯರ ಉತ್ಸವವನ್ನಾಗಿ ವಚನಜ್ಯೋತಿ ಬಳಗ ಆಚರಿಸುತ್ತಿದೆ.

ಸೆ.26ರಿಂದ ಅ.4ರವರೆಗೆ ಪ್ರತಿದಿನ ಸಂಜೆ 5ಕ್ಕೆ ಜ್ಞಾನಭಾರತಿ ಸಮೀಪದ ದೊಡ್ಡಬಸ್ತಿ ರಸ್ತೆಯಲ್ಲಿರುವ ಕಲ್ಯಾಣ ಪಟ್ಟಣದ ಪದ್ಮಜ ಪ್ರಸನ್ನ ಮನೆಯಂ-ಗಳದಲ್ಲಿ ವಚನಕಾರ್ತಿಯರ ಸ್ಮರಣೆ, ಪ್ರಣಾಮಗಳೊಂದಿಗೆ ವಚನ ನವರಾತ್ರಿ ಆಚರಿಸಲಾಗುವುದು ಎಂದು ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದ್ದಾರೆ. ಅ.5ರಂದು ಕಲ್ಯಾಣ ಪಟ್ಟಣದ ಬಸವ ಮಂಟಪದಿಂದ ವಚನ ವಿಜಯಯಾತ್ರೆ ಹೊರಟು ಪಟ್ಟಣದ ರಾಜಬೀದಿಗಳಲ್ಲಿ ಸಂಚರಿಸಲಿದೆ. ಬಸವಣ್ಣರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಮುಕ್ತಾಯಗೊಳ್ಳುವುದು. ಮಾಹಿತಿಗೆ 98451 84267.

ಭತ್ಯೆ ಪರಿಷ್ಕರಣೆ

ಬೆಂಗಳೂರು: ಸರ್ಕಾರಿ ಅಧಿಕಾರಿ/ ನೌಕರರನ್ನು ಸ್ವತಂತ್ರ ಪ್ರಭಾರದಲ್ಲಿ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆ ಬೇರೊಂದು ಹುದ್ದೆಯಲ್ಲಿ ಹೆಚ್ಚಿನ ಪ್ರಭಾರದಲ್ಲಿರಿಸಿದ ಸಂದರ್ಭದಲ್ಲಿ ಅಂತಹವರ ಮೂಲ ವೇತನದ ಶೇ 15 ರ ದರದಲ್ಲಿ ಪ್ರಭಾರ ಭತ್ಯೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

ರಾಮಯ್ಯ ಕಾಲೇಜು: ಹೈಕೋರ್ಟ್ ಮಧ್ಯಂತರ ಆದೇಶ

ಬೆಂಗಳೂರು: 'ಮುಂದಿನ ಆದೇಶ ನೀಡುವ ತನಕ ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಅಧೀನ ಕಾಲೇಜಾಗಿ ತನ್ನ ಚಟುವಟಿಕೆ ಮುಂದುವರಿಸಬಹುದು. ಈ ದಿಸೆಯಲ್ಲಿ ಸರ್ಕಾರದ ಆದೇಶ ಅಡ್ಡಿ ಉಂಟು ಮಾಡುವುದಿಲ್ಲ' ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ವೈದ್ಯಕೀಯ ಶಿಕ್ಷಣ ಇಲಾಖೆ ಆದೇಶ ಪ್ರಶ್ನಿಸಿ, ಗೋಕುಲ ಎಜುಕೇಷನ್ ಫೌಂಡೇಷನ್ (ವೈದ್ಯಕೀಯ) ಮುಖ್ಯ ಕಾರ್ಯನಿರ್ವಾಹಕ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್, ಎಂ.ಎಸ್.ರಾಮಯ್ಯ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

'ಚರ್ಮ ಗಂಟು ರೋಗ ಚಿಕಿತ್ಸೆಗೆ ಕ್ರಮ'

ಬೆಂಗಳೂರು: ಚರ್ಮ ಗಂಟು (ಲಂಪಿ ಸ್ಕಿನ್) ರೋಗದಿಂದ ಬಳಲುವ ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಹಾಗೂ ಈ ಸೋಂಕಿನಿಂದ ಮೃತಪಡುವ ಜಾನುವಾರು ಮಾಲೀಕರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿರೂಪಾಕ್ಷಪ್ಪ ಬಳ್ಳಾರಿ, 'ಹಲವು ಜಿಲ್ಲೆಗಳಲ್ಲಿ ಚರ್ಮ ಗಂಟು ರೋಗಕ್ಕೆ ಜಾನುವಾರುಗಳು ಸಾಯುತ್ತಿವೆ. ಅವುಗಳ ಮಾಲೀಕರಿಗೆ ಪರಿಹಾರವೂ ಸಿಗುತ್ತಿಲ್ಲ. ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ರೋಗದಿಂದ ಬಳಲುವ ಜಾನುವಾರು ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ರೋಗ ನಿಯಂತ್ರಣಕ್ಕೆ ಲಸಿಕೆಯನ್ನೂ ಹಾಕಲಾಗುತ್ತಿದೆ' ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಉತ್ತರಿಸಿದರು. ಪರಿಹಾರ ನೀಡುವ ಕುರಿತು ಪ್ರಕಟಿಸಿಲ್ಲ ಎಂದು ಸಭಾಧ್ಯಕ್ಷರ ಪೀಠದ ಎದುರು ಧರಣಿಗೆ ಮುಂದಾದ ವಿರೂಪಾಕ್ಷಪ್ಪ ಅವರನ್ನು ಸಿ.ಎಂ. ಸಮಾಧಾನ ಪಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗ, ಆರ್‌ಆರ್ ನಗರ ವಲಯ,
ನಂ. 144, 2ನೇ ಮುಖ್ಯರಸ್ತೆ, ಜಗಜ್ಯೋತಿ ಬಡಾವಣೆ, ಬೆಂಗಳೂರು– 560 056.

ಸಂ: ಕಾಪಾಅ/ಕೆಂ/ಟೆಂಡರ್/12/2022–23 ದಿನಾಂಕ: 23.09.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಚನ್ನನಾಯಕನ ಪಾಳ್ಯ ಮತ್ತು ತಿಪ್ಪೇನಹಳ್ಳಿ ಸಮುದಾಯ ಭವನಕ್ಕೆ ಕುರ್ಚಿಗಳು, ಟೇಬಲ್‌ಗಳು ಮತ್ತು ಅಡಿಗೆ ಪಾತ್ರೆಗಳನ್ನು ಒದಗಿಸುವುದು ಹಾಗೂ ಇತರ ಕಾಮಗಾರಿಗಳು, Gazebo ನಿರ್ಮಾಣ ಕಾಮಗಾರಿ ಮತ್ತು ದೊಡ್ಡಬಿದರಕಲ್ಲು ವಾರ್ಡ್ ಹೇರೋಹಳ್ಳಿ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಉದ್ಯಾನವನಗಳಿಗೆ ಜಿಮ್ ಸಲಕರಣೆಗಳನ್ನು ಒದಗಿಸುವುದು (ಪ್ಯಾಕೇಜ್–3 ಕಾಮಗಾರಿಗಳು).	400/–	6,00,000/–

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ:27.09.2022ರ ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆಯ ದಿನಾಂಕ : 30.09.2022ರ ಮಧ್ಯಾಹ್ನ 3.00 ಗಂಟೆಗೆ. 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07.10.2022ರ ಸಂಜೆ 4.00 ಗಂಟೆಯವರೆಗೆ. 4) ಬಿಡ್‌ಗಳನ್ನು ತೆರೆಯುವ ದಿನಾಂಕ: 10.10.2022ರ ಸಂಜೆ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ.

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ
EMPLOYEES' PROVIDENT FUND ORGANISATION

Regional Office, Rajarajeshwari Nagar
Rajarajeshwari Regency, No.570, 26th Cross,
Ideal Home Co-op Society Layout, Bangalore-560098
Tele: 080-29621933
Email: ro.rrnagar@epfindia.gov.in Website: www.epfindia.gov.in

No./BG/MRD/comp/2022-23 Date: 19/09/2022

SUBSTITUTED SUMMONS

In the matter of proceedings under sections (7A/14B/7Q) of the Employees' Provident Fund and Miscellaneous Provision Act, 1952. Whereas, an enquiry against the following establishments under section 7A of the Act for non-payment of statutory dues was initiated.

And whereas, the Department has sent the notices to the establishments as well as to the employers residential address, however the notices got undelivered. Now, therefore notice is hereby given to the employers in relation to the below mentioned establishments and are directed to appear before the Assessing Officer on or before **29.09.2022** at the address mentioned above.

Sl. No.	ESTABLISHMENT CODE	ESTABLISHMENT	INQUIRY UNDER SECTION
1	BGMRD0057008000	EVANGEL SOFT PVT LTD,	7A
2	BGMRD2259654000	DASA LABS PRIVATE LIMITED	7A
3	BGMRD1715777000	L T ENTERPRISES	7A
4	BGMRD0057760000	BUNT SOLAR INDIA PVT LTD	7A
5	BGMRD2153473000	PHOTANA HALLI DODDA RAJE GOWDA KUMARI	7A
6	BGMRD1685163000	SUN LITE SERVICES	7A
7	BGMRD0057273000	UNIVERSAL URETHANES	7A
8	BGMRD0057291000	SRI RAM ENGINEERS	14B/7Q
9	BGMRD0042219000	MUNIYAPPA ENTERPRISES	14B/7Q
10	BGMRD1446597000	SRI CKR ENTERPRISES	14B/7Q
11	BGMRD0030132000	GENIAL GROUPS	14B/7Q
12	BGMRD0025006000	V B ENTERPRISES	14B/7Q
13	BGMRD0025725000	PARVATHI METAL WORKS	14B/7Q
14	BGMRD1481354000	MEGABOUND (INDIA) PRIVATE LIMITED	14B/7Q
15	BGMRD1603135000	M SEWA SOFTWARE SOLUTION PVT LTD	14B/7Q
16	BGMRD0018898000	CRYSTAL GRANITE & MARBLE PVT LTD	14B/7Q

Any person having information about the whereabouts of the establishment and/or employer of the establishments mentioned above, may send the information by post or in person to the Employees' Provident Fund Organization at the address mentioned above, on or before **29.09.2022.** In case, no information is received or none appears the inquiry shall be concluded on ex-parte.

Sd/- **(RAJESH CHANDRA B)**
Regional PF Commissioner-II
RO, Rajarajeshwari Nagar, Bengaluru.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃಹತ್ ನೀರು ಕಾಲುವೆ,
ರಾ.ರಾ. ನಗರ ವಲಯ, 9ನೇ ಮಹಡಿ ವಾಣಿಜ್ಯ ಸಂಕೀರ್ಣ,
ಜಯನಗರ 4ನೇ ಬ್ಲಾಕ್, ಬೆಂಗಳೂರು.

ಸಂಖ್ಯೆ:ಕಾಪಾಅ/ಬೃನೀಕಾ/ರಾರಾನ/ಟೆಂಡರ್/05/2022–23 ದಿನಾಂಕ: 22.09.2022

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) ದ್ವಿಲಕೋಟೆ ಪದ್ಧತಿ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಬೃ.ನೀ.ಕಾ–ರಾ.ರಾನಗರ ವಲಯ), ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಸೇವೆಗಳಿಗಾಗಿ ಹೆಸರಾಂತ ಸಲಹೆಗಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ. ಈ ಕೆಳಕಂಡ ಕಾಮಗಾರಿಗಳ ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಸಲಹಾಸೇವೆಗಳನ್ನು ಒದಗಿಸುವುದು.

ಕಾಮಗಾರಿಗಳ ಹೆಸರು	ಯೋಜನೆಯ ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ರಾ.ರಾ.ನಗರ ವಲಯದಲ್ಲಿ ವಿವಿಧೆಡೆ ಹರಡಿಕೊಂಡಿರುವ ಬೃಹತ್ ನೀರು ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಎಲ್ಲಾ ಸಂಬಂಧಿತ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. ಪಿಎಂಸಿ ಪ್ಯಾಕೇಜ್–01 (ಕ್ರಿಯಾ ಯೋಜನೆ ಸಂಖ್ಯೆ. 326, 327, 331, 332, 335, 336, 338, 343)	4025.00	81,000/-
2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ರಾ.ರಾ.ನಗರ ವಲಯದಲ್ಲಿ ವಿವಿಧೆಡೆ ಹರಡಿಕೊಂಡಿರುವ ಬೃಹತ್ ನೀರು ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಎಲ್ಲಾ ಸಂಬಂಧಿತ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. ಪಿಎಂಸಿ ಪ್ಯಾಕೇಜ್–02 (ಕ್ರಿಯಾ ಯೋಜನೆ ಸಂಖ್ಯೆ. 328, 329, 333, 348)	4000.00	80,000/-
2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ರಾ.ರಾ.ನಗರ ವಲಯದಲ್ಲಿ ವಿವಿಧೆಡೆ ಹರಡಿಕೊಂಡಿರುವ ಬೃಹತ್ ನೀರು ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಎಲ್ಲಾ ಸಂಬಂಧಿತ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. ಪಿಎಂಸಿ ಪ್ಯಾಕೇಜ್–03 (ಕ್ರಿಯಾ ಯೋಜನೆ ಸಂಖ್ಯೆ. 330, 334, 337, 339, 340, 341, 342, 344, 345, 346, 347)	4575.00	92,000/-

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ಇ–ಪ್ರೊಕ್ ವೆಬ್‌ಸೈಟ್‌–ನಿಂದ ದಿನಾಂಕ **23.09.2022**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ **26.09.2022** ರ ಸಂಜೆ **4:00** ಗಂಟೆಯಿಂದ ನಡೆಸಲಾಗುವುದು. (3) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **01.10.2022**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **03.10.2022** ರ ಸಂಜೆ **4:30** ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೃ.ನೀ.ಕಾ, ರಾ.ರಾ.ನಗರ ವಲಯ

ಕಾರ್ಯಪಾಲಕ ಅಭಿಯಂತರ ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ

ಸಂ:ಕಾಇಂ:ಗ್ರಾ.ಕು.ನೀ&ನೈವಿ:ಕೋ:ಕಿ.ಇಂ/ಕೋಲಾರ:2022–23/ ದಿನಾಂಕ:22.09.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 22/2022–23 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ಕೋಲಾರ ರವರಿಂದ ಅರ್ಹ ಸರಬರಾಜುದಾರರ ಮೂಲಕ ದ್ವಿ–ಲಕೋಟೆ ಮೂಲಕ "ಕೆ.ಜಿ.ಎಫ್. ತಾಲ್ಲೂಕಿನ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣ ಕಾಮಗಾರಿಗಳಿಗೆ" ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಸಾಮಾನ್ಯ ಹಾಗೂ ತಾಂತ್ರಿಕ ಷರತ್ತುಗಳನ್ನು ಒಳಗೊಂಡ ಟೆಂಡರ್ ಡಾಕ್ಯೂಮೆಂಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, **www.eproc.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08152–222331 ನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (1) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **06.10.2022 Time: 17.30 ಗಂಟೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.10.2022 Time: 11.00 ಗಂಟೆ.** (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.10.2022 Time: 11.00 ಗಂಟೆ.** (1) ಕಾಮಗಾರಿ ಹೆಸರು: **ಕೆ.ಜಿ.ಎಫ್. ತಾಲ್ಲೂಕಿನ 06 ಜನ ವಸತಿಗಳಲ್ಲಿ ಮಿನಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿ. ಪ್ಯಾಕೇಜ್: ಕೆ.ಎಲ್.ಆರ್/ಕೆ.ಜಿ.ಎಫ್–01 ಇಂಡೆಂಟ್ ನಂ.44187 2ನೇ ಕರೆ.** ಒಟ್ಟು ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **35.55.** ಇಎಂಡಿ: **71100/–.** ಮುಕ್ತಾಯದ ದಿನಾಂಕ: **02 ತಿಂಗಳು.** (2) ಕಾಮಗಾರಿ ಹೆಸರು: **ಕೆ.ಜಿ.ಎಫ್. ತಾಲ್ಲೂಕಿನ 02 ಜನ ವಸತಿಗಳಲ್ಲಿ ಮಿನಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿ. ಪ್ಯಾಕೇಜ್: ಕೆ.ಎಲ್.ಆರ್/ಕೆ.ಜಿ.ಎಫ್–01 ಇಂಡೆಂಟ್ ನಂ.44185 (ಪರಿಶಿಷ್ಟ ಜಾತಿ ಮೀಸಲಾತಿ) 2ನೇ ಕರೆ.** ಒಟ್ಟು ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **14.28.** ಇಎಂಡಿ: **17850/–.** ಮುಕ್ತಾಯದ ದಿನಾಂಕ: **02 ತಿಂಗಳು.** (3) ಕಾಮಗಾರಿ ಹೆಸರು: **ಕೆ.ಜಿ.ಎಫ್. ತಾಲ್ಲೂಕಿನ ಜಕ್ಕರಸನಕುಪ್ಪ ಗ್ರಾಮ ಪಂಚಾಯಿತಿ, ಜಕ್ಕರಸನಕುಪ್ಪ ಗ್ರಾಮದಲ್ಲಿ ಮಿನಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿ. ನಂ.44186 (ಪರಿಶಿಷ್ಟ ಪಂಗಡ ಮೀಸಲಾತಿ) 2ನೇ ಕರೆ.** ಒಟ್ಟು ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **8.35.** ಇಎಂಡಿ: **10438/–.** ಮುಕ್ತಾಯದ ದಿನಾಂಕ: **02 ತಿಂಗಳು. ಷರಾ: –**

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. ಮತ್ತು ನೈ ವಿಭಾಗ
ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:308/ಎಂ.ಸಿ.ಎ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ)
ಸಂಖ್ಯೆ: 13–2/ 2022–23 ದಿನಾಂಕ: 21.09.2022

(ರಸ್ತೆಗಳ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2ರಂತೆ ಏಕ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ–ಲಕೋಟೆ** ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ **2000**ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ದಿನಾಂಕ: **22.09.2022** ರಿಂದ **06.10.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ **ದಿನಾಂಕ: 30.09.2022 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 06.10.2022 (ಸಂಜೆ 4.00 ಘಂಟೆಯವರೆಗೆ)** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ : 10.10.2022 (ಬೆಳಿಗ್ಗೆ 11.00 ಘಂಟೆಗೆ).** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 279/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: B/TRD.2022-23/05
ದಿನಾಂಕ: 16.09.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕೆಎಸ್‌ಆರ್ ಬೆಂಗಳೂರು – ಜೋಲಾರ್‌ಪೇಟೆ ವಿಭಾಗದ, ಮಾರಲಹಳ್ಳಿ ಯಾರ್ಡ್‌ನಲ್ಲಿ ಕಿಮೀ. 293ರಲ್ಲಿ ಕಡಿಮೆ ಹಂತದ ಪ್ಲಾಟ್‌ಫಾರ್ಮ್‌ನ ಪೂರೈಕೆಯ ಸಲುವಾಗಿ OHEಯ ಮೇಲಿನ ಮಾಪಾಟು ಹಾಗೂ ಕಾಲ ಮತ್ತು ಸ್ಥಿತಿಯ ಆಧಾರದ ಮೇಲೆ OHE/PSI ಉಪಕರಣಗಳಾದ ಐಸೊಲೇಟರುಗಳು, ಸಿಟಿ, ಬ್ಯಾಟರಿ, ಸಿಎ ಇತ್ಯಾದಿಗಳ ಬದಲಾವಣೆ ಮತ್ತು ವೃದ್ಧಿಗೊಳಿಸುವಿಕೆ.	ರೂ. 59,54,781.15

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **07.10.2022, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಿದ್ಯುತ್ ಇಂಜಿನಿಯರ್,
ಟ್ರ್ಯಾಕ್ಷನ್ ವಿನಿಮಯ, ಬೆಂಗಳೂರು

PUB/379/AAD/PRB/SWR/2022-23
S.W.Railways SWRRLY SWRRLY

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಅನಧಿಕೃತ ಬಡಾವಣೆ/2022–23 ದಿನಾಂಕ: 21–09–2022

ಸಾರ್ವಜನಿಕ ಪ್ರಕಟಣೆ

ವಿಷಯ: ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳ ತೆರವುಗೊಳಿಸುವ ಬಗ್ಗೆ ನೋಟಿಸ್.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರನ್ವಯ ಸರ್ಕಾರದ ಆದೇಶ ಸಂ. ನಅಇ 118 ಬೆಂರೂಪ್ರಾ 2003, ದಿನಾಂಕ: 03.03.2006 ರಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು, ಸದರಿ ಕಾಯ್ದೆಯ ಕಲಂ 4 (ಸಿ) ರನ್ವಯ ಸರ್ಕಾರದ ಆದೇಶ ಸಂಖ್ಯೆ: ನಅಇ 31 ಬೆಂರೂಪ್ರಾ 2006 ದಿನಾಂಕ: 19.07.2006 ರಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹೊಸಕೋಟೆ ತಾಲ್ಲೂಕಿನ **ಹೊಸಕೋಟೆ ನಗರವನ್ನು ಒಳಗೊಂಡಂತೆ, ಕಸಬಾ, ಅನುಗೊಂಡನಹಳ್ಳಿ, ಜಡಿಗೇನಹಳ್ಳಿ, ನಂದಗುಡಿ ಹಾಗೂ ಸೂಲಿಬೆಲೆ ಹೋಬಳಿಗಳ ಒಟ್ಟು 249 ಗ್ರಾಮಗಳು ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ 16 ಗ್ರಾಮಗಳು ಸೇರಿ ಪ್ರಸ್ತುತ ಈ ಪ್ರಾಧಿಕಾರವು ಒಟ್ಟು 265 ಗ್ರಾಮಗಳನ್ನು ಒಳಗೊಂಡಿದ್ದು, 475.48 ಚ.ಕಿ.ಮೀ. ವಿಸ್ತೀರ್ಣದ ವ್ಯಾಪ್ತಿ ಪ್ರದೇಶವನ್ನು ಹೊಂದಿರುತ್ತದೆ.**

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ದಿನಾಂಕ: 30.01.2018 ರಲ್ಲಿ ಮಹಾಯೋಜನೆ–2031 (ಅಂತಿಮ) ಅನ್ನು ಅನುಮೋದಿಸಲಾಗಿದ್ದು, ಸದರಿ ಮಹಾಯೋಜನೆಯಂತೆ ಭೂ ಉಪಯೋಗಗಳು ಹಾಗೂ ವಲಯ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಜಮೀನುಗಳಲ್ಲಿ / ನಿವೇಶನಗಳಲ್ಲಿ ಬಡಾವಣೆಗಳ ಅಭಿವೃದ್ಧಿ, ಕಟ್ಟಡಗಳ ನಿರ್ಮಾಣ, ಇತರೆ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ಮಹಾಯೋಜನೆ–2031 ಹಾಗೂ ವಲಯ ನಿಯಮಾವಳಿಗೆ ಅನುಗುಣವಾಗಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಕ್ರಯಕ್ಕೆ ಪಡೆಯುವ ಮೊದಲು ಪ್ರಾಧಿಕಾರದಿಂದ ಸದರಿ ಜಮೀನುಗಳಿಗೆ ಬಡಾವಣೆ ನಕ್ಷೆ ಅನುಮೋದನೆ ಪಡೆದಿರುವ ಬಗ್ಗೆ ಹಾಗೂ ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಪಡೆದಿರುವ ಕುರಿತು ಮತ್ತು ವಸತಿ ಸಮುಚ್ಚಯ ಕಟ್ಟಡಗಳಿಗೆ ನಕ್ಷೆ ಅನುಮೋದನೆ ಆಗಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಿನ್ಯಾಸ / ಬಡಾವಣೆಗಳಲ್ಲಿನ ನಿವೇಶನ ಮತ್ತು ವಸತಿ ಸಮುಚ್ಚಯ ಕಟ್ಟಡಗಳಲ್ಲಿನ ಅಪಾರ್ಟ್‌ಮೆಂಟ್ಸ್‌ಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ಈ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರದ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಸಹ ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಲಾದ ಬಡಾವಣೆಯಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ ಸಮುಚ್ಚಯ ಕಟ್ಟಡಗಳಲ್ಲಿನ ಅಪಾರ್ಟ್‌ಮೆಂಟ್‌ಗಳನ್ನು ಸಹ ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ/ ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟ ಪಡಿಸಲಾಗಿದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಭಿವೃದ್ಧಿಗೊಂಡಿರುವ ಬಡಾವಣೆಗಳ ವಿವರಗಳು

ಕ್ರ. ಸಂ.	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗುಂ
1	2	3	4
ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ			
1	ಮಂಡೂರು	190, 191, 192, 193	16–00
2		128	05–00
3		153	05–07
4		63	02–09
5		12, 13, 14, 156, 157 & 158	13–00
6			
7	ಗುಂಡೂರು	65/2, 74	03–15
8	ಬೊಮ್ಮೇನಹಳ್ಳಿ	100, 172, 176, 177	09–20
9		101	
10		120, 149	01–18
11		96 ರ ಪೈಕಿ	02–20
12	ಕಮ್ಮಸಂದ್ರ	32/3, 55/2, 69, 82/3	06–05
13		50, 53	04–00
14		35 ರಲ್ಲಿ ಭಾಗಶಃ ಮತ್ತು 54	13–00
15		51	07–00
16		2	04–20
17		4	02–10
18		6	03–00
19	ಕೊಡಿಗೇಹಳ್ಳಿ	52/1ಎ, 52/1ಬಿ2	00–20
20		02, 41, 43	07–20
21		01	07–27
22		54	02–00
23		8, 9, 10	12–00
24		53, 58, 59, 60	01–20
25		47	02–00
26		48, 49, 50	10–00
27	ರಘುವನಹಳ್ಳಿ	20	28–00
28		14, 15	06–00
29		16, 17, 18, 19	02–08
30		28	02–20
31	ಹುಸ್ಕೂರು	61 ರ ಪೈಕಿ	07–10
32		66 ರ ಪೈಕಿ	01–20
33		63 ರ ಪೈಕಿ	06–20
34		62 ರ ಪೈಕಿ	
35		71 ರ ಪೈಕಿ	
36		59 ರ ಪೈಕಿ	
37	ಲಘುಮೇನಹಳ್ಳಿ	9/2, 9/3, 25/1, 25/2	01–18
38		08	02–061/2
39	ಬೆಂಡಿಗಾನಹಳ್ಳಿ	51, 52	03–20
40		62, 63	01–20
ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ			
41	ಪೆತ್ತನಹಳ್ಳಿ	53	03–00
42	ಸರ್ಕಾರಿಗುಟ್ಟಹಳ್ಳಿ	51, 52	03–00
43	ಗಣಗಲು	92	07–00
44		22, 20	
45		58, 59, 60	10–00
46	ಹೊಸಕೋಟೆ	112, 113, 114, 115, 116, 117, 118, 165, 172, 238, 249, 289, 454	12–18
47	ಕಣ್ಣೂರಹಳ್ಳಿ	108, 112, 113, 114, 115,125/5	09–10
48	ದಂಡುಪಾಳ್ಯ	197, 198	02–08
ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ			
49	ಕಂಬಳೀಪುರ	133	03–00
ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ			
50	ಗುಳ್ಳಕಾಯಿಪುರ	4, 5, 6	12–20
51		2	03–10
52	ಕೋಟೂರು	61 ರ ಪೈಕಿ	03–13
53		162	01–15
54	ಮುತ್ತುಕದಹಳ್ಳಿ	13	01–20
55	ಬೆಳ್ಳಿಕೆರೆ	121	02–00
56		137	01–35
57		2, 3, 4	05–17
58		2	03–10
59		40	04–12
60		49	02–15
61		64	02–14
62	ಅಜ್ಜಗೊಂಡನಹಳ್ಳಿ	47, 48, 49, 50	06–15
63		52	02–05
64	ತಿಮ್ಮೊಂಡಹಳ್ಳಿ	3	02–00
65	ಹಾರೋಹಳ್ಳಿ	74, 75	06–29
66	ನಾಗನಾಯಕನಕೋಟೆ	26	04–19
67	ಮುತ್ಸಂದ್ರ	43, 44, 45, 46, 47, 48, 49, 50	02–15
68	ಬೈಲಹಳ್ಳಿ	28, 29	03–00
69		156, 164	04–10
70	ದೇವಲಾಪುರ	30, 31, 32, 33	03–05
71	ಕೋಟೂರು	65, 66	10–23
ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ			
72	ಬಿಸನಹಳ್ಳಿ	30, 33	03–17
73	ಸೋಲೂರು	81	03–16
74	ತವಟಹಳ್ಳಿ	61, 62	04–00
75	ಅಟ್ಟೂರು	84, 85, 86	03–15
76	ವಾಗಟ	87	07–23
ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ			
77	ನಂದಗುಡಿ	7	03–25
78	ಹಿಂಡಿಗನಾಳ	224, 233, 235	02–30

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಭೂ ಮಾಲೀಕರು / ಅಭಿವೃದ್ಧಿದಾರರು ಕೆ.ಟಿ.ಸಿ.ಪಿ ಕಾಯ್ದೆ, 1961 ರ ಕಲಂ 17 ರಂತೆ ಈ ಕಛೇರಿಯಿಂದ ಅನುಮೋದನೆ ಪಡೆಯದೇ ವಿನ್ಯಾಸಗಳನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಬಾರದೆಂದೂ, ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಡಿಯಲ್ಲಿ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರು / ಜಿ.ಪಿ.ಎ. ದಾರರು / ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಮೇಲ್ಕಂಡ ಜಮೀನುಗಳ ಭೂ ಮಾಲೀಕರು / ಅಭಿವೃದ್ಧಿದಾರರುಗಳ ಹೆಸರು / ವಿಳಾಸ ಲಭ್ಯವಿಲ್ಲದ ಕಾರಣ ಮೇಲ್ಕಂಡ ಜಮೀನುಗಳಲ್ಲಿ ಅನಧಿಕೃತವಾಗಿ ಅಭಿವೃದ್ಧಿ ಪಡಿಸಿರುವ ಜಮೀನುಗಳ ಮಾಲೀಕರು / ಜಿ.ಪಿ.ಎ ದಾರರು / ಅಭಿವೃದ್ಧಿದಾರರುಗಳಿಗೆ ಈ ಪ್ರಕಟಣೆಯನ್ನು ಕೆ.ಟಿ.ಸಿ.ಪಿ. ಕಾಯ್ದೆ ಕಲಂ 17(4) ರ ಅಡಿಯಲ್ಲಿ ನೀಡಲಾದ ನೋಟಿಸ್ ಎಂದು ತಿಳಿಯತಕ್ಕದ್ದು. ಈ ನೋಟಿಸಿಗೆ 15 ದಿನಗಳೊಳಗೆ ಲಿಖಿತ ರೂಪದ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿದೆ.

ಮುಂದುವರೆದು, ಸದರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಬಡಾವಣೆಗಳನ್ನು ತೆರವುಗೊಳಿಸಲು ಸಹ ತಿಳಿಸಲಾಗಿದೆ. ಇಲ್ಲವಾದಲ್ಲಿ, ಮುಂದಿನ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಈ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: **www.hoskote.tpa.gov.in** ರಲ್ಲಿಯೂ ಸಹ ಪ್ರಕಟಿಸಲಾಗಿದ್ದು, ಈ ವೆಬ್‌ಸೈಟ್ ನಲ್ಲಿಯೂ ಸಹ ಸಾರ್ವಜನಿಕರು ವೀಕ್ಷಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಿದೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2344/
ಅಡ್ವರ್ಟೋರ್/2022–23

ರಾಜಕಾಲುವೆ ಮೇಲೆ ನಿರ್ಮಿಸಿರುವ ಬಿಬಿಎಂಪಿ ಕಟ್ಟಡ

ಒತ್ತುವರಿ ತೆರವಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆಗಳ ಮೇಲೆ ನಿರ್ಮಿಸಲಾಗಿರುವ ಬಿಬಿಎಂಪಿಯ ಕಟ್ಟಡಗಳನ್ನು ತೆರವುಗೊಳಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್. ಆರ್. ಆಗ್ರಹಿಸಿದ್ದಾರೆ.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಿರುವ ರಮೇಶ್, 'ಬಿಬಿಎಂಪಿ ಪಾಲಿಕೆಯ ಕೇಂದ್ರ ಕಚೇರಿಗೆ ಸಮೀಪದ ಜೆ. ಸಿ. ರಸ್ತೆಯಲ್ಲಿ ಬೃಹತ್ ನೀರುಗಾಲುವೆಯನ್ನು ಒತ್ತುವರಿ ಮಾಡಿಕೊಂಡು 89/1ರಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಇಲ್ಲಿ ಕಾರ್ಗೋ ಟಾರ್ಪಾಲಿನ್ ಇಂಡಸ್ಟ್ರೀಸ್, ಸ್ಲೀಪ್ ವೆಲ್ ಮ್ಯಾಟ್ರೆಸ್, ರಾಹುಲ್ ಎಂಟರ್‌ಪ್ರೈಸಸ್, ಎಸ್.ಎಚ್. ಏಜೆನ್ಸೀಸ್ ಸೇರಿ ಹಲವು ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದರೂ ತೆರವು ಮಾಡಿಲ್ಲ' ಎಂದಿದ್ದಾರೆ.

'ಜೆ.ಸಿ. ರಸ್ತೆಯಲ್ಲೇ ಇರುವ ಪಾಲಿಕೆ ಕಟ್ಟಡದಲ್ಲಿ ಸಿದ್ಧಾರ್ಥ ಪುರುಷರ ವಸತಿ ನಿಲಯ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕೆಜಿಎಫ್ ಬಾಬು ಕಚೇರಿಯೂ ಇದೆ. ಈ ಕಟ್ಟಡವೂ ರಾಜಕಾಲುವೆ ಮೇಲಿದೆ' ಎಂದು ಚಿತ್ರಸಹಿತ ಮಾಹಿತಿ ನೀಡಿದ್ದಾರೆ.



ರಾಜಕಾಲುವೆ ಮೇಲಿರುವ ಬಿಬಿಎಂಪಿ ಕಟ್ಟಡ

'ಲಾಲ್‌ಬಾಗ್ ರಸ್ತೆಯಲ್ಲಿರುವ ಪಾಸ್‌ಪೋರ್ಟ್ ಕಚೇರಿ ಸಮೀಪ 4 ಮಹಡಿಗಳ ಕಟ್ಟಡದಲ್ಲಿ ಲೆದರ್ ಇಟಾಲಿಯಾಸ್ ಕಚೇರಿಯಿದ್ದು, ಈ ಕಟ್ಟಡವೂ ರಾಜಕಾಲುವೆ ಮೇಲಿದೆ' ಎಂದಿದ್ದಾರೆ.

'10–15 ದಿನಗಳಿಂದ ಬೆಂಗಳೂರಿನಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ಮಹದೇವಪುರ ವಲಯ, ಪೂರ್ವ ವಲಯ ಮತ್ತು ಬೊಮ್ಮನಹಳ್ಳಿ ವಲಯಗಳ ವ್ಯಾಪ್ತಿಯಲ್ಲಿ ಕಾನೂನುಬಾಹಿರವಾಗಿ ನಿರ್ಮಾಣಗೊಂಡಿರುವ ಪ್ರತಿಷ್ಠಿತ ಕಟ್ಟಡ ನಿರ್ಮಾಣ ಸಂಸ್ಥೆಗಳ ವಸತಿ ಸಮುಚ್ಚಯಗಳು, ಟೆಕ್ ಪಾರ್ಕ್‌ಗಳು, ಐಟಿ–ಬಿಟಿ ಕಂಪನಿಗಳು ಮತ್ತು ಮಾಲ್–ಮಲ್ಟಿಪ್ಲೆಕ್ಸ್ ಒತ್ತುವರಿ ಮಾಡಿಕೊಂಡ ರಾಜಕಾಲುವೆಗಳಲ್ಲಿ ಹರಿದು ಹೋಗಬೇಕಿದ್ದ ಮಳೆ ನೀರು ರಸ್ತೆಗಳಲ್ಲಿ ಹರಿಯುವಂತಾಗಿದ್ದರ ಪರಿಣಾಮ ಇದು.

ಅದರಂತೆಯೇ ಸರ್ಕಾರಿ ಇಲಾಖೆಗಳು ಸಹ ಒತ್ತುವರಿ ಮಾಡಿಕೊಂಡಿವೆ. ಅವುಗಳ ಬಗ್ಗೆಯೂ ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಪತ್ನಿ ವಿಚಾರಣೆಗೆ ಹೆದರಿ ಶರಣಾದ ಆರೋಪಿ

ಬೆಂಗಳೂರು: ನಗರದ ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿ ಗಣೇಶ್ ಅಲಿಯಾಸ್ ಕಡ್ಕ್, ಪತ್ನಿಯನ್ನು ಪೊಲೀಸರು ವಿಚಾರಣೆ ನಡೆಸುತ್ತಾರೆ ಎಂದು ಹೆದರಿ ಶರಣಾಗಿದ್ದಾನೆ.

'ನೇಪಾಳದ ಗಣೇಶ್ ಭದ್ರತಾ ಕೆಲಸ ಮಾಡುತ್ತಿದ್ದ. ಜೊತೆಯಲ್ಲೇ ಮನೆಗಳಲ್ಲಿ ಕಳ್ಳತನ ಮಾಡಿದ್ದ. ಈತನ ಜೊತೆ ಸುರೇಂದ್ರ ಅಲಿಯಾಸ್ ಗೂರ್ಖಾ ಎಂಬಾತನನ್ನೂ ಬಂಧಿಸಲಾಗಿದೆ. ಆರೋಪಿಯಿಂದ 450 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನೂತನ ಪಾರ್ಕಿಂಗ್ ನೀತಿಗೆ ಎಎಪಿ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ಸವಾರರಿಗೆ ಗುಣಮಟ್ಟದ ರಸ್ತೆ ಕಲ್ಪಿಸಲು ಸಾಧ್ಯವಾಗದ ಬಿಜೆಪಿಯ ಶೇ 40 ಸರ್ಕಾರವು ಈಗ ನೂತನ ಪಾರ್ಕಿಂಗ್ ನೀತಿ ಮೂಲಕ ವಾಹನ ಸವಾರರ ಜೇಬಿಗೆ ಕತ್ತರಿ ಹಾಕಲು ಮುಂದಾಗಿರುವುದು ಖಂಡನೀಯ ಎಂದು ಆಮ್ ಆದ್ಮಿ ಪಕ್ಷ ಪ್ರತಿಕ್ರಿಯಿಸಿದೆ.

'ಸೆ. 18ರಂದು (ಭಾನುವಾರ) ರಜೆ ದಿನದಂದು ಟೆಂಡರ್‌ಗೆ ಆಹ್ವಾನ ಕರೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಕೆಟಿಪಿಪಿ ಕಾಯಿದೆ ಪ್ರಕಾರ ಟೆಂಡರ್‌ಗೆ 40 ದಿನ ಕಾಲಾವಕಾಶ ನೀಡಬೇಕಾಗಿದ್ದರೂ ಕೇವಲ 15 ದಿನ ಕಾಲಾವಕಾಶ ನೀಡಲಾಗಿದೆ. ಎಂಟು ವಲಯಗಳಲ್ಲೂ ಎಂಟು ಗುತ್ತಿಗೆದಾರರನ್ನು ಪೂರ್ವ ನಿಗದಿ ಮಾಡಿಕೊಳ್ಳಲಾಗಿದೆ. ನಾಮಕಾವಾಸ್ತೆ ಟೆಂಡರ್ ಕರೆಯಲಾಗಿದೆ' ಎಂದು ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಆರೋಪಿಸಿದರು.

'ರಸ್ತೆ ಬದಿ ವಾಹನ ನಿಲ್ಲಿಸುವುದಕ್ಕೂ ಪ್ರಿಪೇಯ್ಡ್ ಶುಲ್ಕ ವಿಧಿಸುವ ನೂತನ ಪಾರ್ಕಿಂಗ್ ನೀತಿಯು ಸಾಮಾನ್ಯ ವಾಹನ ಸವಾರರಿಗೆ ಹೊರೆಯಾಗಲಿದೆ. ಪ್ರತಿ ಗಂಟೆಗೆ ₹ 15ರಿಂದ 30 ವರೆಗೆ ಪಾರ್ಕಿಂಗ್ ಶುಲ್ಕ ವಿಧಿಸುವುದರಿಂದ ಬಡ ಹಾಗೂ ಮಧ್ಯಮ ವರ್ಗದ ವಾಹನ ಸವಾರರ ಆದಾಯಕ್ಕೆ ದೊಡ್ಡ ಹೊಡೆತ ಬೀಳಲಿದೆ' ಎಂದರು.

'ಈ ನೂತನ ನೀತಿಯಲ್ಲಿ ಮನೆ ಎದುರು ಕಾರು ಪಾರ್ಕಿಂಗ್ ಮಾಡುವುದಕ್ಕೂ ₹3000 ದಿಂದ ₹5000 ನೀಡಿ ಪರವಾನಗಿ ಪಡೆಯಬೇಕೆಂಬ ನಿಯಮ ರೂಪಿಸಲಾಗಿದೆ. ವಾಹನ ಸವಾರರಿಗೆ ನೆರವಾಗುವ ನೀತಿ ರೂಪಿಸುವ ಬದಲು ಲೂಟಿ ಮಾಡಲು ಸರ್ಕಾರ ಮುಂದಾಗಿದೆ' ಎಂದರು.



ಡ್ರಗ್ಸ್: ಸಹನಟ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಡ್ರಗ್ ಮಾರುತ್ತಿದ್ದ ಜಾಲವನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಭೇದಿಸಿದ್ದು, ಮಲಯಾಳ ಕಿರುತೆರೆ ಸಹನಟ ಸೇರಿ ಮೂವರನ್ನು ಬಂಧಿಸಿದ್ದಾರೆ.

'ಕೇರಳದ ಸಹನಟ ಶಿಯಾಜ್, ಮೆಹಮ್ಮದ್ ಶಾಹಿದ್ ಹಾಗೂ ಮಂಗಲ್ ತೋಟ ಜಿಶಿನ್ ಬಂಧಿತರು. ಇವರಿಂದ ₹ 12.50 ಲಕ್ಷ ಮೌಲ್ಯದ ಎಂಡಿಎಂಎ ಹಾಗೂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳಾದ ಶಾಹಿದ್, ಜಿಶಿನ್ ಇಬ್ಬರೂ ಬಿ.ಕಾಂ ಪದವೀಧರರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಮೊಬೈಲ್ ಮಳಿಗೆಯೊಂದರಲ್ಲಿ ಶಾಹಿದ್ ಕೆಲಸಕ್ಕೆ ಸೇರಿದ್ದರು. ಸಂಬಳ ಕಡಿಮೆ ಎಂಬ ಕಾರಣಕ್ಕೆ ಜಿಶಿನ್ ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಇವರಿಬ್ಬರಿಗೆ ಶಿಯಾಜ್ ಪರಿಚಯವಾಗಿತ್ತು. ಮೂವರೂ ಸೇರಿ ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದರು' ಎಂದು ತಿಳಿಸಿದರು.

'ಆರೋಪಿಗಳು ಕೇರಳ ಹಾಗೂ ಇತರೆ ರಾಜ್ಯಗಳಿಂದ ನಗರಕ್ಕೆ ಡ್ರಗ್ ತರುತ್ತಿದ್ದರು. ಕೆಲ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರಿಗೆ ಡ್ರಗ್ ಮಾರುತ್ತಿದ್ದರು. ಇದರಿಂದ ಬಂದ ಹಣವನ್ನು ಮೂವರು ಹಂಚಿಕೊಂಡು, ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದು ಹೇಳಿದರು.

'ಕೆಲ ಉದ್ಯಮಿಗಳು ಹಾಗೂ ಕೆಲ ವ್ಯಾಪಾರಿಗಳ ಜೊತೆಯಲ್ಲೂ ಆರೋಪಿಗಳು ಸಂಪರ್ಕ ಇಟ್ಟುಕೊಂಡಿದ್ದರು. ನಗರದ ಹಲವೆಡೆ ನಡೆಯುತ್ತಿದ್ದ ರಾತ್ರಿ ಪಾರ್ಟಿಗಳಿಗೂ ಆರೋಪಿಗಳು ಡ್ರಗ್ ಪೂರೈಸುತ್ತಿದ್ದ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ' ಎಂದು ಅವರು ತಿಳಿಸಿದರು.



ನೌಕರರ ಸಂಘದ ಪದಾಧಿಕಾರಿಗಳು ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು. ನೌಕರರ ಸಂಘದ ಕುಮಾರ, ರಾಮಚಂದ್ರ ರಮೇಶ್, ಶೇಖರ್ ಇದ್ದರು

ನೌಕರಿ ಕಾಯಂಗೊಳಿಸಲು ಜಲಮಂಡಳಿ ನೌಕರರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿ ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಲು ಸರ್ಕಾರದ ಮೇಲೆ ಒತ್ತಡ ಹೇರುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ನೌಕರರ ಸಂಘ ಮನವಿ ಸಲ್ಲಿಸಿತು.

'ಜಲಮಂಡಳಿಯಲ್ಲಿ ನೀರ ಗಂಟಿಗಳು, ಸ್ಯಾನಿಟರಿ ಸ್ವಚ್ಛತಾ ಕಾರ್ಮಿಕರು, ಚಾಲಕರು, ಡೇಟಾ ಎಂಟ್ರಿ ಆಪರೇಟರ್‌ಗಳು ಸೇರಿ 3 ಸಾವಿರಕ್ಕೂ ಹೆಚ್ಚು ನೌಕರರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದೇವೆ. ವರ್ಷಕ್ಕೆ ಒಂದು ಜೊತೆ ಬಟ್ಟೆ ಹೊರತು ಪಡಿಸಿ ಏಜೆನ್ಸಿಯಿಂದ ಬೇರೆ ಯಾವ ಸವಲತ್ತೂ ದೊರೆಯುತ್ತಿಲ್ಲ' ಎಂದು ಹೇಳಿದರು.

'ಬಿಬಿಎಂಪಿ ಪೌರಕಾರ್ಮಿಕರ ರೀತಿಯಲ್ಲೇ ಜಲ ಮಂಡಳಿ ಕಾರ್ಮಿಕರೂ ಕೆಲಸ ಮಾಡುತ್ತಿದ್ದೇವೆ. ಹಲವರು ಕೋವಿಡ್‌ಗೆ ಬಲಿಯಾಗಿದ್ದು, ಅವರ ಕುಟುಂಬಗಳು ಸಂಕಷ್ಟದಲ್ಲಿ ಮುಳುಗಿವೆ. ಜಲಮಂಡಳಿ ಹೊರಗುತ್ತಿಗೆ ನೌಕರರನ್ನೂ ಸರ್ಕಾರಿ ನೌಕರರೆಂದು ಪರಿಗಣಿಸಬೇಕು' ಎಂದು ಮನವಿ ಮಾಡಿದರು.

ಅಪಘಾತ: ಮಗಳು ಸಾವು, ತಂದೆಗೆ ಗಾಯ

ಬೆಂಗಳೂರು: ನಗರದಲ್ಲಿ ಗುರುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಸುಚಿತ್ರಾ (14) ಎಂಬುವವರು ಮೃತಪಟ್ಟಿದ್ದಾರೆ. ಇವರ ತಂದೆ ಗಾಯಗೊಂಡಿದ್ದಾರೆ.

ಹೆಗ್ಗನಹಳ್ಳಿ ನಿವಾಸಿ ಸುಚಿತ್ರಾ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ. ತಂದೆ ಉಮೇಶ್ ಜೊತೆ ದ್ವಿಚಕ್ರ ವಾಹನದಲ್ಲಿ ರಾತ್ರಿ 11.45ರ ಸುಮಾರಿಗೆ ಕೊಟ್ಟಿಗೆಪಾಳ್ಯದ ಬೆಗ್ಗರ್ ಕಾಲೊನಿ ಬಳಿ ಹೊರಟಿದ್ದರು. ಚಾಲಕ ರಂಜಿತ್‌ಕುಮಾರ್ ನಿರ್ಲಕ್ಷ್ಯ ಹಾಗೂ ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿತ್ರಾವಳಿ



ಟೈಮ್ಸ್ ಏಯಂಟ್ ಏಷ್ಯಾ ಪೆಸಿಫಿಕ್ ಎಚ್‌ಆರ್‌ಎಮ್ ಕಾಂಗ್ರೆಸ್ ಅವಾರ್ಡ್ 2022ನೇ ಸಾಲಿನ ಅತ್ಯುತ್ತಮ ಶೈಕ್ಷಣಿಕ ವಿಭಾಗದಲ್ಲಿ ನೀಡುವ ಪ್ರಶಸ್ತಿ ಸೇಂಟ್ ಪೌಲ್ಸ್ ಕಾಲೇಜಿಗೆ ಲಭಿಸಿದೆ. ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಜೆ.ಥಾಮಸ್ ಮತ್ತು ಪ್ರಾಧ್ಯಾಪಕ ಡಾ. ಪ್ರಶಾಂತ್ ಮೊದಲಿಯಾರ್ ಪ್ರಶಸ್ತಿಯನ್ನು ಸ್ವೀಕರಿಸಿದರು.



ನಗರದ ಬಿಷಪ್ ಕಾಟನ್ಸ್ ಮಹಿಳಾ ಕಾನೂನು ಕಾಲೇಜಿನಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಐದು ವರ್ಷಗಳ ಕಾನೂನು ಪದವಿ ತರಗತಿಗಳನ್ನು ಪೂರೈಸಿದ ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ ಮಾಡಲಾಯಿತು. 'ಬೆಸ್ಟ್ ಲಾ ಕಾಟನಿಯನ್' ಪ್ರಶಸ್ತಿಯನ್ನು ಸ್ವಾತಿ ಪರ್ವತ ತಮ್ಮದಾಗಿಸಿಕೊಂಡರು. ಹೈಕೋರ್ಟ್ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್, ಬಿಷಪ್ ರೆವರೆಂಡ್ ಪ್ರಸನ್ನ ಕುಮಾರ್ ಸಾಮ್ಯುಯಲ್ ಹಾಗೂ ಬೋಧನಾ ಸಿಬ್ಬಂದಿ ಇದ್ದರು.



ಫ್ರೇಜರ್ ಟೌನ್‌ನಲ್ಲಿ ಕಲಾವಿದರೊಬ್ಬರು ನವರಾತ್ರಿಗಾಗಿ ಚಾಮುಂಡೇಶ್ವರಿ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಮಸೂದೆ–2022

ಸಂಚಾರ ದಟ್ಟಣೆ: ಪ್ರತ್ಯೇಕ ನಿಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದಲ್ಲಿ ವಾಹನಗಳ ಸಂಚಾರದ ಅಭಿವೃದ್ಧಿ, ಕಾರ್ಯಾಚರಣೆ, ನಿರ್ವಹಣೆ, ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಗಾಗಿ ಬೆಂಗಳೂರು ಮಹಾನಗರ ಭೂಸಾರಿಗೆ ನಿಗಮ ರಚನೆ ಉದ್ದೇಶದಿಂದ 'ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಮಸೂದೆ–2022' ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದರು.

ನಗರದ ಸಂಚಾರ ದಟ್ಟಣೆ ನಿವಾರಿಸುವುದಕ್ಕಾಗಿ ಪ್ರಾಧಿಕಾರ ಸ್ಥಾಪಿಸುವುದಾಗಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಪ್ರಕಟಿಸಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ವಲಯ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಸಂಚಾರ ಪೊಲೀಸ್, ಬಿಎಂಟಿಸಿ, ಬಿಬಿಎಂಪಿ, ಮೆಟ್ರೊ ರೈಲ್ವೆ ನಿಗಮ ಮತ್ತು ಸಾರಿಗೆ ಇಲಾಖೆ ಸೇರಿ ವಿವಿಧ ಏಜೆನ್ಸಿಗಳನ್ನು ಈ ಪ್ರಾಧಿಕಾರದ ವ್ಯಾಪ್ತಿಗೆ ತಂದು ವಿಸ್ತೃತ ಯೋಜನೆಗಳನ್ನು ರೂಪಿಸಲಾಗುವುದು.

ಮಸೂದೆಯ ಪ್ರಮುಖ ಅಂಶಗಳು

- ವಾಹನ ನಿಲುಗಡೆ ನೀತಿ, ಮೋಟಾರು ವಾಹನೇತರ ಸಾರಿಗೆ ನೀತಿ, ಸಾಗಣೆ ಆಧಾರಿತ ಅಭಿವೃದ್ಧಿ ನೀತಿ, ಬಹುಮಾದರಿ ಸಂಯೋಜನೆ ನೀತಿ, ಸರಕು ಸಾಗಣೆ ನೀತಿ ಮತ್ತು ಇತರ ಸಂಚಾರ ನೀತಿ ರೂಪಿಸಲಾಗುವುದು
- ನಗರ ಸಂಚಾರ ಪ್ರದೇಶದಲ್ಲಿ ಯೋಜಿತ ಅಭಿವೃದ್ಧಿಗಾಗಿ ಒಂದು ಸಮಗ್ರ ಯೋಜನೆಯನ್ನು ಸಿದ್ಧಪಡಿಸುವುದು
- ವಿವಿಧ ಮಾದರಿಗಳ ಮೂಲ ಸೌಕರ್ಯ, ಸೌಲಭ್ಯಗಳು ಮತ್ತು ಕಾಮಗಾರಿಗಳು, ನಗರದಲ್ಲಿ ಸಂಪೂರ್ಣವಾದ ರಸ್ತೆ ಜಾಲ (ಒಂದು ಚ.ಕಿ.ಮೀ ಗ್ರಿಡ್ ಆದ್ಯತೆಯನ್ನು ಒಳಗೊಂಡಿರಬೇಕು), ಸಾರ್ವಜನಿಕ ಸಾರಿಗೆಯ ಈಗಿನ ಮತ್ತು ಉದ್ದೇಶಿತ ಮಾರ್ಗದ ಯೋಜನೆಗಳು, ಪ್ರಯಾಣದ ಬೇಡಿಕೆ ಆಧಾರದ ಮೇಲೆ ಸ್ಥಾಪಿಸಲಾದ ರಸ್ತೆಗಳ ಶ್ರೇಣಿ, ಶ್ರೇಣಿಯ ಎಲ್ಲಾ ಮಟ್ಟಗಳ ರಸ್ತೆಗಳನ್ನು ನಿರ್ಮಿಸುವುದಕ್ಕೆ ಬೇಕಾದ ಮಾನದಂಡಗಳು
- ಪಾದಚಾರಿ ಮಾರ್ಗ, ಸೈಕಲ್ ಟ್ರ್ಯಾಕ್‌ಗಳು, ಒಳಚರಂಡಿಗಳು ಮತ್ತು ಅವುಗಳ ನಿರ್ವಹಣೆಯ ಮಾನದಂಡ
- ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ರ ಮೇರೆಗೆ ಪರಿಭಾಷಿಸಲಾದಂತೆ, ನಿರ್ದಿಷ್ಟ ಮಾನದಂಡದ ಅಂಗವಿಕಲತೆ ಇರುವ ಮತ್ತು ಅಂಗವಿಕಲ ವ್ಯಕ್ತಿಗಳಿಗಾಗಿ ಸಂಚಾರ ಮತ್ತು ಸಾರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು



ನಗರದಲ್ಲಿ ಸಂಚಾರ ದಟ್ಟಣೆ ಉಂಟಾಗಿರುವುದು (ಸಾಂದರ್ಭಿಕ ಚಿತ್ರ)

ಸುದ್ದಿ 2 ನಿಮಿಷ

ಹೆಸರಘಟ್ಟ ಹುಲ್ಲುಗಾವಲಿಗೆ ವಿರೋಧ: ಮನೆಗೆ ನುಗ್ಗಿ ಪ್ರತಿಭಟನೆ

ಬೆಂಗಳೂರು: 'ಹೆಸರಘಟ್ಟ ಹುಲ್ಲುಗಾವಲು ಪ್ರದೇಶಕ್ಕೆ ಸಂಬಂಧಿಸಿದಂತೆ ಸುಳ್ಳು ಮತ್ತು ಅವೈಜ್ಞಾನಿಕ ದಾಖಲೆ ನೀಡಿ ಸರ್ಕಾರದ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಆರೋಪಿಸಿ ಕೆಲವು ರೈತರು ಮತ್ತು ಗ್ರಾಮಸ್ಥರು ಹೆಸರಘಟ್ಟದ ಪರಿಸರವಾದಿ ಮಹೇಶ್ ಭಟ್ ಮನೆಗೆ ನುಗ್ಗಿ ಪ್ರತಿಭಟನೆ ನಡೆಸಿದರು.

'ಗ್ರಾಮಸ್ಥರು ಮತ್ತು ಸಾರ್ವಜನಿಕರೊಂದಿಗೆ ಯಾವುದೇ ಚರ್ಚೆ ನಡೆಸದೇ, ಅವರ ವರದಿ ಸಿದ್ಧಪಡಿಸಿ ಹೆಸರಘಟ್ಟ ಹುಲ್ಲುಗಾವಲನ್ನು ಸಂರಕ್ಷಿತ ಪ್ರದೇಶ ಎಂದು ಘೋಷಣೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಇದರಿಂದಾಗಿ ಹೆಸರಘಟ್ಟ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರ ದಿನನಿತ್ಯದ ಬದುಕು ಅಸ್ತವ್ಯಸ್ತವಾಗುತ್ತದೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಮಹೇಶ್ ಅವರು ಒಂದು ಎಕರೆ ಜಾಗವನ್ನು ಖರೀದಿಸಿ ಅದಕ್ಕೆ ಹೊಂದಿಕೊಂಡಿರುವ 3 ಎಕರೆಗೂ ಅಧಿಕ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಬೇಲಿ ಹಾಕಿದ್ದಾರೆ. ಅಲ್ಲದೇ, ಅವರು ತೋಟದಲ್ಲಿ ಯಾವುದೇ ಅನುಮತಿ ಪಡೆಯದೇ ಮನೆಯನ್ನು ನಿರ್ಮಾಣ ಮಾಡುವ ಮೂಲಕ ಪರಿಸರ ವಿರೋಧಿಯಾಗಿದ್ದಾರೆ' ಎಂದು ದೂರಿದರು.

'ಹುಲ್ಲುಗಾವಲು ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಣೆ ಮಾಡದೇ ಯಥಾಸ್ಥಿತಿ ಕಾಯ್ದುಕೊಳ್ಳಲಿ. ನಾವೆಲ್ಲಾ ರೈತರು ಮತ್ತು ಗ್ರಾಮಸ್ಥರು ಸೇರಿ ಈ ಹುಲ್ಲುಗಾವಲು ಪ್ರದೇಶವನ್ನು ರಕ್ಷಿಸುವ ಕೆಲಸ ಮಾಡುತ್ತೇವೆ' ಎಂದು ರೈತರು ತಿಳಿಸಿದರು.

ಮೆಗಾ ರಕ್ತದಾನ ಶಿಬಿರ



ಬೆಂಗಳೂರು: ನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಮತ್ತು ಯೂಥ್ ರೆಡ್ ಕ್ರಾಸ್ ಘಟಕ, ಲಯನ್ಸ್ ರಕ್ತ ನಿಧಿ ಮತ್ತು ನಿಮ್ಹಾನ್ಸ್ ಆಸ್ಪತ್ರೆಯ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಈಚೆಗೆ ಆಯೋಜಿಸಲಾಗಿತ್ತು.

ರಕ್ತದಾನ ಶಿಬಿರ ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಅರ್ಪಣಾ ಅವರು, 'ಕಾಲೇಜಿನಲ್ಲಿ ಪ್ರತಿ ವರ್ಷ ಎರಡು ಬಾರಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಒಂದು ಯೂನಿಟ್ ರಕ್ತವು ಮೂರು ಜನರ ಪ್ರಾಣ ಉಳಿಸುತ್ತದೆ' ಎಂದರು.

'ರಕ್ತದಾನ ಮಾಡುವುದರಿಂದ ಆರೋಗ್ಯವು ಚೆನ್ನಾಗಿರುತ್ತದೆ. ಈ ಬಾರಿ ರಕ್ತದಾನ ಶಿಬಿರದಲ್ಲಿ 4500ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನ ಮಾಡಲು ಮುಂದೆ ಬಂದಿದ್ದಾರೆ' ಎಂದರು. ಡಾ. ಶರ್ಮಿನ್ ಜೆರೋಮ್, ಡಾ. ಸಿಸ್ಟರ್ ಸಜಿತಾ, ಡಾ. ಗೋವಿಂದಗೌಡ ಇದ್ದರು.

'ಮನೆ ಬಾಗಿಲಿಗೆ ಆಯುರ್ವೇದ ಸೇವೆ'

ಕೇಂದ್ರ ಆಯುಷ್ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಕೋಟೆಚಾ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗೆ ಜಾಗತಿಕ ಸ್ಥಾನಮಾನ ಕಲ್ಪಿಸಲು ಕೇಂದ್ರ ಸರ್ಕಾರವು 'ಆಯುರ್ವೇದ 2047' ಪರಿಕಲ್ಪನೆಯಡಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಈ ಕಾರ್ಯಕ್ರಮಗಳಡಿ ಮನೆ ಬಾಗಿಲಿಗೆ ಆಯುರ್ವೇದ ಚಿಕಿತ್ಸಾ ಪದ್ಧತಿಯನ್ನು ಕೊಂಡೊಯ್ಯಲಾಗುವುದು' ಎಂದು ಕೇಂದ್ರ ಆಯುಷ್ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಕೋಟೆಚಾ ತಿಳಿಸಿದರು.

ಕೇಂದ್ರ ಶಿಕ್ಷಣ ಹಾಗೂ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ ಟ್ರಾನ್ಸ್ ಡಿಸಿಪ್ಲಿನರಿ ವಿಶ್ವವಿದ್ಯಾಲಯವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ 'ಧಾರಾ- ಆಯುರ್ವೇದ ದೂರದೃಷ್ಟಿ 2047' ವಿಚಾರ ಸಂಕಿರಣ ಉದ್ಘಾಟಿಸಿ, ಮಾತನಾಡಿದರು.

'2022ರಿಂದ 2047ರ ಅವಧಿಯನ್ನು ಸಾಂಪ್ರದಾಯಿಕ ವೈದ್ಯ ಪದ್ಧತಿಯ ಕಾಲಘಟ್ಟವೆಂದು ಸರ್ಕಾರ ಭಾವಿಸಿದೆ. 2014ರಿಂದೀಚೆಗೆ ಆಯುರ್ವೇದ ಮಾರುಕಟ್ಟೆ ಆರು ಪಟ್ಟು ಬೆಳೆದಿದೆ. ಈ ಕ್ಷೇತ್ರದ ವಹಿವಾಟು 300 ಮಿಲಿಯನ್ ಡಾಲರ್‌ನಿಂದ 800 ಮಿಲಿಯನ್‌ಗೆ ಹೆಚ್ಚಳವಾಗಿದೆ. ಆಯುರ್ವೇದಕ್ಕೆ ಜಾಗತಿಕ ಸ್ಥಾನಮಾನ ಕಲ್ಪಿಸಿ, ಈ ಪದ್ಧತಿಯ ಅಧ್ಯಯನಕ್ಕೆ ದೇಶ–ವಿದೇಶಗಳಿಂದ ಜನರು ಬರುವಂತಹ ವಾತಾವರಣ ಕಲ್ಪಿಸುವುದು ಸರ್ಕಾರದ ಗುರಿ' ಎಂದು ವಿವರಿಸಿದರು.



ವಿಚಾರ ಸಂಕಿರಣದಲ್ಲಿ ಟಿಡಿಯು ಕುಲಪತಿ ದರ್ಶನ್ ಶಂಕರ್, ರಾಜ ವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಮತ್ತು ರಾಜೇಶ್ ಕೋಟೆಚಾ ಇದ್ದರು –ಪ್ರಜಾವಾಣಿ ಚಿತ್ರ

'ಆಧುನಿಕ ಹಾಗೂ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯಲ್ಲಿನ ಅಂತರವನ್ನು ನಾವು ಮುಚ್ಚಬೇಕು. ಸಾಂಪ್ರದಾಯಿಕ ಪದ್ಧತಿಯಲ್ಲಿಯೂ ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ಅನ್ವೇಷಿಸಬೇಕು. ನಾಡಿ ವೈದ್ಯರಿಗೆ ತಂತ್ರಜ್ಞಾನ ಏಕೆ ಅಗತ್ಯ ಎಂಬ ವಾದ ಸರಿಯಲ್ಲ. ವಿಜ್ಞಾನ, ತಂತ್ರಜ್ಞಾನವಿಲ್ಲದೇ ಇಂದು ಯಾವುದೇ ಕ್ಷೇತ್ರ ಬೆಳೆಯಲು ಸಾಧ್ಯವಿಲ್ಲ. ಆಯುಷ್‌ನ ಎಲ್ಲ ವೈದ್ಯಕೀಯ ಶಾಖೆಗಳನ್ನು ಉತ್ತೇಜಿಸಿ, ಜನರಿಗೆ ಕೈಗೆಟಕುವ ಬೆಲೆಯಲ್ಲಿ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸಲು ಸರ್ಕಾರ ಯೋಜನೆಗಳನ್ನು ರೂಪಿಸುತ್ತಿದೆ' ಎಂದು ತಿಳಿಸಿದರು.

ಶಿಕ್ಷಣ ಸಚಿವಾಲಯದ ಭಾರತೀಯ ಜ್ಞಾನ ವ್ಯವಸ್ಥೆಯ ರಾಷ್ಟ್ರೀಯ ಸಂಯೋಜಕ ಪ್ರೊ.ಮೂರ್ತಿ, 'ಧಾರಾ ವಿಚಾರಸಂಕಿರಣದ ಗೋಷ್ಠಿಗಳಲ್ಲಿ ದೇಶದ ವಿವಿಧ ಭಾಗಗಳಿಂದ 800ಕ್ಕೂ ಹೆಚ್ಚು ಸಾಂಪ್ರದಾಯಿಕ ವೈದ್ಯರು ಭಾಗವಹಿಸಿದ್ದಾರೆ. ತಮ್ಮ ತಮ್ಮ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವನ್ನು ಹಂಚಿಕೊಳ್ಳುತ್ತಾರೆ' ಎಂದು ಹೇಳಿದರು.

ಮುಖ್ಯಾಂಶಗಳು

- 'ಆಯುರ್ವೇದ 2047' ಪರಿಕಲ್ಪನೆಯಡಿ ಕಾರ್ಯಕ್ರಮ ಆಯೋಜನೆ
- 2014ರಿಂದೀಚೆಗೆ ಆಯುರ್ವೇದ ಮಾರುಕಟ್ಟೆ 6 ಪಟ್ಟು ಬೆಳೆದಿದೆ: ರಾಜೇಶ್



ವಿಚಾರಸಂಕಿರಣದಲ್ಲಿ ಎಫ್‌ಕೆ.ಸಿ.ಸಿ.ಐ ಅಧ್ಯಕ್ಷ ಐ.ಎಸ್. ಪ್ರಸಾದ್ ಹಾಗೂ ಸರ್ಬಾನಂದ ಸೋನೋವಾಲ್ ಚರ್ಚಿಸಿದರು. ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಹಾಗೂ ಇಂಡಿಯಾ ಫೌಂಡೇಷನ್‌ನ ಕಾಮ್ ಕಾರ್ಪೆಂಟರ್ ಡಿ. ಗಾರ್ಡನ್ ಇದ್ದಾರೆ. –ಪ್ರಜಾವಾಣಿ ಚಿತ್ರ

'ವೈದ್ಯಕೀಯ ಪದ್ಧತಿ ಒಟ್ಟಾಗಿ ಸಾಗಲಿ'

ಬೆಂಗಳೂರು: 'ಭಾರತೀಯ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗೆ ಜಾಗತಿಕ ಮನ್ನಣೆ ದೊರೆತಿದೆ. ಸಾಂಪ್ರದಾಯಿಕ ಹಾಗೂ ಆಧುನಿಕ ವೈದ್ಯಕೀಯ ಪದ್ಧತಿಗಳು ಒಟ್ಟಾಗಿ ಸಾಗಿದರೆ ಅತ್ಯುತ್ತಮ ಫಲಿತಾಂಶ ಹೊರಹೊಮ್ಮಲಿದೆ' ಎಂದು ಕೇಂದ್ರ ಆಯುಷ್ ಸಚಿವ ಸರ್ಬಾನಂದ ಸೋನೋವಾಲ್ ಅಭಿಮತ ವ್ಯಕ್ತಪಡಿಸಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಜಾಗೃತಾವಸ್ಥೆಯ ಶೋಧ' ವಿಚಾರಸಂಕಿರಣ ಉದ್ಘಾಟಿಸಿ, ಮಾತನಾಡಿದರು. 'ನಮ್ಮಲ್ಲಿನ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿ ಹಲವರ ತಪಸ್ಸಿನ ಫಲ. ಇದಕ್ಕೆ ದೊಡ್ಡ ಇತಿಹಾಸವಿದೆ. ಶತಮಾನಗಳಿಂದ ಈ ಪದ್ಧತಿಯನ್ನು ಮುಂದುವರಿಸಿಕೊಂಡು ಬರಲಾಗಿದೆ. ನಮ್ಮ ಸರ್ಕಾರ ಈ ಪದ್ಧತಿಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದಿದೆ. ಇದರಿಂದಾಗಿ ವಿಶ್ವ ಆರೋಗ್ಯ ಸಂಸ್ಥೆಯು ಜಗತ್ತಿನಲ್ಲಿಯೇ ಮೊದಲ ಬಾರಿಗೆ ಗುಜರಾತ್‌ನಲ್ಲಿ ಭಾರತೀಯ ಸಾಂಪ್ರದಾಯಿಕ ಔಷಧಗಳ ಘಟಕ ಸ್ಥಾಪಿಸಲು ಮುಂದಾಗಿದೆ' ಎಂದರು.

'ವಿವಿಧ ವೈದ್ಯಕೀಯ ಪದ್ಧತಿಯಲ್ಲಿ ತೊಡಗಿಸಿಕೊಂಡವರು ಅಹಂಕಾರವನ್ನು ಬಿಟ್ಟು, ಪರಸ್ಪರ ಉತ್ತಮ ಸಂಬಂಧ ಕಾಯ್ದುಕೊಂಡು ಸಾಗಬೇಕು' ಎಂದು ಹೇಳಿದರು.

'ಆಸ್ಪತ್ರೆಗಳ ಬಗ್ಗೆ ಬಹುತೇಕರಿಗೆ ತಪ್ಪು ಕಲ್ಪನೆಗಳಿವೆ. ಆಸ್ಪತ್ರೆಯ ಅರ್ಥವನ್ನು ಬದಲಾಯಿಸಬೇಕು. ರೋಗಿಯ ಕಾಯಿಲೆಯನ್ನು ವಾಸಿ ಮಾಡಿ, ನೋವನ್ನು ದೂರವಾಗಿಸುವ ಆಸ್ಪತ್ರೆಗಳು ಸಂತೋಷ ಹಂಚುವ ಕೇಂದ್ರಗಳಾಗಿವೆ. ವೈದ್ಯಕೀಯ ಕ್ಷೇತ್ರದ ಬಗ್ಗೆ ಜನರ ನಿರೀಕ್ಷೆ ಹೆಚ್ಚಾಗುತ್ತಿದೆ. ವೈದ್ಯರು ಮಾನವೀಯತೆಯಿಂದ ವರ್ತಿಸಿ, ಪ್ರೀತಿ ಮತ್ತು ವಾತ್ಸಲ್ಯದಿಂದ ರೋಗಿಗಳನ್ನು ಕಾಣಬೇಕು' ಎಂದು ತಿಳಿಸಿದರು.

ಅಧ್ಯಾತ್ಮ ಚಿಂತಕ ಕಮಲೇಶ್ ಡಿ. ಪಾಟೀಲ್, 'ಮನುಷ್ಯನ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಜ್ಞೆ ಎಂಬುದರ ಪಾತ್ರ ಬಹಳ ಮಹತ್ವದ್ದಾಗಿದೆ. ಮನಸ್ಸು, ಬುದ್ಧಿ, ಅಹಂಕಾರ ಎಂಬುದು ಪ್ರಜ್ಞೆಯಿಂದ ಬರುತ್ತದೆ. ಧ್ಯಾನದಿಂದ ಒಳ್ಳೆಯ ಪ್ರಜ್ಞೆಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯ. ಯಾವುದೇ ಯಂತ್ರಗಳ ಸಹಾಯದಿಂದ ಇದನ್ನು ನಿಯಂತ್ರಿಸಲು ಸಾಧ್ಯವಿಲ್ಲ' ಎಂದು ಹೇಳಿದರು

ಬಿಬಿಎಂಪಿ ಮೀಸಲು ಪ್ರಶ್ನಿಸಿದ ಅರ್ಜಿ ವಿಚಾರಣೆ 27ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಗೆ ಸಿದ್ಧಪಡಿಸಲಾಗಿರುವ 243 ವಾರ್ಡ್‌ಗಳ ಮೀಸಲು ಪಟ್ಟಿಯಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಮೀಸಲು ಕಲ್ಪಿಸಲಾಗಿಲ್ಲ ಎಂದು ದೂರುಗಳನ್ನು ಸಾರಾಸಗಟಾಗಿ ತಳ್ಳಿ ಹಾಕಿರುವ ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಈ ಸಂಬಂಧ ತನ್ನ ಆಕ್ಷೇಪಣೆ ಸಲ್ಲಿಸಿದೆ.

ಈ ಕುರಿತಂತೆ ಈಜಿಪುರದ ಕೆ.ಮಹದೇವ, ಕಮ್ಮನಹಳ್ಳಿಯ ಪಳನಿ ದಯಾಳನ್, ದೊಡ್ಡಬಾಣಸವಾಡಿಯ ವಿ.ಶ್ರೀನಿವಾಸ್ ಮತ್ತು ನಾಗನಾಥಪುರದ ಕೆ.ಚಂದ್ರಶೇಖರ್ ಅವರದ್ದೂ ಸೇರಿ ಹತ್ತು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಅರ್ಜಿದಾರರ ತಕರಾರುಗಳಿಗೆ ಸಂಬಂಧಿಸಿದಂತೆ ವಿವರವಾದ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಿದರು.

ಇದೇ ವೇಳೆ ನ್ಯಾಯಪೀಠ, 'ಒಂದೇ ಕ್ಷೇತ್ರದ ಎಲ್ಲಾ ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿರಿಸಬಹುದೇ, ಇಂತಹ ಮೀಸಲಾತಿ ನಿಗದಿಯ ಹಿಂದಿನ ತರ್ಕವೇನು' ಎಂದು ಸರ್ಕಾರವನ್ನು ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಧ್ಯಾನ್ ಚಿನ್ನಪ್ಪ, 'ಮೀಸಲು ನಿಗದಿಯಲ್ಲಿ ಕಾನೂನುಬದ್ಧವಾದ ಎಲ್ಲ ಪ್ರಕ್ರಿಯೆ ಮತ್ತು ನಿಗದಿಪಡಿಸಲಾದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಲಾಗಿದೆ. ಮಹಿಳಾ ಮೀಸಲಾತಿಯಲ್ಲೂ ಕಾನೂನುಬದ್ಧತೆಯನ್ನು ಕಾಪಾಡಿಕೊಳ್ಳಲಾಗಿದೆ ಯಾದೃಚ್ಛಿಕ ಆಧಾರದಲ್ಲಿ ಮೀಸಲು ನಿಗದಿಪಡಿಸಲಾಗಿದೆ' ಎಂದು ಹೇಳಿದರು.

ಚುನಾವಣಾ ಆಯೋಗದ ಪರ ಹಿರಿಯ ವಕೀಲ, 'ಬಿಬಿಎಂಪಿಯ 243 ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಸಿದ್ಧವಾಗಿದ್ದು, ಇದೇ 27ರಂದು ಸಾರ್ವಜನಿಕವಾಗಿ ಪ್ರಕಟಿಸಲಾಗುವುದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಲಾಗಿದೆ.

ಆಕ್ಷೇಪ: 'ವಾರ್ಡ್‌ವಾರು ಮೀಸಲಾತಿ ನಿಗದಿಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಭಕ್ತವತ್ಸಲ ಸಮಿತಿ ವರದಿಯನ್ನು ಆಧರಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ, ಭಕ್ತವತ್ಸಲ ಸಮಿತಿ ಶಿಫಾರಸು ಮಾಡಿರುವ ಮೂರು ಹಂತದ ಪರಿಶೀಲನೆಯನ್ನು (ಟ್ರಿಪಲ್ ಟೆಸ್ಟ್) ಅನ್ವಯಿಸಿಕೊಂಡಿಲ್ಲ. ಯಾವ ಜಾತಿಗಳಿಗೆ ಪ್ರಾತಿನಿಧ್ಯ ಕಲ್ಪಿಸಲಾಗಿದೆ ಎಂಬ ಪಟ್ಟಿಯನ್ನೂ ಒದಗಿಸಿಲ್ಲ' ಎಂಬುದು ಅರ್ಜಿದಾರರ ಆಕ್ಷೇಪ.

ಆರೋಪಿ ಪತ್ತೆಗಾಗಿ 200 ಸಿಸಿಟಿವಿ ಪರಿಶೀಲನೆ

ಬೆಂಗಳೂರು: ನಗರದ ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಶ್ರೀಧರ್ ಅಲಿಯಾಸ್ ಚಿಂಗಾರಿ (27) ಎಂಬುವವರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಮರಳೂರು ದಿನ್ನೆ ವಾರ್ಡ್‌ನ ನಿವಾಸಿ ಶ್ರೀಧರ್ ಛಾಯಾ ಗ್ರಾಹಕ ವೃತ್ತಿಯಲ್ಲಿದ್ದ. ಈತನನ್ನು ಬಂಧಿಸಿ ₹ 15 ಲಕ್ಷ ಮೌಲ್ಯದ 30 ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಜೂಜು ಆಡುತ್ತಿದ್ದ ಆರೋಪಿ ಅದರಲ್ಲಿ ಸಾಕಷ್ಟು ಹಣ ಕಳೆದುಕೊಂಡಿದ್ದ. ಜೂಜಾಟಕ್ಕೆ ಬೇಕಾದ ಹಣವನ್ನು ಹೊಂದಿಸಲು ದ್ವಿಚಕ್ರ ವಾಹನ ಕಳ್ಳತನಕ್ಕೆ ಇಳಿದಿದ್ದ. ಬೆಂಗಳೂರು ಹಾಗೂ ತುಮಕೂರಿನ ಹಲವು ಕಡೆಗಳಲ್ಲಿ ವಾಹನ ಕಳ್ಳತನ ಮಾಡಿದ್ದ' ಎಂದರು.

'ಮಲ್ಲೇಶ್ವರದಲ್ಲಿ ಇತ್ತೀಚೆಗೆ ದ್ವಿಚಕ್ರ ವಾಹನವೊಂದು ಕಳ್ಳತನವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಆರಂಭದಲ್ಲಿ ಆರೋಪಿ ಸುಳಿವು ಸಿಕ್ಕಿರಲಿಲ್ಲ.'

'ದ್ವಿಚಕ್ರ ವಾಹನ ಕದ್ದಿದ್ದ ಆರೋಪಿಯು ತುಮಕೂರಿಗೆ ಹೋಗಿದ್ದ ಸುಳಿವು ಲಭ್ಯವಾಗಿತ್ತು. ಬೆಂಗಳೂರು, ನೆಲಮಂಗಲ, ದಾಬಸ್‌ಪೇಟೆ ಹಾಗೂ ತುಮಕೂರಿನ 200 ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದಾಗ ಆರೋಪಿ ಸುಳಿವು ಸಿಕ್ಕಿತು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ' ಎಂದು ಹೇಳಿದರು.

'ಕದ್ದ ವಾಹನಗಳನ್ನು ಆರೋಪಿ ಮಾರಾಟ ಮಾಡುತ್ತಿದ್ದ. ಹಣವನ್ನು ಜೂಜು ಹಾಗೂ ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ' ಎಂದರು.

'ಕದ್ದ ವಾಹನದಲ್ಲಿ ಹೊರಟಿದ್ದಾಗಲೇ ಆರೋಪಿಯನ್ನು ಬಂಧಿಸಲಾಯಿತು. ವಾಹನದ ಮೇಲೆ ಚಿಂಗಾರಿ ಎಂಬುದಾಗಿ ಬರೆಸಿಕೊಂಡಿದ್ದ. ಅದನ್ನು ಮಾರಾಟ ಮಾಡಲು ಸಿದ್ಧತೆ ನಡೆಸಿದ್ದ' ಎಂದು ಪೊಲೀಸರು ಹೇಳಿದರು.

ಆಯುಷ್ಮಾನ್ ಕಾರ್ಡ್: ಚಿಕಿತ್ಸಾ ದತ್ತಾಂಶ ಲಭ್ಯತೆ

ಬೆಂಗಳೂರು: 'ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ' ಯೋಜನೆಯಡಿ ವಿತರಿಸಲಾಗುವ ಆರೋಗ್ಯ ಕಾರ್ಡ್ ಹೊಂದಿದ್ದಲ್ಲಿ ದೇಶದಾದ್ಯಂತ ಸುಲಭವಾಗಿ ವೈದ್ಯಕೀಯ ಸೇವೆಗಳನ್ನು ಪಡೆಯಬಹುದು. ಈ ಹಿಂದೆ ನೀಡಲಾದ ಚಿಕಿತ್ಸೆಯ ದತ್ತಾಂಶವೂ ದೊರೆಯುತ್ತದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇಲಾಖೆಯು ಇದೇ 30ರ ವರೆಗೆ ಆಯುಷ್ಮಾನ್ ಪಾಕ್ಷಿಕ ಹಮ್ಮಿಕೊಂಡಿದೆ. ಯೋಜನೆಯಡಿ ವೈದ್ಯಕೀಯ ಸೌಲಭ್ಯ ಪಡೆಯಲು ಆರೋಗ್ಯ ಕಾರ್ಡ್‌ಗಳನ್ನು ಹೊಂದುವಂತೆ ಇಲಾಖೆ ಮನವಿ ಮಾಡಿದೆ. 'ರೋಗಿಗೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಆನ್‌ಲೈನ್ ಮೂಲಕವೇ ಮೇಲ್ದರ್ಜೆಯ ಆಸ್ಪತ್ರೆಗೆ ರೆಫರಲ್ ಮಾಡಲು ಈ ಕಾರ್ಡ್ ಸಹಕಾರಿಯಾಗಲಿದೆ. ಆಧಾರ್ ಜೋಡಣೆಯಾಗಿರುವ ಪಡಿತರ ಚೀಟಿಯ ಆಧಾರದ ಮೇಲೆ ಉಚಿತವಾಗಿ ಆಯುಷ್ಮಾನ್ ಕಾರ್ಡ್ ವಿತರಿಸಲಾಗುವುದು. ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಮೇಲ್ವಿಚಾರಣೆಯಲ್ಲಿರುವ ಎಲ್ಲ ನಾಗರಿಕ ಸೇವಾ ಕೇಂದ್ರಗಳ ಮೂಲಕ ಆಯುಷ್ಮಾನ್ ಕಾರ್ಡ್‌ಗಳನ್ನು ವಿತರಿಸಲು ವ್ಯವಸ್ಥೆ ಮಾಡಲಾಗಿದೆ' ಎಂದು ಇಲಾಖೆ ಹೇಳಿದೆ.

'ಯೋಜನೆಯಡಿ ಪ್ರಾಥಮಿಕ ಹಂತದ ಚಿಕಿತ್ಸೆಗಳು ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯಲಿವೆ. ತೀವ್ರತರ ಕಾಯಿಲೆಗಳಿಗೂ ಚಿಕಿತ್ಸೆ ಒದಗಿಸಲಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಲಭ್ಯವಿಲ್ಲದಿದ್ದರೆ ರೋಗಿಯ ಆಯ್ಕೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ' ಎಂದು ತಿಳಿಸಿದೆ. 'ಯೋಜನೆಯಡಿ ಒಟ್ಟು 1,650 ಚಿಕಿತ್ಸಾ ಪ್ಯಾಕೇಜ್‌ಗಳು ಲಭ್ಯವಿವೆ' ಎಂದು ಇಲಾಖೆ ಹೇಳಿದೆ.

ಸಂಯುಕ್ತ ಕಿಸಾನ್ ಮೋರ್ಚಾದಿಂದ ಆಯೋಜನೆ

ರೈತರ ದುಂಡು ಮೇಜಿನ ಅಧಿವೇಶನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ(ರಾಜಕೀಯೇತರ) ವತಿಯಿಂದ ಸೆಪ್ಟೆಂಬರ್ 25ರಂದು ಗಾಂಧಿಭವನದಲ್ಲಿ 'ರೈತರ ದುಂಡು ಮೇಜಿನ ಅಧಿವೇಶನ' ಮತ್ತು 26ರಂದು ಬೃಹತ್ ರ್‍ಯಾಲಿ ಹಮ್ಮಿಕೊಳ್ಳಲಾಗುವುದು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ತಿಳಿಸಿದರು.

'ಪ್ರಸಕ್ತ ಸಾಲಿನ ಕಬ್ಬಿನ ಎಫ್.ಆರ್.ಪಿ. ದರ ಕನಿಷ್ಠ ₹3,500ಕ್ಕೆ ನಿಗದಿಗೊಳಿಸಬೇಕು. ಕೃಷಿ ಪಂಪಸೆಟ್‌ಗಳಿಗೆ ಉಚಿತವಾಗಿ ನೀಡುತ್ತಿರುವ ವಿದ್ಯುತ್ ಸ್ಥಗಿತಗೊಳಿಸುವ ಮತ್ತು ವಿದ್ಯುತ್ ಖಾಸಗೀಕರಣ ಮಾಡುವ ಕಾಯ್ದೆಯನ್ನು ಕೈಬಿಡಬೇಕು. ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಕೃಷಿ ಕ್ಷೇತ್ರ ಮತ್ತಷ್ಟು ಸಮಸ್ಯೆಗೆ ಸಿಲುಕಲಿದೆ' ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'ಪ್ರಧಾನಿ ನರೇಂದ್ರ ಮೋದಿ 2022ಕ್ಕೆ ರೈತರ ಆದಾಯ ದ್ವಿಗುಣಗೊಳಿಸಲಾಗುವುದು ಎಂದು ಪದೇ ಪದೇ ಸುಳ್ಳು ಹೇಳುತ್ತಿದ್ದಾರೆ. ಆದರೆ ನಿರಂತರವಾಗಿ ಗೊಬ್ಬರ, ಕೀಟನಾಶಕ, ಡೀಸೆಲ್‌ಗಳ ಬೆಲೆಗಳನ್ನು ಏರಿಕೆ ಮಾಡಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ 3.5 ಲಕ್ಷ ರೈತರು ಆತ್ಮಹತ್ಯ ಮಾಡಿಕೊಂಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಈ ಅಧಿವೇಶನದಲ್ಲಿ ವಿದ್ಯುತ್ ಖಾಸಗೀಕರಣ, ಕಬ್ಬಿನ ನ್ಯಾಯಂಗ ದರ ನಿಗದಿ, ಜಿಎಸ್‌ಟಿ ರದ್ದು, ಸಾಲ ಮನ್ನಾ, ರೈತ ಹೋರಾಟದಲ್ಲಿ ಮರಣ ಹೊಂದಿದ 750 ರೈತರ ಕುಟುಂಬಗಳಿಗೆ ಪರಿಹಾರ ನೀಡುವ ವಿಚಾರಗಳನ್ನು ಚರ್ಚಿಸಲಾಗುವುದು. ರಾಷ್ಟ್ರೀಯ ರೈತ ನಾಯಕರ ನೇತೃತ್ವದಲ್ಲಿ ದಕ್ಷಿಣ ಭಾರತದಿಂದಲೇ ಬೃಹತ್ ಚಳವಳಿಗೆ ಚಾಲನೆ ನೀಡಲಾಗುವುದು' ಎಂದು ಅವರು ಮಾಹಿತಿ ನೀಡಿದರು.

'ಪ್ರಚಾರಕ್ಕಾಗಿ ಡ್ಯಾನ್ಸ್ ಮಾಡುತ್ತಿರುವ ಅವಿವೇಕಿಗಳು'

'ರಾಜ್ಯದಲ್ಲಿ ಅತಿವೃಷ್ಟಿಯಿಂದ 10 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. ಆದರೆ ಅವಿವೇಕಿ ಸಚಿವರು, ಶಾಸಕರು ಕೇವಲ ಪ್ರಚಾರಕ್ಕಾಗಿ ಡ್ಯಾನ್ಸ್ ಮಾಡುತ್ತಿದ್ದಾರೆ' ಎಂದು ಕುರುಬೂರು ಶಾಂತಕುಮಾರ್ ವ್ಯಂಗ್ಯವಾಡಿದರು.

'ಮೂರು ಕೃಷಿ ಕಾಯ್ದೆಗಳನ್ನು ರದ್ದು ಪಡಿಸುವುದಿಲ್ಲ ಎಂದು ಹೇಳಿಕೆ ನೀಡಿರುವ ಸಹಕಾರ ಸಚಿವರು ಎಪಿಎಂಸಿ ಕಾಯ್ದೆ ಜಾರಿ ಮಾಡುವಾಗ ರೈತರೊಂದಿಗೆ ಮಾತನಾಡಿರುವುದಾಗಿ ಸುಳ್ಳು ಹೇಳುತ್ತಿದ್ದಾರೆ. ಯಾರೊಂದಿಗೂ ಚರ್ಚಿಸದೆ ಈ ಕಾಯ್ದೆ ಜಾರಿ ಮಾಡಲಾಗಿದೆ' ಎಂದು ಅವರು ಹೇಳಿದರು.

ಮುಖ್ಯಮಂತ್ರಿಯನ್ನು ದೂರಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ

‘ಪೌಲ್ ನೇಮಕ ಮಾಡಿದ್ದೇ ಬೊಮ್ಮಾಯಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿ ಹಗರಣದಲ್ಲಿ ಬಂಧಿತರಾಗಿರುವ ಎಡಿಜಿಪಿ ಅಮೃತ್ ಪೌಲ್ ಅವರು ನೇಮಕವಾಗಿದ್ದೇ ಬಸವರಾಜ ಬೊಮ್ಮಾಯಿ ಅವರು ಗೃಹ ಸಚಿವರಾಗಿದ್ದಾಗ. ಪೌಲ್ ಬಗ್ಗೆ ದೂರುಗಳಿದ್ದರೂ, ಪ್ರಮುಖ ಹುದ್ದೆ ನೀಡಿದ್ದರು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದರು.

ಕಲಾಪ ಮುಂದೂಡಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದ ಅವರು, ಪಿಎಸ್ಐ ಹಗರಣ ಬಯಲಿಗೆ ಎಳೆದದ್ದೇ ಕಾಂಗ್ರೆಸ್. ಸಿಐಡಿ ದಾಳಿ ನಂತರ ಪೌಲ್ ಅವರನ್ನು ವರ್ಗಾವಣೆ ಮಾಡಿದ್ದರು. ಒತ್ತಡ ಹೆಚ್ಚಾದ ಮೇಲೆ ಬಂಧಿಸಿದರು’ ಎಂದರು.

“ಸ್ಕ್ಯಾಮ್ ರಾಮಯ್ಯ’ ಸುಳ್ಳಿನ ಕಂತೆ’

ಬಿಜೆಪಿ ಹೊರತಂದಿರುವ ‘ಸಿದ್ದರಾಮಯ್ಯ, ಸ್ಕ್ಯಾಮ್ ರಾಮಯ್ಯ’ ಎಂಬ ಪುಸ್ತಕದಲ್ಲಿನ ಯಾವುದಾದರೂ ಒಂದು ಆರೋಪವನ್ನು ಈ ಸರ್ಕಾರ ಮೂರು ವರ್ಷಗಳಲ್ಲಿ ಸದನದ ಒಳಗೆ, ಹೊರಗೆ ಪ್ರಸ್ತಾಪ ಮಾಡಿದೆಯೇ? ಯಾವ ಆರೋಪದಲ್ಲೂ ಸತ್ಯವಿಲ್ಲ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಪುಸ್ತಕದಲ್ಲಿ ತಪ್ಪು ತಪ್ಪಾಗಿ, ಸುಳ್ಳು ಮಾಹಿತಿಗಳನ್ನು ನೀಡಿದ್ದಾರೆ. ಅವರು ಉಲ್ಲೇಖಿಸಿರುವ ಬಹುತೇಕ ವಿಷಯಗಳಲ್ಲಿ ಸಿಬಿಐ ‘ಬಿ ರಿಪೋರ್ಟ್’ ಹಾಕಿದೆ. ಆದರೂ, ಅವರಿಗೆ ಮಾನಮರ್ಯಾದೆ ಇಲ್ಲ. ಪುಸ್ತಕ ಮುದ್ರಣ ಆಗಿರುವುದು ಆರೆಸ್ಸೆಸ್‌ನ ಕಚೇರಿ ಕೇಶವ ಕೃಪಾದಲ್ಲಿ ಎಂದರು.

ರೀ-ಡೂ ಮಾಡಿ ಎಂದು ಹೇಳಿದ್ದು ನ್ಯಾಯಾಲಯ. ನ್ಯಾಯಮೂರ್ತಿ ಕೆಂಪಣ್ಣ ಅವರ ಅವರ ವರದಿಯಲ್ಲಿ ಸಿದ್ದರಾಮಯ್ಯ ಅವರು ಯಾವುದೇ ಡಿನೋಟಿಫಿಕೇಷನ್ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಐಎಎಸ್ ಅಧಿಕಾರಿ ಡಿ.ಕೆ.ರವಿ, ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ, ಅಕ್ರಮ ಲಾಟರಿ ಸೇರಿದಂತೆ ಹಲವು ಪ್ರಕರಣಗಳಲ್ಲಿ ಸಿಬಿಐ ರಿಪೋರ್ಟ್ ನೀಡಿದೆ. ನರೇಂದ್ರ ಮೋದಿ ಅವರೇ ಪ್ರಧಾನಿಯಾಗಿದ್ದರು ಎಂದರು.

‘ಇಲ್ಲಿಯವರೆಗೂ ಎಡಿಜಿಪಿ ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ಸಿಆರ್‌ಪಿಸಿ 164ರ ಹೇಳಿಕೆ ಕೊಡಿಸಿಲ್ಲ. ಅವರ ಮಂಪರು ಪರೀಕ್ಷೆ ಆಗಬೇಕು. ಆಗ ಇದರ ಹಿಂದೆ ಇರುವ ರಾಜಕಾರಣಿಗಳ ಹೆಸರು ಬಯಲಿಗೆ ಬರುತ್ತದೆ’ ಎಂದರು.

‘ಬಿಜೆಪಿ ಶಾಸಕ ಬಸವರಾಜ ದಢೇಸೂಗುರ್ ಅವರು ಆಡಿಯೊದಲ್ಲಿನ ಧ್ವನಿ ನನ್ನದೆ, ನಾನು ₹ 15 ಲಕ್ಷ ತೆಗೆದುಕೊಂಡಿರುವುದು ಸತ್ಯ ಎಂದು ಒಪ್ಪಿಕೊಂಡಿದ್ದಾನೆ. ಲಂಚ ಕೊಟ್ಟವರನ್ನೇ ಹೆದರಿಸಿದ್ದಾನೆ. ಅವನ ವಿಚಾರಣೆ ಮಾಡಿಲ್ಲ. ಬಸನಗೌಡ ಪಾಟೀಲ್ ಯತ್ನಾಳ್ ಅವರು ಈ ಹಗರಣದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿ ಮಗನ ಕೈವಾಡವಿದೆ ಎಂದು ಹೇಳಿದ್ದಾರೆ. ಕೈವಾಡವಿರುವುದು ಯಡಿಯೂರಪ್ಪ ಅವರ ಮಗನಾ? ದೇವೇಗೌಡ, ಸಿದ್ದರಾಮಯ್ಯನ ಮಗನಾ’ ಎಂದು ಪ್ರಶ್ನಿಸಿದರು.

ಲಂಚದ ಹಣವನ್ನು ಸರ್ಕಾರಕ್ಕೆ ನೀಡಿದ್ದೇನೆ ಎಂದು ದಢೇಸೂಗುರ್ ಹೇಳಿದ್ದಾರೆ. ಈಗ ಯಾವ ಸರ್ಕಾರ ಇದೆ? ಹಣಕೊಟ್ಟಿರುವುದು ಮುಖ್ಯಮಂತ್ರಿಗಾ? ಗೃಹ ಸಚಿವರಿಗಾ? ಹಗರಣದಲ್ಲಿ 92 ಜನರ ಬಂಧನವಾಗಿದೆ. ಆದರೆ, ಅವರಲ್ಲಿ ಒಬ್ಬ ರಾಜಕಾರಣಿಯೂ ಇಲ್ಲವೇ ಎಂದು ಕುಟುಕಿದರು.

ಎಸ್‌ಸಿಪಿ–ಟಿಎಸ್‌ಪಿ: ಸೆಕ್ಷನ್ 7ಡಿ ರದ್ದುಪಡಿಸಲು ಬಿಎಸ್‌ಪಿ ಒತ್ತಾಯ

ಪ್ರಜಾವಾಣಿ ವಾರ್ತೆ



ಮಾರಸಂದ್ರ ಮುನಿಯಪ್ಪ

ಬೆಂಗಳೂರು: ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಕಾಯ್ದೆಯಲ್ಲಿನ 7ಡಿ ಸೆಕ್ಷನ್ ರದ್ದುಗೊಳಿಸುವಂತೆ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಅವರು ಒತ್ತಾಯಿಸಿದ್ದಾರೆ.

ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಶೇ 24.1ರಷ್ಟು ಹಣ ಮೀಸಲಿಟ್ಟು, ಅದೇ ಸಮುದಾಯಕ್ಕೆ ಖರ್ಚು ಮಾಡಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈ ಕಾಯ್ದೆಯನ್ನು ಜಾರಿಗೆ ತಂದಿದೆ. ಅನುದಾನವನ್ನು ಬೇರೆ ಕಾಮಗಾರಿಗೆ ವರ್ಗಾವಣೆ ಮಾಡಿಕೊಳ್ಳಲು ಮುಖ್ಯಮಂತ್ರಿಗೆ ಪರಮಾಧಿಕಾರ (7ಡಿ ಮೂಲಕ) ನೀಡಲಾಗಿದೆ. ಇದರಿಂದ ಕಾಯ್ದೆಯ ಉದ್ದೇಶವೇ ಬುಡಮೇಲಾಗುತ್ತಿದೆ ಎಂದು ದೂರಿದ್ದಾರೆ.

‘ಬಜೆಟ್‌ನಲ್ಲಿ ಮೇಲ್ನೋಟಕ್ಕೆ ಶೇ 24.1ರಷ್ಟು ಹಣ ನಿಗದಿ ಮಾಡಿ ಬಳಿಕ ಬೇರೆ ಯೋಜನೆಗೆ ವರ್ಗಾವಣೆ ಮಾಡಿಕೊಳ್ಳಲಾಗುತ್ತಿದೆ. ಲೋಕೋಪಯೋಗಿ ಇಲಾಖೆ, ಶಿಕ್ಷಣ ಇಲಾಖೆ, ಜಲಸಂಪನ್ಮೂಲ ಇಲಾಖೆ, ಶ್ರೀಮಂತರು ವಾಸ ಮಾಡುವ ಮನೆಗಳ ಮುಂದೆ ಗ್ರಾನೈಟ್ ಹಾಕಲು ಹೀಗೆ 2013ರಿಂದ ಈವರೆಗೆ ₹80 ಸಾವಿರ ಕೋಟಿ ಮೊತ್ತವನ್ನು ವರ್ಗಾವಣೆ ಮಾಡಿಕೊಳ್ಳಲಾಗಿದೆ. 2021ರಲ್ಲಿ ₹8 ಸಾವಿರ ಕೋಟಿಯನ್ನು ಕೋವಿಡ್ ನಿರ್ವಹಣೆಗೆ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಈ ರೀತಿ ಅನ್ಯಾಯ ಮಾಡಿದರೆ ಅವರ ಅಭಿವೃದ್ಧಿ ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘7ಡಿ ಸೆಕ್ಷನ್ ರದ್ದುಪಡಿಸುವಂತೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಸಮುದಾಯಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ 7ಡಿ ರದ್ದುಗೊಳಿಸಬೇಕು. ಅನುದಾನ ದುರ್ಬಳಕೆ ಮಾಡಿಕೊಂಡಿರುವ ಮಂತ್ರಿಗಳು, ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು’ ಎಂದು ಒತ್ತಾಯಿಸಿದ್ದಾರೆ.



ಪ್ರತಿಭಟನೆ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ವಿಧಾನಪರಿಷತ್‌ನ ಬಿಜೆಪಿ ಸದಸ್ಯರು ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಎನ್‌ಇಪಿಯಲ್ಲಿ ಸ್ಥಳೀಯ ಇತಿಹಾಸ ಕಡೆಗಣನೆ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶೂನ್ಯ ವೇಳೆಯಲ್ಲಿ ಪ್ರಸ್ತಾಪ
- ಅಧಿಕಾರಿಗಳಿಗೆ ಎಚ್ಚರಿಕೆ ನೀಡಲು ಸ್ಪೀಕರ್ ಸೂಚನೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ಸ್ಥಳೀಯ ಇತಿಹಾಸಕ್ಕೆ ಸಂಬಂಧಿಸಿದ ಪಠ್ಯಕ್ರಮ ಅಳವಡಿಕೆ ಮಾಡುವಲ್ಲಿ ವಿಫಲವಾಗಿರುವ ಮಂಗಳೂರು ವಿಶ್ವವಿದ್ಯಾಲಯದ ವಿರುದ್ಧ ಕ್ರಮ ಜರುಗಿಸಬೇಕು ಎಂದು ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಸರ್ಕಾರವನ್ನು ಆಗ್ರಹಿಸಿದರು.

ಗುರುವಾರ ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಯ ಸ್ಥಳೀಯ ಇತಿಹಾಸಕ್ಕೆ ಸಂಬಂಧಿಸಿದ ಪಠ್ಯ ಅಳವಡಿಸಲು ಅವಕಾಶವಿತ್ತು. ಆದರೆ, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ಪ್ರಸ್ತಾವ ಸಲ್ಲಿಸಿ, ಒಪ್ಪಿಗೆ ಪಡೆಯಬೇಕಿತ್ತು. ಆದರೆ, ಮಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳು ಈ ಕೆಲಸ ಮಾಡದೆ ಲೋಪ ಎಸಗಿದ್ದಾರೆ’ ಎಂದರು.

ಉತ್ತರ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ‘ಈ ವಿಚಾರದಲ್ಲಿ ವಿಶ್ವವಿದ್ಯಾಲಯದ ಆಡಳಿತವೇ ಕ್ರಮ ಕೈಗೊಳ್ಳಬೇಕಿತ್ತು. ಸರ್ಕಾರದ ಪಾತ್ರ ಏನೂ ಇಲ್ಲ. ವಿಶ್ವವಿದ್ಯಾಲಯ ಪಠ್ಯಕ್ರಮ ಅಳವಡಿಸಲು ಪ್ರಸ್ತಾವ ಸಲ್ಲಿಸಿದ್ದರೆ ಉನ್ನತ ಶಿಕ್ಷಣ ಪರಿಷತ್ ಅನುಮೋದನೆ ನೀಡುತ್ತಿತ್ತು’ ಎಂದು ತಿಳಿಸಿದರು.

‘ತಪ್ಪು ಮಾಡಿದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಬೇಕು’ ಎಂದು ಖಾದರ್ ಆಗ್ರಹಿಸಿದರು. ಎಚ್ಚರಿಕೆ ನೀಡುವಂತೆ ಸ್ಪೀಕರ್ ಕಾಗೇರಿ ಕೂಡ ಸೂಚಿಸಿದರು. ಇದಕ್ಕೆ ಸಚಿವರು ಒಪ್ಪಿಕೊಂಡರು.

ಸಾರ್ವಜನಿಕ ಉಪಯೋಗದ ಒತ್ತುವರಿ ಸಕ್ರಮ: ಕಾಯ್ದೆಗೆ ತಿದ್ದುಪಡಿ

ಬೆಂಗಳೂರು: ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರಿ ಭೂಮಿಯನ್ನು ಉಪಯೋಗಿಸಿಕೊಂಡಿದ್ದರೆ ಅದಕ್ಕೆ ಅಭಿವೃದ್ಧಿ ಹಕ್ಕು ಪ್ರಮಾಣಪತ್ರ (ಡಿ ಆರ್ ಸಿ) ನೀಡಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗೆ ರಾಜ್ಯ ಸರ್ಕಾರ ತಿದ್ದುಪಡಿ ತಂದಿದೆ.

ಈ ಕಾಯ್ದೆ ಜಾರಿಯಾಗುವ ಮುನ್ನ ಯಾವುದೇ ರೀತಿಯ ಅಭಿವೃದ್ಧಿ ಆಗಿದ್ದರೆ ಅವರು ಅರ್ಜಿ ಸಲ್ಲಿಸಿ ಪ್ರಮಾಣಪತ್ರ ಪಡೆಯಬಹುದು ಎಂದು ಸೆ.23ರಂದು ತಡರಾತ್ರಿ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕಾಯ್ದೆ 2021ರ ನವೆಂಬರ್ ನಲ್ಲಿ ಜಾರಿಯಾಗಿದ್ದು, ಇದಕ್ಕೂ ಮೊದಲು ಸರ್ಕಾರಿ ಜಾಗವನ್ನು ಅತಿಕ್ರಮಿಸಿ ಸಾರ್ವಜನಿಕ ಉಪಯೋಗಕ್ಕಾಗಿ ಕಟ್ಟಡ ನಿರ್ಮಿಸಿದ್ದರೂ ಅದಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ಸಲ್ಲಿಸಿ ಅಭಿವೃದ್ಧಿ ಹಕ್ಕು ಪ್ರಮಾಣಪತ್ರ ಪಡೆಯಬಹುದು ಎಂದು ಹೇಳಲಾಗಿದೆ.

ಬಿಎಂಟಿಸಿ: ₹665 ಕೋಟಿ ಸಾಲ ಬಾಕಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ಕಳೆದ ಐದು ವರ್ಷಗಳಲ್ಲಿ ₹1324.9 ಕೋಟಿ ಸಾಲ ಪಡೆದಿದ್ದು, ₹679 ಕೋಟಿ ಮರುಪಾವತಿಸಿದೆ’ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಕೆ. ಗೋವಿಂದರಾಜ್ ಅವರ ಪರವಾಗಿ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಈಗ ₹665 ಕೋಟಿ ಸಾಲ ಪಾವತಿಸುವುದು ಬಾಕಿ ಉಳಿದಿದೆ’ ಎಂದು ತಿಳಿಸಿದರು.

ಬಸ್ ಘಟಕಗಳು ಮತ್ತು ಕಾರ್ಯಾಗಾರಗಳ ಅಭಿವೃದ್ಧಿ, ಬಸ್‌ಗಳ ಖರೀದಿ ಮತ್ತು ಭವಿಷ್ಯ ನಿಧಿ ಬಾಕಿ ಪಾವತಿಸಲು ಸಾಲದ ಮೊತ್ತವನ್ನು ಬಳಸಲಾಗಿದೆ. ಸರ್ಕಾರದಿಂದಲೂ ಅನುದಾನ ದೊರೆಯಬೇಕಾಗಿದೆ. ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ಮತ್ತು ಶಾಲಾ ಮಕ್ಕಳ ಬಸ್ ಪಾಸ್‌ಗೆ ಸಂಬಂಧಿಸಿದ ಮೊತ್ತವನ್ನು ಸರ್ಕಾರ ಪಾವತಿಸಬೇಕಾಗಿದೆ ಎಂದು ವಿವರಿಸಿದರು.

ಯು.ಬಿ. ವೆಂಕಟೇಶ್ ಪ್ರತಿಕ್ರಿಯಿಸಿ, ‘ಬಿಎಂಟಿಸಿಯ ಹಲವು ಕಟ್ಟಡಗಳು ಖಾಲಿ ಉಳಿದಿವೆ. ಈ ಕಟ್ಟಡಗಳನ್ನು ಬಾಡಿಗೆಗೆ ನೀಡಿ ಆದಾಯ ಗಳಿಸಿ’ ಎಂದು ಸಲಹೆ ನೀಡಿದರು.

ಭಾರತ್ ಜೋಡೊ: ಕಾಂಗ್ರೆಸ್ ಶಾಸಕರ ಸಂಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್‌ಗಾಂಧಿಯವರ ‘ಭಾರತ್ ಜೋಡೊ’ ಯಾತ್ರೆಗೆ ಪಕ್ಷದ ಪ್ರತಿಯೊಬ್ಬ ಶಾಸಕ ತಲಾ 5,000 ಜನರನ್ನು ಕರೆದು ತರಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಂಖ್ಯೆ ನಿಗದಿ ಮಾಡಿರುವ ಬಗ್ಗೆ ಆ ಪಕ್ಷದ ಶಾಸಕರೇ ಅಪಸ್ವರ ತೆಗೆದಿದ್ದಾರೆ.

ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ಬೆಳಿಗ್ಗೆ ನಡೆದ ಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಹಲವು ಶಾಸಕರು ತಮಗಿರುವ ಸಮಸ್ಯೆಗಳನ್ನು ಹೇಳಿಕೊಂಡರು. ಯಾವುದೇ ಸಬೂಬು ಇಲ್ಲದೇ ನಿಗದಿ ಮಾಡಿದ ಸಂಖ್ಯೆಯಷ್ಟು ಜನರನ್ನು ಕರೆ ತರಲೇಬೇಕು ಎಂದು ಅವರು ತಾಕೀತು ಮಾಡಿದರೆಂದು ಮೂಲಗಳು ಹೇಳಿವೆ.

ವಿಧಾನಸಭೆಯ ಮೊಗಸಾಲೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಕಾಂಗ್ರೆಸ್‌ನ ಕೆಲವು ಶಾಸಕರು ತಮ್ಮ ಅಸಹಾಯಕತೆ ತೋಡಿಕೊಂಡರು. ‘ಇಷ್ಟು ದೊಡ್ಡ ಸಂಖ್ಯೆಯ ಜನರನ್ನು ತರುವುದು ಬಹಳ ಕಷ್ಟ. ಯಾತ್ರೆಯ ಸಂದರ್ಭದಲ್ಲಿ ಸರಿಯಾದ ಸಮಯಕ್ಕೆ ಜನರನ್ನು ಕರೆದು ತರಬೇಕು ಎಂದೂ ಹೇಳಿದ್ದಾರೆ. ಸಮಯಪಾಲನೆ ಮತ್ತು ಅದಕ್ಕೆ ಆಗುವ ಖರ್ಚು ವೆಚ್ಚ ಹೊಂದಿಸುವುದು ಎಲ್ಲ ಶಾಸಕರಿಗೂ ಕಷ್ಟ’ ಎಂದು ಶಾಸಕರೊಬ್ಬರು ಹೇಳಿದರು.

‘ಯಾತ್ರೆಗಾಗಿ ಕರೆದುಕೊಂಡು ಬಂದ ಜನರಿಗೆ ಊಟ, ತಿಂಡಿ ವ್ಯವಸ್ಥೆ, ಸ್ನಾನ- ಶೌಚದ ವ್ಯವಸ್ಥೆ ಮಾಡಬೇಕು. ಸರಿಯಾದ ವ್ಯವಸ್ಥೆ ಮಾಡಿಲ್ಲವೆಂದರೆ, ಜನ ಸಿಟ್ಟಿಗೇಳುತ್ತಾರೆ. ಅವರನ್ನು ನಿಭಾಯಿಸುವುದು ಕಷ್ಟವಾಗುತ್ತದೆ’ ಎಂದು ಮತ್ತೊಬ್ಬ ಶಾಸಕರು ಹೇಳಿದರು.

‘ಈ ವಿಷಯ ಸಿದ್ದರಾಮಯ್ಯ ಅವರಿಗೆ ಹೇಳಿದರೆ ಅರ್ಥವಾಗುತ್ತದೆ. ಅಧ್ಯಕ್ಷರಿಗೆ ಅರ್ಥವೂ ಆಗುವುದಿಲ್ಲ ಯಾರ ಮಾತೂ ಕೇಳುವುದಿಲ್ಲ’ ಎಂದು ಶಾಸಕರು ಅಸಹಾಯಕತೆ ವ್ಯಕ್ತಪಡಿಸಿದರು.

‘5,000 ಜನರಿಗೆ 200 ಬಸ್ ಬೇಕು’

‘5,000 ಜನರನ್ನು ಕರೆದುಕೊಂಡು ಬರಬೇಕು ಎಂದರೆ ಕನಿಷ್ಠ 200 ಬಸ್ಸುಗಳು ಬೇಕು. ಅಷ್ಟು ಬಸ್ಸುಗಳನ್ನು ಹೊಂದಿಸುವುದು ಎಲ್ಲಿಂದ. ಉತ್ತರ ಕರ್ನಾಟಕ ಭಾಗದಲ್ಲಿ ಅಷ್ಟು ಸಂಖ್ಯೆಯ ಬಸ್ಸುಗಳೂ ಸಿಗುವುದಿಲ್ಲ. ರಾಹುಲ್‌ಗಾಂಧಿ ಪ್ರತಿ ದಿನ ಬೆಳಿಗ್ಗೆ 6.45 ಕ್ಕೆ ಸರಿಯಾಗಿ ಪಾದಯಾತ್ರೆ ಹೊರಡುತ್ತಾರೆ. ನಾವು ರಾತ್ರಿ ನೂರಾರು ಕಿ.ಮಿ ಬಸ್‌ನಲ್ಲಿ ಪ್ರಯಾಣ ಮಾಡಿಸಿ ಜನರನ್ನು ಆ ಸಮಯಕ್ಕೆ ಸರಿಯಾಗಿ ಕರೆತರಬೇಕು. ತಡವಾದರೆ ಯಾತ್ರೆ ಮುಂದಕ್ಕೆ ಹೋಗುತ್ತಾರೆ. ಆ ರೀತಿ ಆದರೆ ಕರೆತಂದದ್ದು ವ್ಯರ್ಥವಾಗುತ್ತದೆ’ ಎಂದು ಶಾಸಕರು ತಿಳಿಸಿದರು.

ಮುಖ್ಯಾಂಶಗಳು

- ಯಾತ್ರೆಗೆ ಕರೆತರುವ ಜನರ ಸಂಖ್ಯೆ ನಿಗದಿ ಮಾಡಿರುವ ಡಿ.ಕೆ. ಶಿವಕುಮಾರ್
- ಕೆಪಿಸಿಸಿ ಅಧ್ಯಕ್ಷರ ಬಳಿ ಸಮಸ್ಯೆ ಹೇಳಿಕೊಂಡ ಶಾಸಕರು
- ಸಬೂಬು ಹೇಳದೇ ಜನರನ್ನು ಕರೆತರಲು ಸೂಚನೆ

ಸಂಕ್ಷಿಪ್ತ ಸುದ್ದಿ

‘ವಿದೇಶದಲ್ಲಿರುವ ಸದಸ್ಯರಿಂದ ಪಿಎಫ್‌ಐಗೆ ಹಣ’

ನವದೆಹಲಿ (ಪಿಟಿಐ): ವಿದೇಶಗಳಲ್ಲಿರುವ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ಕೆಲ ಸದಸ್ಯರು ಭಾರತದಲ್ಲಿರುವ ಅವರ ಎನ್‌ಆರ್‌ಐ ಖಾತೆಗಳಿಗೆ ಹಣ ಕಳುಹಿಸುತ್ತಿದ್ದು, ಈ ಹಣವನ್ನು ಸಂಘಟನೆಯ ಮುಖಂಡರಿಗೆ ವರ್ಗಾಯಿಸಲಾಗುತ್ತಿತ್ತು ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಹೇಳಿದೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಿಂದ (ಎಫ್‌ಸಿಆರ್‌ಎ) ತಪ್ಪಿಸಿಕೊಳ್ಳಲು ಸಂಘಟನೆಯ ಸದಸ್ಯರು ಈ ತಂತ್ರ ಅನುಸರಿಸುತ್ತಿದ್ದರು ಎಂದು ಇ.ಡಿ ತಿಳಿಸಿದೆ.

‘ವಿದೇಶಗಳಿಂದ ಸಂದಾಯವಾಗುತ್ತಿದ್ದ ಹಣ ಕುರಿತ ಮಾಹಿತಿಯನ್ನು ಸರ್ಕಾರಿ ಸಂಸ್ಥೆಗಳಿಂದ ಮುಚ್ಚಿಡಲಾಗುತ್ತಿತ್ತು. ಪಿಎಫ್‌ಐ, ಎಫ್‌ಸಿಆರ್‌ಎ ಅಡಿ ನೋಂದಾಯಿತ ಸಂಘಟನೆಯಲ್ಲ. ಹೀಗಾಗಿ, ಈ ರೀತಿ ಹಣ ಸಂಗ್ರಹಿಸುವಾಗ ಸಂಬಂಧಿಸಿದ ಕಾನೂನನ್ನು ಪಿಎಫ್‌ಐ ಪಾಲಿಸುತ್ತಿರಲಿಲ್ಲ’ ಎಂದೂ ಹೇಳಿದೆ.

ಎಫ್‌ಸಿಆರ್‌ಎ: ಅವಧಿ ವಿಸ್ತರಣೆ

ನವದೆಹಲಿ: ಸ್ವಯಂ ಸೇವಾ ಸಂಸ್ಥೆಗಳು ಹೊಂದಿರುವ ‘ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ’ಯಡಿ (ಎಫ್‌ಸಿಆರ್‌ಎ) ನೋಂದಣಿಯ ಸಿಂಧುತ್ವ ಹಾಗೂ ಅರ್ಜಿಗಳ ನವೀಕರಿಸುವುದಕ್ಕೆ ಸಂಬಂಧಿಸಿದ ಅವಧಿಯನ್ನು ಮುಂದಿನ ವರ್ಷ ಮಾರ್ಚ್ 31ರ ವರೆಗೆ ವಿಸ್ತರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಬೂಕರ್ ಪ್ರಶಸ್ತಿ ಪುರಸ್ಕೃತೆ ಹಿಲರಿ ಮಾಂಟೆಲ್ ನಿಧನ



ಲಂಡನ್ (ಎಎಫ್‌ಪಿ): ಎರಡು ಬಾರಿ ಪ್ರತಿಷ್ಠಿತ ಬೂಕರ್ ಪ್ರಶಸ್ತಿಗೆ ಭಾಜನರಾದ ಮೊದಲ ಬ್ರಿಟಿಷ್ ಲೇಖಕಿ, ಕಾದಂಬರಿಗಾರ್ತಿ ಹಿಲರಿ ಮಾಂಟೆಲ್ (70) ನಿಧನರಾದರು ಎಂದು ಪ್ರಕಾಶಕ ಸಂಸ್ಥೆ 4ನೇ ಎಸ್ಟೇಟ್ ಬುಕ್ಸ್ ಶುಕ್ರವಾರ ತಿಳಿಸಿದೆ.

ವೂಲ್ಫ್ ಹಾಲ್ ಮತ್ತು ಬ್ರಿಂಗ್ ಅಪ್ ದ ಬಾಡೀಸ್ ಕೃತಿಗೆ ಮಾಂಟೆಲ್ ಅವರಿಗೆ ಬೂಕರ್ ಪ್ರಶಸ್ತಿ ಲಭಿಸಿತ್ತು.

ಕನ್ನಡ ಶಾಲೆಗಳ ಕಡೆಗಣನೆ ಸಹಿಸಲಾಗದು: ಮಹೇಶ ಜೋಷಿ

ಬೆಂಗಳೂರು: ‘ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಲಿಂಗನಮಠ ಗ್ರಾಮದ ಕನ್ನಡ ಶಾಲೆಯ ಕಟ್ಟಡ ದುರಸ್ತಿಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅನುದಾನವಿಲ್ಲ ಎಂದು ಹೇಳಿರುವುದು ಆಕ್ಷೇಪಾರ್ಹ. ಕನ್ನಡ ಶಾಲೆಗಳ ಕಡೆಗಣನೆಯನ್ನು ಯಾವುದೇ ಕಾರಣಕ್ಕೂ ಸಹಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಎಚ್ಚರಿಕೆ ನೀಡಿದ್ದಾರೆ.

‘ಖಾನಾಪುರ ತಾಲ್ಲೂಕು ಗಡಿ ಪ್ರದೇಶದಲ್ಲಿದ್ದು, ಈ ಭಾಗದಲ್ಲಿ ಕನ್ನಡ ಕಟ್ಟುವ ಕಾರ್ಯ ಮಾಡಬೇಕಾದ ಅಧಿಕಾರಿಗಳು ಮನಸ್ಸಿಗೆ ಬಂದಂತೆ ವರ್ತನೆ ಮಾಡುತ್ತಿದ್ದಾರೆ. ಲಿಂಗನಮಠ ಗ್ರಾಮದಲ್ಲಿರುವ ಶಾಲೆಯ ಒಂದೇ ಆವರಣದಲ್ಲಿ ಕನ್ನಡ ಮತ್ತು ಉರ್ದು ಮಾಧ್ಯಮದ ಶಾಲೆಗಳಿವೆ. ಎರಡು ಶಾಲೆಗಳ ಕಟ್ಟಡಗಳು ಶಿಥಿಲಾವಸ್ಥೆಗೆ ತಲುಪಿವೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಉರ್ದು ಶಾಲೆಯ ಕಟ್ಟಡ ದುರಸ್ತಿಗೆ ಒಪ್ಪಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಕನ್ನಡ ಶಾಲೆಯ ಕಟ್ಟಡ ದುರಸ್ತಿಗೆ ಅನುದಾನ ಕೊರತೆ ಎಂದು ಹೇಳುತ್ತಾರೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು ಉರ್ದು ಶಾಲೆಗೆ ನೀಡುತ್ತಿರುವ ಮನ್ನಣೆ, ಕನ್ನಡ ಶಾಲೆಗೆ ನೀಡದೇ ಇರುವುದು ಖಂಡನಾರ್ಹ. ತಕ್ಷಣ ದುರಸ್ತಿಗೆ ಮುಂದಾಗದಿದ್ದಲ್ಲಿ ಆ ಶಾಲೆಯ ಎದುರೇ ಪ್ರತಿಭಟನೆ ನಡೆಸಲಾಗುವುದು’ ಎಂದು ತಿಳಿಸಿದ್ದಾರೆ.

‘ವಿಶೇಷ ಕೃಷಿ ವಲಯ’ ಘೋಷಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ



ಬೇಡಿಕೆ ಈಡೇರಿಸಲು ಆಗ್ರಹಿಸಿ ಮಲೆನಾಡು ಜನಪರ ಒಕ್ಕೂಟದ ವತಿಯಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಪಶ್ಚಿಮಘಟ್ಟದ ತಪ್ಪಲಿನ ಮಲೆನಾಡು ಪ್ರದೇಶವನ್ನು ‘ವಿಶೇಷ ಕೃಷಿ ವಲಯ’ವಾಗಿ ಘೋಷಿಸುವಂತೆ ಆಗ್ರಹಿಸಿ, ‘ಮಲೆನಾಡು ಜನಪರ ಒಕ್ಕೂಟ’ದಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ರೈತರು ಈಚೆಗೆ ಪ್ರತಿಭಟನೆ ನಡೆಸಿದರು.

‘ಮಲೆನಾಡಿನಲ್ಲಿ ಹಾಲಿನ ಸಂಸ್ಕರಣಾ ಘಟಕ ಸ್ಥಾಪಿಸಬೇಕು. ಜನಸಂಖ್ಯೆಯ ಬದಲಿಗೆ ಭೂಪರಿಮಿತಿಯ ಆಧಾರದಲ್ಲಿ ವಿಧಾನಸಭೆ ಹಾಗೂ ಲೋಕಸಭೆ ಕ್ಷೇತ್ರ ಪುನರ್ ವಿಂಗಡಿಸಬೇಕು. ಮಲೆನಾಡು ಜಿಲ್ಲೆಗಳಲ್ಲಿ ಅಡಿಕೆ ಬೆಳೆಗೆ ಎಲೆಚುಕ್ಕೆ ರೋಗ ತಗುಲಿದ್ದು, ರೋಗ ನಿಯಂತ್ರಣಕ್ಕೆ ಸರ್ಕಾರ ಗಮನ ಹರಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೇಶನ, ಆಶ್ರಯ ಬಡಾವಣೆ ನಿರ್ಮಾಣಕ್ಕೆ ಪಂಚಾಯಿತಿವಾರು ಕನಿಷ್ಠ 10 ಎಕರೆ ಸರ್ಕಾರಿ ಭೂಮಿ ನೀಡಬೇಕು. ಕಸ್ತೂರಿ ರಂಗನ್ ವರದಿ ಜಾರಿ ಹಾಗೂ ಹುಲಿ ಯೋಜನೆ ವಿಸ್ತರಣೆ ಕೈಬಿಡಬೇಕು’ ಎಂದು ಆಗ್ರಹಿಸಿದರು.

‘ಪಾರಂಪರಿಕ ಅರಣ್ಯ ಕಾಯ್ದೆ ಅಡಿ ಭೂ ಮಂಜೂರಾತಿ ಕಾಲ ಮಿತಿ ಹಾಗೂ ಅಗತ್ಯ ದಾಖಲೆ ಸಲ್ಲಿಕೆಯ ಅವಧಿ ಕಡಿತಗೊಳಿಸಿ 25 ವರ್ಷಕ್ಕೆ ನಿಗದಿ ಮಾಡಬೇಕು’ ಎಂದು ಆಗ್ರಹಿಸಿದರು.

‘ಪ್ರತಿವರ್ಷ ಏಪ್ರಿಲ್ 15ರಂದು ಮಲೆನಾಡು ದಿನವಾಗಿ ಆಚರಿಸಬೇಕು. ಮಲೆನಾಡಿನ ಜನಜೀವನ, ಕೃಷಿ ಪರಂಪರೆ ಜನಪದ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಬೇಕು. ಹಿಂದಿನಂತೆ ರೈತರಿಗೆ ಹಾಗೂ ಬಡವರಿಗೆ ಉಚಿತ ವಿದ್ಯುತ್ ಪೂರೈಸಬೇಕು. ಭಾರಿ ಮಳೆಯಿಂದ ರೈತರಿಗೆ ಅಪಾರ ನಷ್ಟವಾಗಿದ್ದು, ಹೆಚ್ಚಿನ ಮೊತ್ತದ ಪರಿಹಾರ ನೀಡಬೇಕು. ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ನೇಮಿಸಿದ್ದ ಗೋರಖ್ ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರಬೇಕು’ ಎಂದು ಆಗ್ರಹಿಸಿದರು.

‘ಕಾಡುಪ್ರಾಣಿಗಳ ಹಾವಳಿ ಮಿತಿಮೀರಿದ್ದು, ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ಒದಗಿಸಬೇಕು. ಬೆಳೆ ಹಾಗೂ ಜೀವ ರಕ್ಷಣೆಗಾಗಿ ಬಂದೂಕು ಪರವಾನಗಿ ನಿಯಮ ಸರಳೀಕರಿಸಬೇಕು. ಈ ಭಾಗದ ಕೃಷಿ ಕಾರ್ಮಿಕರಿಗೆ, ಕೊನೆಗಾರರಿಗೆ, ತೋಟದ ಕಾರ್ಮಿಕರಿಗೆ ವಿಶೇಷ ಸೇವಾಭತ್ಯೆ ನೀಡಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಶೃಂಗೇರಿ ಕ್ಷೇತ್ರದ ಶಾಸಕ ಪಿ.ಡಿ.ರಾಜೇಗೌಡ, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ, ಕಾಂಗ್ರೆಸ್ ಮುಖಂಡರಾದ ಮೋಟಮ್ಮ, ಕಿಮ್ಮನೆ ರತ್ನಾಕರ ಹಾಗೂ ಬಿ.ಬಿ.ನಿಂಗಯ್ಯ ಭೇಟಿ ನೀಡಿದರು. ಪ್ರತಿಭಟನೆಯಲ್ಲಿ ಒಕ್ಕೂಟದ ಅಧ್ಯಕ್ಷ ಅನಿಲ್ ಹೊಸಕೊಪ್ಪ, ಮುಖಂಡರಾದ ನಾಗರಾಜ್, ವೆಂಕಟೇಶ್, ನವೀನ್, ಸಂತೋಷ್ ಹಾಜರಿದ್ದರು.

ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ನಿವೃತ್ತಿ



ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ಅವರು ಶುಕ್ರವಾರ ನಿವೃತ್ತಿ ಹೊಂದಿದರು. ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಈ ಹುದ್ದೆ ನಿರ್ವಹಿಸಿದ ಅವರು ಸುಪ್ರೀಂಕೋರ್ಟ್‌ನ ಐದನೇ ಹಿರಿಯ ನ್ಯಾಯಮೂರ್ತಿಯಾಗಿದ್ದರು.

ಅವರ ನಿವೃತ್ತಿಯಿಂದಾಗಿ ಸುಪ್ರೀಂಕೋರ್ಟ್‌ನಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಮೂರಕ್ಕೆ ಇಳಿದಿದೆ. ಪ್ರಸ್ತುತ ಹಿಮಾ ಕೊಹ್ಲಿ, ಬಿ.ವಿ. ನಾಗರತ್ನ ಮತ್ತು ಬೇಲಾ ಎಂ. ತ್ರಿವೇದಿ ಅವರು ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬ್ಯಾನರ್ಜಿ ಅವರು ಸುಪ್ರೀಂಕೋರ್ಟ್‌ನ 8ನೇ ಮಹಿಳಾ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

ಮೈಸೂರು ರೇಸ್

ನಾಟಿ ಡ್ಯಾನ್ಸರ್ ಗೆಲ್ಲುವ ನಿರೀಕ್ಷೆ

ಮಹಾರಾಜಾಸ್ ಕಪ್ ಶನಿವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ನಾಟಿ ಡ್ಯಾನ್ಸರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00 ರಿಂದ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಮೈಲ್ ಅರೌಂಡ್ 6, ಕ್ಯಾಪಿಟಲ್ ಗೈನ್ 4, ಟಾಪ್ ರ್‍ಯಾಂಕ್ 5
2ನೇ ರೇಸ್: ಸೆಕ್‌ಮೆಟ್ 1, ಲವ್ 4, ಎಕ್ಸಾಲ್ಟೆಡ್ ಡ್ರೀಮ್ 3
3ನೇ ರೇಸ್: ವರ್ಡ್ಲಿ ವೈಸ್ 5, ವೈಲ್ಡ್ ಎಂಪರರ್ 1, ಈಕೊ ಫ್ರೆಂಡ್ಲಿ 8
4ನೇ ರೇಸ್: ಓ ಹಂಸ್ಲಿನಿ 11, ಮಿಚಿಗಾನ್ ಮೆಲೋಡಿ 9, ಬ್ರನ್‌ಹಿಲ್ಡ್ 4
5ನೇ ರೇಸ್: ನಾಟಿ ಡ್ಯಾನ್ಸರ್ 2, ಟ್ರಫಾಲ್ಗರ್ 8, ಮೈ ಒಪಿನಿಯನ್ 1
6ನೇ ರೇಸ್: ಡಿ ಫೈರ್ 1, ಜಬ್ಬರ್ 2, ವಿಜಯ ಮಿರಾಕಲ್ 3
7ನೇ ರೇಸ್: ಬ್ರ್ಯಾಕ್ಸ್ಟನ್ 2, ಅನ್ನಾಲ್ಡೊ 4, ಕುಶಾಕ್ 3

ಉತ್ತಮ ಬೆಟ್: ಓ ಹಂಸ್ಲಿನಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು



ಟಿ.ಎಸ್. ನಾಗಾಭರಣ

’ಮಾಧ್ಯಮದಲ್ಲಿ ಭಾಷಾ ಕೌಶಲ್ಯ’ ಒಂದು ದಿನದ ತರಬೇತಿ ಶಿಬಿರ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಉಪನ್ಯಾಸ: ರವೀಂದ್ರ ಭಟ್, ಅತಿಥಿಗಳು: ಎಚ್.ಎನ್. ಸುರೇಶ್, ಅಧ್ಯಕ್ಷತೆ: ಸದಾಶಿವ ಶಣೈ, ಆಯೋಜನೆ: ಫ್ಲೇರ್ ಮೀಡಿಯಾ ಮತ್ತು ಭಾರತೀಯ ವಿದ್ಯಾಭವನ, ಸ್ಥಳ: ಕೆ.ಆರ್.ಜೆ ಸಭಾಂಗಣ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 10.30

ದಸರಾ ಸಾಂಸ್ಕೃತಿಕ ಸಂಭ್ರಮ: ಅತಿಥಿಗಳು: ರವಿ ಸುಬ್ರಹ್ಮಣ್ಯ, ಎಂ.ನರಸಿಂಹಮೂರ್ತಿ, ಚಂದ್ರಶೇಖರ್ ಜಾಗೀರ್‌ದಾರ್, ಬಸವರಾಜ್, ಗಣೇಶ್ ಯಾಜಿ, ಆನಂದ ರಾಮರಾವ್, ಆಯೋಜನೆ: ಕಲಾ ರಂಗಲೋಕ, ಸ್ಥಳ: ವಿವೇಕಾನಂದ ಉದ್ಯಾನ, ಗಿರಿನಗರ, ಬೆಳಿಗ್ಗೆ 7.30

ಹೆಬ್ಬಾಳ ಕ್ರಿಕೆಟ್ ಲೀಗ್: ಉದ್ಘಾಟನೆ: ಭಾಸ್ಕರ್ ರಾವ್, ಅತಿಥಿಗಳು: ಮೋಹನ್ ದಾಸರಿ, ಸುರೇಶ್ ರಾಥೋಡ್, ಆಯೋಜನೆ: ಆಮ್ ಆದ್ಮಿ ಪಕ್ಷ, ಸ್ಥಳ: ಎಚ್.ಎಂ.ಟಿ ಆಟದ ಮೈದಾನ, ಆರ್.ಟಿ. ನಗರ, ಬೆಳಿಗ್ಗೆ 8


ವಾರ್ಷಿಕ ದಿನದ ಆಚರಣೆ: ಅತಿಥಿಗಳು: ಬೂದಿಹಾಳ ಬಿ.ಆರ್., ಬಿ.ಎ. ಪಾಟೀಲ್, ಅಧ್ಯಕ್ಷತೆ: ಕಲ್ಯಾಣ ಬಸವರಾಜ್, ಆಯೋಜನೆ: ಎಸ್.ಜೆ.ಆರ್. ಕಾನೂನು ಮಹಾವಿದ್ಯಾಲಯ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಸುಕನ್ಯಾ ಸಮೃದ್ಧಿ ಮಹೋತ್ಸವ: ಅತಿಥಿಗಳು: ಡಿ.ವಿ. ಸದಾನಂದಗೌಡ, ಆರ್. ಮಂಜುನಾಥ್, ಅಧ್ಯಕ್ಷತೆ: ಎಸ್. ರಾಜೇಂದ್ರ ಕುಮಾರ್, ಆಯೋಜನೆ: ಅಂಚೆ ಇಲಾಖೆ, ಸ್ಥಳ: ರೋಟರಿ ಬೆಂಗಳೂರು ಉದ್ಯೋಗ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಳಿಗ್ಗೆ 10

ಎಸ್.ಆರ್. ಫೌಂಡೇಷನ್ ಡೇ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವ: ಉದ್ಘಾಟನೆ: ಅರವಿಂದ ಜತ್ತಿ, ಅತಿಥಿಗಳು: ಟಿ.ಎಚ್. ಅಂಜನಪ್ಪ, ಸುಶೀಲಮ್ಮ, ಶಿವಾನಂದ ತಗಡೂರು, ಇಂದಿರಾ ಕೃಷ್ಣಪ್ಪ, ಶಿವಪುತ್ರಪ್ಪ ಸಂಗಪ್ಪ ಗದಗ್, ಆಯೋಜನೆ: ಎಸ್.ಆರ್. ಫೌಂಡೇಷನ್, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಸೂರ್ಯಮಿತ್ರ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಅರ್ನಬ್ ಘೋಷ್, ಅತಿಥಿಗಳು: ಸುರೇಶ್ ಪ್ರಭು, ಹರೀಶ ಹಂದೆ, ಆಯೋಜನೆ: ಸೆಲ್ಕೋ ಫೌಂಡೇಷನ್, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ ಭವನ, ವಸಂತನಗರ, ಮಧ್ಯಾಹ್ನ 2.30

ಎಚ್.ಎಸ್. ವೆಂಕಟೇಶಮೂರ್ತಿ ಅವರು ಸಂಪಾದಿಸಿದ 12 ಮಕ್ಕಳ ಕೃತಿಗಳ ಬಿಡುಗಡೆ: ಎಸ್.ಜಿ. ಸಿದ್ದರಾಮಯ್ಯ, ಪುಸ್ತಕದ ಕುರಿತು: ಚ.ಹ. ರಘುನಾಥ, ಮಾಲೆಯ ಕುರಿತು: ಎಚ್.ಎಸ್. ವೆಂಕಟೇಶಮೂರ್ತಿ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಆಯೋಜನೆ: ವಸಂತ ಪ್ರಕಾಶನ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)




ಎಸ್.ಜಿ. ಸಿದ್ದರಾಮಯ್ಯ

ಊಂಜಲ್ ಸಂಗೀತೋತ್ಸವ: ಗಾಯನ: ರಂಜನಿ ಕೀರ್ತಿ, ಪಿಟೀಲು: ಕಾರ್ತಿಕೇಯ ರಾಮಚಂದ್ರ, ಮೃದಂಗ: ನಿಕ್ಷಿತ್ ಪುತ್ತೂರು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ವಯ್ಯಾಲಿ ಕಾವಲ್, ಸಂಜೆ 6

ಎಂಜಿನಿಯರ್ಸ್ ದಿನದ ಆಚರಣೆ: ಅತಿಥಿಗಳು: ತೇಜಸ್ವಿ ಸೂರ್ಯ, ಅಂಜುಂ ಪರ್ವೇಜ್, ಜಯಕುಮಾರ್ ಕೆ., ಆಯೋಜನೆ: ಅಸೋಸಿಯೇಷನ್ ಆಫ್ ಕನ್‌ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ಸಂಜೆ 6


’ರಜತನಾದ’ ಉದ್ಘಾಟನಾ ಸಮಾರಂಭ: ಅತಿಥಿಗಳು: ರಾಧಾ ಶ್ರೀಧರ್, ಸುಧಾರಾಣಿ, ಆಯೋಜನೆ: ರಜನಾದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6



ಸುಧಾರಾಣಿ

‘ಜುಪಿಟರ್’ ನಾಟಕದ ಪ್ರದರ್ಶನ: ವಿನ್ಯಾಸ, ನಿರ್ದೇಶನ: ಎಸ್.ವಿ. ಕೃಷ್ಣ ಶರ್ಮಾ, ಕಥೆ: ಸರ್ ಆರ್ಥರ್ ಕಾನನ್ ಡಾಯಲ್, ಸಂಗೀತ: ಅಕ್ಷಯ್ ಭೋಂಸ್ಲೆ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

‘ಕಲಾಕ್ಷೇತ್ರದೊಳ್ ಕಾಳಗ’ ಯಕ್ಷಗಾನ ಪ್ರದರ್ಶನ: ಪ್ರಸ್ತುತಿ: ದೇವ ದಾನವ ಕಾಳಗ, ಪಾಂಡವ ಕೌರವ ಕಾಳಗ, ರಾಮಸೇನೆ ರಾವಣಸೇನೆ ಕಾಳಗ, ಆಯೋಜನೆ: ಯಕ್ಷ ಕನಸು, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ: 9.30



ಚಂದ್ರಶೇಖರ ಕಂಬಾರ

‘ಕಾಡು ಕುದುರೆ ಓಡಿ ಬಂದಿತ್ತಾ’ ಡಾ.ಶಿವಮೊಗ್ಗ ಸುಬ್ಬಣ್ಣ ಅವರಿಗೆ ಗೀತ ನಮನ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ವೈ.ಕೆ. ಮುದ್ದುಕೃಷ್ಣ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್, ಜೆ.ಸಿ. ರಸ್ತೆ, ಸಂಜೆ 4

ಬಿಜೆಪಿಯಿಂದ ಆಯೋಜನೆ • ಐದು ತಂಡಗಳಲ್ಲಿ ಜಿಲ್ಲೆಗಳಿಗೆ ಪ್ರವಾಸ: ಈಶ್ವರಪ್ಪ

ಕಲಬುರಗಿ: ಹಿಂದುಳಿದ ವರ್ಗದವರ ಸಮಾವೇಶ ಅ.30ಕ್ಕೆ

ಪ್ರಜಾವಾಣಿ ವಾರ್ತೆ



ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ಬಿಜೆಪಿಯಿಂದ ಅಕ್ಟೋಬರ್ 30ರಂದು ಕಲಬುರಗಿಯಲ್ಲಿ ಹಿಂದುಳಿದ ವರ್ಗಗಳ ಜಾಗೃತಿ ಸಮಾವೇಶ ನಡೆಯಲಿದೆ. ಅದಕ್ಕೆ ಪೂರ್ವಭಾವಿಯಾಗಿ ಅ. 9ರಂದು ಹುಬ್ಬಳ್ಳಿಯಲ್ಲಿ ಸಭೆ ನಡೆಯಲಿದೆ ಎಂದು ಶಾಸಕ ಕೆ.ಎಸ್. ಈಶ್ವರಪ್ಪ ತಿಳಿಸಿದರು.

‘ಪೂರ್ವಭಾವಿ ಸಭೆಯಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಂದಲೂ 3 ಸಾವಿರಕ್ಕೂ ಹೆಚ್ಚು ಹಿಂದುಳಿದ ವರ್ಗದ ಪ್ರಮುಖರು ಭಾಗವಹಿಸಲಿದ್ದಾರೆ. ಕಲಬುರಗಿ ಸಮಾವೇಶದಲ್ಲಿ 4 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಲಿದ್ದಾರೆ’ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಸಮಾವೇಶದ ಹಿನ್ನೆಲೆಯಲ್ಲಿ ಐದು ತಂಡಗಳಾಗಿ ಪಕ್ಷದ ಮುಖಂಡರು ಪ್ರವಾಸ ಹಮ್ಮಿಕೊಂಡಿದ್ದೇವೆ. ಸೆ.27 ರಂದು ನನ್ನ ನೇತೃತ್ವದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, 30 ರಂದು ಚಾಮರಾಜನಗರ, ಅಕ್ಟೋಬರ್ 1ರಂದು ಮಂಡ್ಯ, ಹಾಸನ, 3ರಂದು ಬೀದರ್ ಪ್ರವಾಸ ಕೈಗೊಳ್ಳಲಾಗುವುದು’ ಎಂದರು.

ಸಚಿವ ವಿ.ಸುನಿಲ್ ಕುಮಾರ್ ನೇತೃತ್ವದಲ್ಲಿ ಇನ್ನೊಂದು ತಂಡ ಸೆ.27 ರಂದು ದಕ್ಷಿಣ ಕನ್ನಡ, ಉಡುಪಿ, ಅ. 3ರಂದು ರಾಯಚೂರು, ಯಾದಗಿರಿಯಲ್ಲಿ ಪ್ರವಾಸ ಕೈಗೊಳ್ಳಲಿದೆ.

ಮೂರನೇ ತಂಡ ಸಚಿವ ಕೋಟ ಶ್ರೀನಿವಾಸ ಪೂಜಾರಿ ನೇತೃತ್ವದಲ್ಲಿ ಸೆ. 28ರಂದು ಕೋಲಾರ, ಚಿಕ್ಕಬಳ್ಳಾಪುರ, 29ರಂದು ಬೆಂಗಳೂರು ಗ್ರಾಮಾಂತರ, ಉತ್ತರ, ದಕ್ಷಿಣ ಹಾಗೂ ರಾಮನಗರ ಪ್ರವಾಸ ಕೈಗೊಳ್ಳಲಿದೆ.

ಸಚಿವ ಬೈರತಿ ಬಸವರಾಜ ನೇತೃತ್ವದಲ್ಲಿ ನಾಲ್ಕನೇ ತಂಡ ಅಕ್ಟೋಬರ್ 1ರಂದು ಚಿತ್ರದುರ್ಗ, ದಾವಣಗೆರೆ, 2ರಂದು ಹಾವೇರಿ, ಹುಬ್ಬಳ್ಳಿ, ಧಾರವಾಡ, ಗದಗ, 3ರಂದು ತುಮಕೂರು, ಮಧುಗಿರಿಯಲ್ಲಿ ಪ್ರವಾಸ ಕೈಗೊಳ್ಳಲಿದೆ. ಐದನೇ ತಂಡ ಸಚಿವ ಆನಂದ್ ಸಿಂಗ್ ನೇತೃತ್ವದಲ್ಲಿ ಅ. 1ರಂದು ವಿಜಯನಗರ, ಬಳ್ಳಾರಿ, 3ರಂದು ಬೆಳಗಾವಿ, ಚಿಕ್ಕೋಡಿಯಲ್ಲಿ ಪ್ರವಾಸ ಕೈಗೊಳ್ಳಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಶಿವರಾಜ್, ನಾಗರಾಜ್, ಮಧುಸೂದನ್, ಸಂತೋಷ್ ಬಳ್ಳೆಕೆರೆ, ದಿನೇಶ್, ಅಣ್ಣಪ್ಪ, ಬಾಲು ಇದ್ದರು.

ವಿಭಜನೆಯತ್ತ ಕಾಂಗ್ರೆಸ್: ಈಶ್ವರಪ್ಪ ಲೇವಡಿ


‘ಹಿಂದುಳಿದ ವರ್ಗದವರಿಗೆ ಕಾಂಗ್ರೆಸ್ ಏನೂ ಮಾಡಿಲ್ಲ. ಖಾಲಿ ಡಬ್ಬ ಅಲುಗಾಡಿಸಿ ಶಬ್ದ ಜಾಸ್ತಿ ಮಾಡಿದ್ದು ಬಿಟ್ಟರೆ ಅನ್ಯಾಯ ಮಾಡಿದ್ದಾರೆ. ಹಿಂದುಳಿದ ವರ್ಗದವರ ಸಮಾವೇಶ ಮಾಡದೇ ಸಿದ್ಧರಾಮೋತ್ಸವ ಮಾಡಿದ್ದಾರೆ’ ಎಂದು ಕೆ.ಎಸ್. ಈಶ್ವರಪ್ಪ ಆರೋಪಿಸಿದರು.

‘ಡಿ.ಕೆ.ಶಿವಕುಮಾರ್ ಸರ್ವಾಧಿಕಾರಿ ಧೋರಣೆ ಬಗ್ಗೆ ಈಗಾಗಲೇ ದಿನೇಶ್ ಗುಂಡೂರಾವ್, ಆರ್.ವಿ. ದೇಶಪಾಂಡೆ ವಿರೋಧ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ವಿಭಜನೆಯತ್ತ ಸಾಗಿದೆ. ಹಿಂದುಳಿದ ವರ್ಗಗಳ ಬಗ್ಗೆ ಕಾಂತರಾಜ್ ವರದಿ ₹140 ಕೋಟಿ ವೆಚ್ಚದಲ್ಲಿ ತಯಾರಿಸಿ ಅದನ್ನು ವಿಧಾನಸಭೆಯಲ್ಲಿ ಮಂಡಿಸಲಿಲ್ಲ. ಆ ವರದಿಗೆ ಮುಖ್ಯ ಕಾರ್ಯದರ್ಶಿ ಸಹಿಯನ್ನೇ ಹಾಕಿಲ್ಲ. ಮೂಗಿಗೆ ತುಪ್ಪ ಸವರಿ ಮೋಸ ಮಾಡಿದ್ದರು. ಹೀಗಾಗಿ ಹಿಂದುಳಿದವರ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೆ ನೈತಿಕತೆ ಇಲ್ಲ’ ಎಂದರು.

ಬಂಧಿತರು ರಾಷ್ಟ್ರಧ್ವಜ ಸುಟ್ಟು ವಿಡಿಯೊ ಮಾಡಿದ್ದರು: ಪೊಲೀಸ್ ವರಿಷ್ಠಾಧಿಕಾರಿ

ತುಂಗೆ ದಡದಲ್ಲಿ ಬಾಂಬ್ ಸ್ಫೋಟ ಪ್ರಯೋಗ

ಪ್ರಜಾವಾಣಿ ವಾರ್ತೆ



ಲಕ್ಷ್ಮಿಪ್ರಸಾದ್

ಶಿವಮೊಗ್ಗ: ನಿಷೇಧಿತ ಐಸಿಸ್ ಸಂಘಟನೆ ಜೊತೆ ನಂಟು ಹೊಂದಿರುವ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ಇಬ್ಬರು ಯುವಕರು, ಬಾಂಬ್ ಸಿದ್ಧಪಡಿಸಿ ಆಗಸ್ಟ್‌ನಲ್ಲಿ ಇಲ್ಲಿನ ಗುರುಪುರ ಬಳಿಯ ತುಂಗಾ ನದಿ ದಂಡೆ ಮೇಲೆ ಪ್ರಾಯೋಗಿಕ ಸ್ಫೋಟ ನಡೆಸಿದ್ದರು ಎಂಬ ಸಂಗತಿ ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

'ವಿಧಿ ವಿಜ್ಞಾನ ತಜ್ಞರು ಸ್ಫೋಟದ ಅವಶೇಷ, ಆರೋಪಿಗಳು ಸುಟ್ಟ ತ್ರಿವರ್ಣ ಧ್ವಜವನ್ನು ಸ್ಥಳದಿಂದ ಸಂಗ್ರಹಿಸಿದ್ದಾರೆ. ರಾಷ್ಟ್ರಧ್ವಜ ಸುಡುವ ವಿಡಿಯೊ ಮಾಡಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ.ಲಕ್ಷ್ಮಿಪ್ರಸಾದ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಐಎಸ್ ಜೊತೆ ನಂಟು ಹೊಂದಿದ ಆರೋಪದಲ್ಲಿ ಗ್ರಾಮೀಣ ಠಾಣೆ ಪೊಲೀಸರು ಮಾಜ್ ಮುನೀರ್ ಅಹಮದ್, ಸೈಯದ್ ಯಾಸೀನ್ ಅವರನ್ನು ಬಂಧಿಸಿದ್ದು, ಪ್ರಮುಖ ಆರೋಪಿ ಶಾರೀಕ್ ತಲೆಮರೆಸಿಕೊಂಡಿದ್ದಾನೆ.'

'ಆರೋಪಿಗಳು ಟೆಲಿಗ್ರಾಂ ಆ್ಯಪ್ ಮೂಲಕ ಐಎಸ್‌ನ ಅಧಿಕೃತ ಮಾಧ್ಯಮ ಅಲ್–ಹಯತ್‌ನ ಸದಸ್ಯರಾಗಿದ್ದರು. ಪ್ರಚಾರ ಸಾಮಗ್ರಿಗಳನ್ನು ಅಲ್ಲಿಂದಲೇ ಸ್ವೀಕರಿಸುತ್ತಿದ್ದರು.'

'ಎಲೆಕ್ಟ್ರಿಕ್ ಎಂಜಿನಿಯರ್ ಆಗಿರುವ ಸೈಯದ್ ಯಾಸೀನ್ ಬಾಂಬ್ ತಯಾರಿಕೆ ಬಗ್ಗೆ ಐಎಸ್‌ನಿಂದಲೇ ಮಾಹಿತಿ ಪಡೆದಿದ್ದ. ಟೈಮರ್ ರಿಲೆ ಸರ್ಕ್ಯೂಟ್ ಅನ್ನು ಆನ್‌ಲೈನ್ ಮೂಲಕ ಖರೀದಿಸಿದ್ದ. 9 ವೋಲ್ಟ್‌ನ ಎರಡು ಬ್ಯಾಟರಿ, ಸ್ವಿಚ್, ವೈರ್‌ಗಳು, ಬೆಂಕಿಪೊಟ್ಟಣ ಮತ್ತಿತರ ವಸ್ತುಗಳನ್ನು ಶಿವಮೊಗ್ಗದಲ್ಲಿ ಖರೀದಿಸಿದ್ದ' ಎಂದು ತಿಳಿಸಿದರು.

'ಪ್ರಾಯೋಗಿಕ ಸ್ಫೋಟದಲ್ಲಿ ಯಶಸ್ವಿಯಾದಿದ್ದರಿಂದ ಭಾರಿ ಸ್ಫೋಟಕ್ಕೆ ಸಿದ್ಧತೆಯಲ್ಲಿದ್ದಾಗ ಸಿಕ್ಕಿಬಿದ್ದಿದ್ದಾರೆ. ಬಾಂಬ್ ತಯಾರಿಗೆ ಅಗತ್ಯ ಹಣವನ್ನು ಶಾರೀಕ್ ಆನ್‌ಲೈನ್ ಮೂಲಕವೇ ಯಾಸೀನ್‌ಗೆ ಕಳುಹಿಸಿದ್ದ. ಆರೋಪಿಗಳು ಪರಸ್ಪರ ಸಂಪರ್ಕಕ್ಕೆ ಟೆಲಿಗ್ರಾಂ, ಇನ್‌ಸ್ಟಾಗ್ರಾಂ, ವೈರ್, ಎಲಿಮೆಂಟ್, ವಿಕ್ಕರ್ ಬಳಸುತ್ತಿದ್ದರು. ಆರೋಪಿಗಳಿಂದ 14 ಮೊಬೈಲ್, ಡಾಂಗಲ್, 2 ಲ್ಯಾಪ್‌ಟಾಪ್, ಪೆನ್‌ಡ್ರೈವ್, ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು, ರಿಲೆ ಸರ್ಕ್ಯೂಟ್, ಬಲ್ಬ್‌ಗಳು, ಬೆಂಕಿಪೊಟ್ಟಣ, ಬ್ಯಾಟರಿಗಳು, ಸ್ಫೋಟಕ ವಸ್ತುಗಳು, ಪ್ರಮುಖ ದಾಖಲೆಗಳು ಹಾಗೂ ಶಾರೀಕ್ ಬಳಸುತ್ತಿದ್ದ ಕಾರನ್ನು ವಶಪಡಿಸಿಕೊಳ್ಳಲಾಗಿದೆ' ಎಂದರು.

> ### 'ನಿಜವಾದ ಸ್ವಾತಂತ್ರ್ಯಕ್ಕೆ ಯುದ್ಧದ ಆಶಯ'
>
> ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಬ್ರಿಟಿಷ್ ಆಡಳಿತದಿಂದ. ಆದರೆ, ನಮಗೆ ನಿಜವಾದ ಸ್ವಾತಂತ್ರ್ಯ ಸಿಗಬೇಕಾದರೆ ಈಗಿರುವ ವ್ಯವಸ್ಥೆ ವಿರುದ್ಧ ಯುದ್ಧ ಸಾರಿ ಖಿಲಾಫತ್ ಸ್ಥಾಪಿಸಬೇಕಿದೆ. ಷರಿಯಾ ಕಾನೂನು ಜಾರಿಗೊಳಿಸಬೇಕಿದೆ. ತಮ್ಮ ಆಶಯಕ್ಕೆ ಅನುಗುಣವಾಗಿ ಐಎಸ್ ಕಾರ್ಯ ನಿರ್ವಹಿಸುತ್ತಿದೆ. 'ಇಸ್ಲಾಂ ಉನ್ನತಿಗೇರಿಸಲು ಜಿಹಾದ್ ಮೂಲಕ ಕಾಫಿರ್‌ಗಳ ವಿರುದ್ಧ ಯುದ್ಧ ಸಾರಬೇಕೆಂಬ ವಿಚಾರವನ್ನು ಆರೋಪಿಗಳು ಹೊಂದಿದ್ದರು.
>
> ಆರೋಪಿಗಳು ಸ್ಫೋಟಕ ತಯಾರಿಗೆ ಮುಂದಿನ ಸಾಮಗ್ರಿ ಸಂಗ್ರಹಿಸಿ ಇಟ್ಟುಕೊಂಡಿದ್ದರು ಎಂದು ಲಕ್ಷ್ಮಿಪ್ರಸಾದ್ ವಿವರಿಸಿದರು.

ಕೊಲೆ ಬೆದರಿಕೆ: ರಕ್ಷಣೆಗೆ ಮನವಿ

ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿಗೆ ದೂರು ನೀಡಿದ ಸಂತ್ರಸ್ತೆ

ಪ್ರಜಾವಾಣಿ ವಾರ್ತೆ



ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಗೆ ಶುಕ್ರವಾರ ಭೇಟಿ ನೀಡಿದ ವಿಧಾನ ಮಂಡಲದ ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ, ಸಂತ್ರಸ್ತ ಕುಟುಂಬದಿಂದ ಮಾಹಿತಿ ಪಡೆದರು. ಸದಸ್ಯರಾದ ಎನ್. ಮಹೇಶ್, ಎಚ್.ಕೆ. ಕುಮಾರಸ್ವಾಮಿ ಇದ್ದಾರೆ

ಮಾಲೂರು (ಕೋಲಾರ ಜಿಲ್ಲೆ): 'ಪ್ರಕರಣ ಬಗೆಹರಿದ ನಂತರ ನಮ್ಮ ಗುಡಿಸಿ ಸಾಯಿಸುವುದಾಗಿ ಊರಿನ ಕೆಲವರು ಬೆದರಿಕೆ ಹಾಕಿದ್ದಾರೆ' ಎಂದು ಉಳ್ಳೇರಹಳ್ಳಿ ಗ್ರಾಮದ ಸಂತ್ರಸ್ತ ಮಹಿಳೆ ಶೋಭಾ, ಶುಕ್ರವಾರ ಇಲ್ಲಿಗೆ ಭೇಟಿ ನೀಡಿದ್ದ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ದೂರು ನೀಡಿದರು.

'ಕೆಲಸಕ್ಕೆ ತೆರಳಲು ಗ್ರಾಮದಿಂದ ಟೇಕಲ್ ರೈಲು ನಿಲ್ದಾಣಕ್ಕೆ ನಡೆದು ಹೋಗುವಾಗ ವಾಹನದಲ್ಲಿ ಡಿಕ್ಕಿ ಹೊಡೆಸಿ ಸಾಯಿಸುವುದಾಗಿ ಕೆಲ ವ್ಯಕ್ತಿಗಳು ಮಾತನಾಡಿರುವುದನ್ನು ನನ್ನ ತಂಗಿ ಹೇಳಿದರು. ನನಗೆ ರಕ್ಷಣೆ ಕೊಡಿ' ಎಂದು ಮನವಿ ಮಾಡಿದರು.

'ದೇವರ ಗುಜ್ಜಕೋಲು ಮುಟ್ಟಿದ್ದಕ್ಕೆ ಪುತ್ರ ಚೇತನ್‌ಗೆ ದಂಡ ವಿಧಿಸಿ, ಊರು ಖಾಲಿ ಮಾಡುವಂತೆ ಒತ್ತಡ ಹೇರಿದ್ದರು. ಅಂಬೇಡ್ಕರ್ ಸಂಘದವರು ರಾತ್ರಿ ಮನೆಗೆ ಬಂದು ಸಹಾಯ ಮಾಡದಿದ್ದರೆ ನಾವು ಸತ್ತೇ ಹೋಗುತ್ತಿದ್ದೆವು' ಎಂದರು.

ರಕ್ಷಣೆಯ ಭರವಸೆ: 'ಈ ಬಗ್ಗೆ ತನಿಖೆ ನಡೆಸಲಾಗುವುದು. ಸರ್ಕಾರದಿಂದ ಎಲ್ಲಾ ರೀತಿಯಲ್ಲಿ ರಕ್ಷಣೆ ಕೊಡಿಸುತ್ತೇವೆ' ಎಂದು ಸಮಿತಿಯ ಅಧ್ಯಕ್ಷರೂ ಆಗಿರುವ ಶಾಸಕ ಎಂ.ಪಿ. ಕುಮಾರಸ್ವಾಮಿ ಭರವಸೆ ನೀಡಿದರು.

ಅಲ್ಲದೇ, ರಕ್ಷಣೆ ಕೊಡುವಂತೆ ಸ್ಥಳದಲ್ಲಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ಹಾಗೂ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೂ ಹೇಳಿದರು. 'ಮುಜರಾಯಿ ದೇಗುಲಗಳಲ್ಲಿ ಎಲ್ಲರಿಗೂ ಪ್ರವೇಶವಿದೆ' ಎಂಬ ಫಲಕ ಅಳವಡಿಸುವಂತೆ ಸೂಚಿಸಿದರು.

> ### ಶಾಲೆಯಲ್ಲಿ ಸಂತ್ರಸ್ತ ಬಾಲಕನ ಭೇಟಿ
>
> ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಪಿ. ಉಳ್ಳೇರಹಳ್ಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಭೂತಮ್ಮ ದೇಗುಲಕ್ಕೆ ಮಹಿಳೆಯನ್ನು ಕರೆದುಕೊಂಡು ಹೋದರು. ಬಳಿಕ ಶಾಲೆಗೆ ತೆರಳಿ ಸಂತ್ರಸ್ತ ಬಾಲಕನನ್ನು ಭೇಟಿಯಾದರು. ತರಗತಿ ಮಕ್ಕಳನ್ನೂ ಮಾತನಾಡಿಸಿ ಧೈರ್ಯ ತುಂಬಿದರು.
>
> ಕುಟುಂಬಕ್ಕೆ ರಕ್ಷಣೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಮುದ್ದಣ್ಣ ಇದ್ದರು.

ಕಲಿಕೆಗೆ ಇಲ್ಲ ದೇವನೂರ, ಜಿಆರ್ ಪಠ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನೂರ ಮಹಾದೇವ ಹಾಗೂ ಜಿ.ರಾಮಕೃಷ್ಣ ಸೇರಿ ಐವರು ಲೇಖಕರು ಅನುಮತಿ ಹಿಂಪಡೆದಿರುವ ಗದ್ಯ ಮತ್ತು ಪದ್ಯಗಳನ್ನು ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸದಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

10ನೇ ತರಗತಿಯ ಪಠ್ಯದಲ್ಲಿನ (ಪ್ರಥಮ ಭಾಷೆ) ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಗದ್ಯ, ಜಿ.ರಾಮಕೃಷ್ಣ ಅವರ 'ಭಗತ್ ಸಿಂಗ್' ಪೂರಕ ಗದ್ಯ, 9ನೇ ತರಗತಿ ಪಠ್ಯದಲ್ಲಿನ (ತೃತೀಯ ಭಾಷೆ) ರೂಪ ಹಾಸನ ಅವರ 'ಅಮ್ಮನಾಗುವುದೆಂದರೆ' ಪೂರಕ ಪದ್ಯ, 10ನೇ ತರಗತಿ ಪಠ್ಯದಲ್ಲಿನ (ತೃತೀಯ ಭಾಷೆ) ಈರಪ್ಪ ಎಂ.ಕಂಬಳಿ ಅವರ 'ಹೀಗೊಂದು ಟಾಪ್ ಪ್ರಯಾಣ' ಪೂರಕ ಗದ್ಯ, ಸತೀಶ್ ಕುಲಕರ್ಣಿ ಅವರ 'ಕಟ್ಟುತ್ತೇವ ನಾವು' ಪದ್ಯ, 10ನೇ ತರಗತಿ ಪಠ್ಯದಲ್ಲಿನ (ದ್ವಿತೀಯ ಭಾಷೆ) ಸುಕನ್ಯ ಮಾರುತಿ ಅವರ 'ಏಣಿ' ಪದ್ಯ, 6ನೇ ತರಗತಿ ಪಠ್ಯದಲ್ಲಿನ (ಪ್ರಥಮ ಭಾಷೆ) ದೊಡ್ಡಹುಲ್ಲೂರು ರುಕ್ಕೋಜಿರಾವ್ ಅವರ 'ಡಾ.ರಾಜಕುಮಾರ್' ಗದ್ಯಗಳನ್ನು ಪರಿಗಣಿಸದಂತೆ ತಿಳಿಸಿದೆ.

ಪಠ್ಯಪರಿಶೀಲನೆಗೆ ರಚಿಸಿದ್ದ ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಣೆ ಹೆಸರಿನಲ್ಲಿ ಕೆಲ ಪಠ್ಯಗಳನ್ನು ಕೈಬಿಡಲು ಶಿಫಾರಸು ಮಾಡಿತ್ತು. ಇದಕ್ಕೆ ವಿರೋಧ ವ್ಯಕ್ತವಾದಾಗ ತಮ್ಮ ಪದ್ಯ, ಗದ್ಯಗಳನ್ನು ಕೈಬಿಡುವಂತೆ ಹಲವರು ಪತ್ರ ಬರೆದಿದ್ದರು. ಗದ್ಯ ಮತ್ತು ಪದ್ಯಗಳನ್ನು ಪಠ್ಯದಲ್ಲಿ ಉಳಿಸಿಕೊಳ್ಳಲು ಶಿಕ್ಷಣ ಇಲಾಖೆ ಈ ಲೇಖಕರ ಅನುಮತಿ ಕೋರಿತ್ತು. ಮನವಿಯನ್ನು ಲೇಖಕರು ತಿರಸ್ಕರಿಸಿದ್ದರು.

ಶಾಲಾ ಬ್ಯಾಗ್ ಹೊರೆ: ನೋಟಿಸ್

ಬೆಂಗಳೂರು: 'ಪ್ರಾಥಮಿಕ ಶಾಲಾ ಮಕ್ಕಳ ಬ್ಯಾಗ್ ತೂಕ ಇಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಎಲ್.ರಮೇಶ್ ನಾಯಕ್ ಸಲ್ಲಿಸಿರುವ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ರುಪ್ಸಾ (ರೆಕಗ್ನೈಸ್ಡ್ ಅನ್‌ಏಡೆಡ್ ಪ್ರೈವೇಟ್ ಸ್ಕೂಲ್ಸ್ ಅಸೋಸಿಯೇಷನ್) ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಮಕ್ಕಳ ಬ್ಯಾಗ್ ತೂಕದ ಮಿತಿ ಇಷ್ಟೇ ಇರಬೇಕೆಂದು 2020ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ನಿಯಮ ಪಾಲನೆಯಾಗುತ್ತಿಲ್ಲ. ಸಂವಿಧಾನದ 21ನೇ ವಿಧಿಯಡಿ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

> ಸುಧಾ, ಮಯೂರ ಓದಿರಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.36	7,665	7,133
ಹಾರಂಗಿ	2,859	2,857.68	959	1,350
ಕಬಿನಿ	2284.00	2,283.02	5,420	1,500
ಹೇಮಾವತಿ	2,922	2,921.95	3,458	3,620
ಲಿಂಗನಮಕ್ಕಿ	1,819	1,816	6,090	7,172
ಸೂಪಾ (ಮೀ)	564	554.07	3,248	2,398
ಮಾಣಿ	595	590.12	329	721
ತುಂಗಭದ್ರಾ	1,633	1,633	13,478	12,995
ಮಲಪ್ರಭಾ	2079.50	2,079.50	1,394	1,394
ಘಟಪ್ರಭಾ	2,175	2,175	3,604	3,604
ಭದ್ರಾ	186	184	3,406	5,200
ಆಲಮಟ್ಟಿ (ಮೀ)	519.60	519.60	24,451	25,000
ನಾರಾಯಣಪುರ (ಮೀ)	492.25	492.04	20,000	12,000

* ನೆಲಮಟ್ಟದಿಂದ

ಮುರುಘಾಶ್ರೀ ಜಾಮೀನು ಅರ್ಜಿ ತಿರಸ್ಕೃತ

ಚಿತ್ರದುರ್ಗ/ಶಿವಮೊಗ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಶುಕ್ರವಾರ ತಿರಸ್ಕರಿಸಿದೆ.

ಸೆ.1ರಂದು ಬಂಧಿತರಾಗಿದ್ದ ಶಿವಮೂರ್ತಿ ಮುರುಘಾ ಶರಣರು, ಜಾಮೀನು ಕೋರಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. 'ಬಂಧಿತ ಆರೋಪಿ ಪ್ರಭಾವಿಯಾಗಿದ್ದು, ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ' ಎಂದು ವಿಶೇಷ ಸರ್ಕಾರಿ ವಕೀಲರಾದ ಕೆ.ಬಿ. ನಾಗವೇಣಿ ತಕರಾರು ಸಲ್ಲಿಸಿದ್ದರು. ಸರ್ಕಾರಿ ವಕೀಲರ ವಾದವನ್ನು ಪರಿಗಣಿಸಿದ ನ್ಯಾಯಾಧೀಶರಾದ ಬಿ.ಕೆ. ಕೋಮಲಾ ಅರ್ಜಿ ತಿರಸ್ಕರಿಸಿದರು.

ನ್ಯಾಯಾಲಯದ ಆದೇಶದಂತೆ ಹೃದಯ ತಪಾಸಣೆಗಾಗಿ ಶಿವಮೊಗ್ಗದ ಮೆಗ್ಗಾನ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಾಗಿದ್ದ ಶಿವಮೂರ್ತಿ ಮುರುಘಾ ಶರಣರ ಆರೋಗ್ಯ ಸ್ಥಿರವಾಗಿರುವ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಅವರನ್ನು ಆಸ್ಪತ್ರೆಯಿಂದ ಚಿತ್ರದುರ್ಗದ ಕಾರಾಗೃಹಕ್ಕೆ ವಾಪಸ್ ಕರೆದೊಯ್ಯಲಾಗಿದೆ.

ದೇವರ ದರ್ಶನಕ್ಕೆ ಅಂಗಿ ತೆಗೆಯಲು ಆಕ್ಷೇಪಿಸಿ ದೂರು

ಮಂಗಳೂರು: ದೇವಾಲಯಗಳಲ್ಲಿ ಅಂಗಿ– ಬನಿಯನ್ ತೆಗೆದು ದೇವರ ದರ್ಶನ ಮಾಡುವುದಕ್ಕೆ ಸಂಬಂಧಿಸಿ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಈ ಕುರಿತು ಧಾರ್ಮಿಕ ದತ್ತಿ ಇಲಾಖೆಗೆ ಲಿಖಿತ ದೂರು ಸಲ್ಲಿಕೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಕೊಲ್ಲೂರು ಮೂಕಾಂಬಿಕಾ ದೇವಾಲಯದ ವಿರುದ್ಧ ಸಾಮಾಜಿಕ ಹೋರಾಟಗಾರ ಶಶಿಧರ್ ಶೆಟ್ಟಿ ದೂರು ನೀಡಿದ್ದಾರೆ.

'ಹಿಂದೂ ಸಂಪ್ರದಾಯದಲ್ಲಿ ಇಂತಹ ಪದ್ಧತಿ ಇಲ್ಲ. ಅಂಗವಿಕಲರಿಗೆ ಅಂಗಿ ಕಳಚಿ ದರ್ಶನ ಪಡೆಯುವುದು ಕಷ್ಟವಾಗುತ್ತದೆ. ಚರ್ಮರೋಗವಿದ್ದವರು ಅಂಗಿ ಕಳಚಿದರೆ ಚರ್ಮರೋಗ ಬೇರೆಯವರಿಗೂ ಹರಡುವ ಸಾಧ್ಯತೆ ಇರುತ್ತದೆ. ಇದು ಸಂವಿಧಾನ ನೀಡಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. 'ಅಂಗಿ–ಬನಿಯನ್ ತೆಗೆದು ದೇವರ ದರ್ಶನ ಮಾಡಬೇಕು' ಎಂದು ದೇವಾಲಯಗಳಲ್ಲಿ ಹಾಕಿರುವ ಸೂಚನಾ ಫಲಕವನ್ನು ಕೂಡಲೇ ತೆರವುಗೊಳಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

'ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಈ ಬಗ್ಗೆ ಯಾವುದೇ ಪತ್ರ ಬಂದಿರುವುದು ನನ್ನ ಗಮನಕ್ಕೆ ಬಂದಿಲ್ಲ' ಎಂದು ದೇವಳದ ಇಒ ನಿಂಗಯ್ಯ ತಿಳಿಸಿದ್ದಾರೆ.



ಮನದ ಮನೆಯಲಿ ಇರಲಿ 'ದುರ್ಗೆ'

ಭಾರತಿ ಹೆಗಡೆ

ಮಾಣಿಕ್ಯ ವೀಣಾ ಮುಘಲಾಲಯಂತೀಂ,
ಮದಾಲಸಾಂ ಮಂಜುಲ ವಾಗ್ವಿಲಾಸ.
ಮಾಹೇಂದ್ರ ನೀಲದ್ಯುತಿ ಕೋಮಲಾಂಗಿ,
ಮಾತಂಗ ಕನ್ಯಾ ಮನಸಾ ಸ್ಮರಾಮೀ...

ದೇವಿಯೆಂದರೆ ಹಾಗೆ...ಅಕ್ಷರವೇ ಬಾರದ ಕಾಳಿದಾಸನ ನಾಲಿಗೆಯಲ್ಲಿ ಕಾಳಿಕಾಮಾತೆಯಾಗಿ ಸ್ತುತಿಸಲ್ಪಡುತ್ತಾಳೆ. ದುಷ್ಟ ಮಹಿಷನ ಕೊಂದ ಶಕ್ತಿಸ್ವರೂಪಿಣಿಯಾಗಿ ಮಹಿಷಾಸುರ ಮರ್ದಿನಿಯಾಗಿ ನಿಲ್ಲುತ್ತಾಳೆ. ಹಾಗೆಯೇ ಶರನ್ನವರಾತ್ರಿಯಲ್ಲಿ ಒಂಬತ್ತೂ ದಿವಸ ಶಕ್ತಿ ದೇವತೆಯ ಆವಾಹನೆಯಾಗುತ್ತದೆ. ಬಂಗಾಳದ ಬೀದಿಬೀದಿಗಳಲ್ಲಿ ದುರ್ಗೆಯನ್ನು ಪೂಜಿಸಲಾಗುತ್ತದೆ. ನೇಪಾಳದಲ್ಲಿ ವಿಶೇಷವಾದ ಕೌಮಾರಿಯರ ಪೂಜೆ ಪ್ರಸಿದ್ಧಿ ಪಡೆದಿದೆ.

ಕರ್ನಾಟಕದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ದೇವಿಯನ್ನು ಪೂಜಿಸುತ್ತಾರೆ. ಹಳೆ ಮೈಸೂರು ಪ್ರಾಂತ್ಯದಲ್ಲಿ ದಸರಾ ನಾಡಹಬ್ಬವಾಗಿ ದೇವತೆಯನ್ನು ಪೂಜಿಸಿದರೆ, ಉತ್ತರ, ದಕ್ಷಿಣ ಕನ್ನಡಗಳಲ್ಲಿ ಈ ನವರಾತ್ರಿ ಮನೆತನದ ಹಬ್ಬವಾಗಿ ಮನೆಮನೆಯಲ್ಲಿ ಹೆಣ್ಣುಮಕ್ಕಳನ್ನು ಪೂಜಿಸುವ ಪದ್ಧತಿ ಇದೆ.

ನಿಜ, ಅವಳು ದೇವಿ, ದುರ್ಗಿ, ಶಕ್ತಿ, ಅಮ್ಮ, ಕಾಳಿ, ದುಷ್ಟ ಸಂಹಾರಿಣಿ, ಮಾತೃಸ್ವರೂಪಿಣಿಯೆಂದು ಸ್ತುತಿಸಲಾಗುತ್ತಿದೆ. ಹಾಗೆ ನೋಡಿದರೆ ಆದಿಶಕ್ತಿ, ಜಗಜ್ಜನನಿ, ಮಹಾಮಾತೆ ಎಂಬ ತತ್ವ ಗಟ್ಟಿಯಾಗಿ ಬೇರೂರಿದಂತಹ ನೆಲವಿದು.

ದೇವರು ಪುರುಷನೋ, ಸ್ತ್ರೀಯೋ ಎಂಬ ಜಿಜ್ಞಾಸೆ ಮೊದಲಿನಿಂದಲೂ ಇದೆ. ಅವನು ನಿರಾಕಾರ ಎಂದರೂ ಗಂಡು ಹಾಗೂ ಹೆಣ್ಣು ದೇವತೆಗಳೂ ನಮ್ಮಲ್ಲಿ ಕಡಿಮೆ ಇಲ್ಲ. ನಮ್ಮಲ್ಲಿ ಗ್ರಾಮದೇವತೆಗಳಿಂದ ಹಿಡಿದು ಕಾಯಿಲೆಗೂ 'ಅಮ್ಮ' ಎಂಬ ಹೆಸರು ತಳುಕು ಹಾಕಿಕೊಂಡಿದೆ. ಕರುಮಾರಿಯಮ್ಮ, ಅಣ್ಣಮ್ಮ, ಮಾರಮ್ಮ, ಕೊರತಿ, ಪ್ಲೇಗ್ ಮಾರಿಯಮ್ಮ, ಏಡ್ಸಮ್ಮ, ಪಟಾಲಮ್ಮ... ಹೀಗೆ ಗ್ರಾಮದಲ್ಲಿ ಏನೇ ಅವಘಡಗಳು ಸಂಭವಿಸಿದರೂ ಅದನ್ನು ಹೋಗಲಾಡಿಸಿ ಗ್ರಾಮವನ್ನು ರಕ್ಷಿಸಲು ಅಮ್ಮನೇ ಬೇಕು. ಅಲ್ಲಿ ಗ್ರಾಮ ದೇವ ಎಂಬ ಕಲ್ಪನೆ ಇಲ್ಲ. ಇಂಥ ಶಕ್ತಿಯನ್ನು ನವರೂಪದಲ್ಲಿ ಕಂಡು ಪೂಜಿಸುವ ಹಬ್ಬವೇ ನವರಾತ್ರಿ.

ಒಂಬತ್ತು ದಿವಸ ಒಂಬತ್ತು ವಿಧದಲ್ಲಿ ಈ ದೇವಿಯ ರೂಪಗಳನ್ನು ಆರಾಧಿಸಲಾಗುತ್ತದೆ. ಏಳನೇ ದಿನ ತ್ರಿದಿನ ದುರ್ಗಾಪೂಜಾ ಅಂದ್ರೆ ಮಹಾಕಾಳಿ, ಮಹಾಲಕ್ಷ್ಮಿ ಮಹಾಸರಸ್ವತಿ ಪೂಜೆ ಯಾಗುತ್ತದೆ. ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಟಾ, ಕೂಷ್ಮಾಂಡಾ, ಸ್ಕಂದಮಾ, ಕಾತ್ಯಾಯಿನಿ, ಕಾಳರಾತ್ರಿ, ಮಹಾಗೌರಿ, ಸಿದ್ಧಿಧಾತ್ರಿಯಾಗಿ ಪೂಜಿಸಲ್ಪಡುತ್ತಾಳೆ.

ಮೂರ್ತಸ್ವರೂಪದಲ್ಲಿ ಉಳಿದ ಗೌರವ

ಮಹಿಷಾಸುರ ಮರ್ದಿನಿ, ಕಾಳಿ, ದುರ್ಗಿ ಆಗಿರುವ ಆದಿಶಕ್ತಿಯ ಆರಾಧನೆ ಕೇವಲ ಮೂರ್ತ ಸ್ವರೂಪದಲ್ಲಿ ಉಳಿದುಕೊಂಡಿದೆ. ಧೈರ್ಯ, ಸ್ಥೈರ್ಯ, ಸ್ವಾತಂತ್ರ್ಯ, ಸಮಾನತೆ, ಅಸ್ಮಿತೆ ಇವುಗಳ ಮೂಲಧಾತುವೇ ಆಗಿರುವ ಆದಿಶಕ್ತಿಯ ಸ್ವರೂಪ ಪೂಜೆಗೆ ಸೀಮಿತಗೊಂಡಿದೆ. ಇವು ರಚನಾತ್ಮಕವಾಗಿ ಬೆಳೆದು, ನಮ್ಮೊಳಗೆ ಸ್ತ್ರೀಶಕ್ತಿಯ ಅರಿವು ಮೂಡಿಸಿದ್ದರೆ ಎಷ್ಟು ಚೆನ್ನಿತ್ತು!.

ಈ ಆಚರಣೆಗಳು ಸಮಾಜಮುಖಿಯಾಗಿ ಬೆಳೆದು, ಸ್ತ್ರೀ ಸಮಾನತೆಯ ಆಯಾಮವಾಗಿ ರೂಪ ಪಡೆಯಲು ಸಾಧ್ಯವಾಗಿಲ್ಲ. ಹಾಗಾಗಿಯೇ ನವರಾತ್ರಿಯ ಈ ದುರ್ಗಾಪೂಜೆ, ಶಕ್ತಿ ಸ್ವರೂಪಿಣಿಯ ಪೂಜೆ ಸಾರ್ವತ್ರಿಕವಾಗಿ ಬೆಳೆಯುವಲ್ಲಿ ಸೋತಿತು. ಅದರ ಫಲವೇ ಮಹಿಳೆಯರ ವಿರುದ್ಧದ ದೌರ್ಜನ್ಯದ ಹಲವು ರೂಪಗಳು.

ಮಹಿಳೆಯನ್ನು ಹಿಂದೆಂದಿಗಿಂತಲೂ ಹೆಚ್ಚಿನ ರೀತಿಯಲ್ಲಿ ಭೌತಿಕವಾಗಿ ನೋಡಲಾಗುತ್ತದೆ. ಇನ್ನಿಲ್ಲದ ಸೌಂದರ್ಯಪ್ರಜ್ಞೆ ಅವಳೊಳಗೆ ಹುಟ್ಟುಹಾಕಲಾಗುತ್ತಿದೆ. ಹೆಣ್ಣಿನೆಡೆಗಿನ ದೃಷ್ಟಿಕೋನವೇ ಸೀಮಿತಗೊಂಡಿದೆ.

ಕೌಟುಂಬಿಕ ವಿಘಟನೆಯ ಈ ಸಂದರ್ಭದಲ್ಲಿಯಂತೂ ದೇವಿ ಎಂಬ ಈ ಕಲ್ಪನೆಯನ್ನು ಸ್ಪಷ್ಟವಾಗಿ ಅಷ್ಟೇ ಪ್ರಖರವಾಗಿ ಕಟ್ಟಿಕೊಡಬೇಕಿದೆ. ಒಂದೋ ಎರಡೋ ಮಕ್ಕಳಿರುವ ಕುಟುಂಬದಲ್ಲಿ ಹೆಣ್ಣುಮಕ್ಕಳು ಇದ್ದೇ ಬಿಡುತ್ತಾರೆಂದು ಹೇಳಲು ಸಾಧ್ಯವಿಲ್ಲ. ಬೆಳೆಯುವ ಮಕ್ಕಳು ಹೆಣ್ಣುಮಕ್ಕಳನ್ನೇ ನೋಡದಿದ್ದಾಗ ನಾವೆಷ್ಟೇ ಹೆಣ್ಣುಮಕ್ಕಳಿಗೆ ಗೌರವ ಕೊಡಿ, ಪ್ರೀತಿಯಿಂದ ನೋಡಿ, ಅವರನ್ನು ಅರ್ಥ ಮಾಡಿಕೊಳ್ಳಿ ಎಂದು ಗಂಡುಮಕ್ಕಳಿಗೆ ತಿಳಿ ಹೇಳಿದರೂ ಅವೆಲ್ಲ ಥಿಯರಿಗಳಾದಾವೇ ಹೊರತು ಪ್ರಾಯೋಗಿಕವಾಗಿ ನಡೆಯುವಂಥದ್ದಲ್ಲ.

ಗಂಟೆಗೆ ಇಷ್ಟು ಅತ್ಯಾಚಾರ ನಡೆಯುತ್ತಿದೆ, ಇಷ್ಟು ವರದಕ್ಷಿಣೆ ಸಾವು ಸಂಭವಿಸುತ್ತಿದೆ, ಇಷ್ಟು ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದೆ ಎಂಬ ಲೆಕ್ಕಗಳನ್ನು ಕೊಟ್ಟೂ ಕೊಟ್ಟೂ ಸಾಕಾಗಿದೆ, ಇವೆಲ್ಲ ಈಗ ಸವಕಲಿಯ ಪದಗಳಾಗಿವೆ. ಅದರ ಬದಲಾಗಿ ಹೆಣ್ಣನ್ನು ಗಟ್ಟಿಗೊಳಿಸುವ ಮತ್ತು ಹೆಣ್ಣಿಗೆ ಗೌರವ ಕೊಡುವಂತಹ ವಾತಾವರಣವನ್ನು ನಿರ್ಮಿಸುವ ತುರ್ತು ಈಗಿದೆ. ಅದಕ್ಕೆ ಈ ಶರನ್ನವರಾತ್ರಿ ಒಂದು ಶರಾ ಬರೆಯುವಂತಾಗಲಿ.

❖

ಭಾರತದಲ್ಲಿ ಹೆಣ್ಣು ಶಕ್ತಿಸ್ವರೂಪಿಣಿಯಾದರೆ, ಜಪಾನಿಯರಲ್ಲಿ ಅವಳು ಅಮಾತೇರೆಸು, ಅಂದರೆ ಸೂರ್ಯನ ಅಧಿದೇವತೆ. ಗ್ರೀಸ್‌ನಲ್ಲಿ ಕಾರ್ನ್ ಗಾಡೆಸ್, ಈಜಿಪ್ಟ್‌ನಲ್ಲಿ ನದಿ ದೇವತೆ. ಹೀಗೆ ಬೇರೆಬೇರೆ ದೇಶಗಳಲ್ಲಿ ಬೇರೆ ಬೇರೆ ಸಮುದಾಯಗಳಲ್ಲಿ ವಿಭಿನ್ನವಾಗಿ ನೋಡಲಾಗುತ್ತಿದೆ. ಸಮಸ್ತ ಸ್ತ್ರೀಸಂಕುಲವನ್ನು ಪ್ರತಿನಿಧಿಸುವ ದೇವಿಯ ಆರಾಧನೆ, ಕೇವಲ ಮೂರ್ತರೂಪದಲ್ಲಿ ಉಳಿಯದೇ ಪ್ರತಿ ಹೆಣ್ಣಿಗೂ ಗೌರವವಾದಾರ ಸಿಗಬೇಕಿದೆ.

ಹೆಣ್ಣನ್ನು ಗೌರವಿಸುವಂಥ ಹಬ್ಬ

ನವರಾತ್ರಿಯೆಂದರೆ ನನಗೆ ನೆನಪಾಗುವುದು ದುರ್ಗೆಯರ ಪೂಜೆ ಮತ್ತು ಮುತ್ತೈದೆರ ಊಟ. ಉತ್ತರ ಕನ್ನಡದ ನನ್ನ ಊರಲ್ಲಿ ಈ ಹಬ್ಬದಂದು ಹೆಣ್ಣುಮಕ್ಕಳನ್ನು ಕರೆದು ಸಿಹಿ ಊಟ ಹಾಕಿ ಕೈಮೇಲೆ ದಕ್ಷಿಣೆ ಇಡುತ್ತಾರೆ. ನಮಗೆ ಆಗ ಆಕರ್ಷಣೆ ಇದ್ದದ್ದೇ ಕೈಮೇಲೆ ಇಡುವ ಆ ಐದು ಪೈಸೆ, ಹತ್ತು ಪೈಸೆಗಳು. ಈ ಹಬ್ಬದ ಒಂಬತ್ತೂ ದಿನ, 'ಇವತ್ತು ಯಾರ ಮನೆಗೆ ಊಟಕ್ಕೆ ಹೋಗಬೇಕು, ನಾಳೆ ಯಾರ ಮನೆಗೆ ಹೋಗಬೇಕು' ಅಂತ ಲೆಕ್ಕ ಹಾಕ್ತಿದ್ದೆವು. ಅವರು ಕೊಟ್ಟ ದಕ್ಷಿಣೆ ದುಡ್ಡನ್ನೆಲ್ಲ ಒಂದು ಪುಟ್ಟ ಡಬ್ಬಿಯಲ್ಲಿಟ್ಟು ಮುಂದಿನ ನವರಾತ್ರಿವರೆಗೂ ಅದನ್ನು ಜೋಪಾನ ಮಾಡಿಕೊಳ್ಳುತ್ತಿದ್ದೆವು. ನಮ್ಮನಮ್ಮೊಳಗೆ 'ನಿಂಗೆಷ್ಟು ದುಡ್ಡು ಕೊಟ್ರು' ಅಂತ ಲೆಕ್ಕ ಹಾಕುತ್ತಾ, ನವರಾತ್ರಿಯ ಇಡಗಂಟು ಕೂಡ ತಯಾರಾಗಿಬಿಡುತ್ತಿತ್ತು. ಬರುವ ಜಾತ್ರೆಯಲ್ಲಿ ನವರಾತ್ರಿಯ ದುಡ್ಡನ್ನೆಲ್ಲ ಒಟ್ಟು ಹಾಕಿ ರಿಬ್ಬನ್ನೋ, ಹೇರ್‌ಪಿನ್ನೋ, ಮಣಿಸರವೋ ತಗೊಂಡ್ರೆ ಅಲ್ಲಿಗೆ ನವರಾತ್ರಿ ಇಡಗಂಟು ಖಾಲಿ.

ಅಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ನವರಾತ್ರಿಯಲ್ಲೂ ಹಳ್ಳಿ ನಗರಗಳನ್ನದೇ ಹೀಗೆ ಕುಮಾರಿಯರ ಹಬ್ಬ ನಡೆಯುತ್ತದೆ. ಊರಿನಲ್ಲಿರುವ ಕುಮಾರಿಯರನ್ನು ಪ್ರತಿ ಮನೆಯವರೂ ಒಂದೊಂದು ದಿವಸ ಕರೆದು ಅವರಿಗೆ ಸಿಹಿ ಊಟ ಹಾಕಿ, ದಕ್ಷಿಣೆ ಕೊಟ್ಟು, ಉಡುಗೊರೆ ಕೊಟ್ಟು ಕಳಿಸುವ ಸಂಪ್ರದಾಯ ಇವತ್ತಿಗೂ ಚಾಲ್ತಿಯಲ್ಲಿದೆ.

ಎಷ್ಟೋ ಕಡೆಗಳಲ್ಲಿ ಮನೆಯ ಯಜಮಾನ ತೊಟ್ಟಿಲಲ್ಲಿದ್ದ ಹೆಣ್ಣು ಶಿಶುವಿಗೆ ಪೂಜೆ ಮಾಡಿ, ಅದರ ಕಾಲಿಗೆ ನೀರು ಹಾಕಿ ಆ ನೀರನ್ನು ತಮ್ಮ ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಳ್ಳುವುದನ್ನು ಕಂಡಿದ್ದೇನೆ. ಇನ್ನೂ ಮೈ ನೆರೆಯದ ಹೆಣ್ಣುಮಕ್ಕಳನ್ನು ಕರೆದು ಅವರ ಪಾದ ತೊಳೆದು ಆ ನೀರನ್ನು ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಂಡು, ಅವರಿಗೆ ಉಡುಗೊರೆ ನೀಡಿ, ಸಿಹಿ ಊಟ ಬಡಿಸಿದ ಸಂಪ್ರದಾಯವನ್ನು ಕಂಡಿದ್ದೇನೆ. ಅಂದರೆ ನವರಾತ್ರಿಯಲ್ಲಿ ದುರ್ಗೆ, ದೇವಿಯರ ಮೂರ್ತಿ ಇಟ್ಟು ಪೂಜಿಸದೇ ಹೆಣ್ಣುಮಕ್ಕಳನ್ನೇ ಜೀವಂತ ದುರ್ಗೆಯರೆಂದು ಪರಿಭಾವಿಸಿ ಪೂಜಿಸುವ ಪರಿ ನಿಜಕ್ಕೂ ಅನನ್ಯವಾದದ್ದು.

ಮುತ್ತೈದೆರೂಟ: ಹಾಗಂತ ಇದು ಕೌಮಾರಿಯರ ಪೂಜೆ ಮಾತ್ರವಲ್ಲ, ಇದು ಸುವಾಸಿನಿಯರನ್ನು ಗೌರವಿಸುವ ಹಬ್ಬವೂ ಹೌದು. ಕುಮಾರಿಯರನ್ನು ಕರೆದು ಊಟ ಹಾಕುವ ಹಾಗೆಯೇ ಮದುವೆಯಾಗಿ ಹೋದ ಹೆಣ್ಣುಮಕ್ಕಳನ್ನು ಕರೆದು ಊಟ ಹಾಕಿ ಬಾಗಿನ ಕೊಡುವ ಪದ್ಧತಿಯೂ ಇದೆ. ಇದು ಕೂಡ ಊರಿನ ಯಾವುದೇ ಮನೆಗೆ ಯಾರನ್ನೇ ಕರೆಯಬಹುದು. ಅದಕ್ಕೆ ಮುತ್ತೈದೆರೂಟ ಎನ್ನುತ್ತಾರೆ.


ಈಗೀಗ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ, ಇರುವ ಒಂದೆರೆಡು ಹೆಣ್ಣುಮಕ್ಕಳಿಗೆ ಈ ಹಬ್ಬದ ವೇಳೆ ವಿಶೇಷ ಬೇಡಿಕೆ. 'ನಿಮ್ಮನೆ ಕೂಸನ್ನ ಎಲ್ಲಿಗೂ ಕಳ್ಸಡ, ಇವತ್ತು ಎಮ್ಮನೇಲಿ ದುರ್ಗಾಪೂಜೆ, ಎಮ್ಮನಿಗೆ ಕಳ್ಸು' ಎನ್ನುವ ಮಾತು ಈ ನವರಾತ್ರಿ ದಿನಗಳಲ್ಲಿ ಸಾಮಾನ್ಯವಾಗಿ ಕೇಳುತ್ತಿರುತ್ತೇವೆ. ಹಾಗಂತ ಈ ರೀತಿಯ ಪೂಜೆ ನಮ್ಮ ಭಾಗದಲ್ಲಿ ಮಾತ್ರ ಇದೆಯಂದಲ್ಲ. ಹಳೆಮೈಸೂರು ಪ್ರಾಂತ್ಯಗಳಲ್ಲಿ ಕೂಡ ಇದೆ. ಅಲ್ಲಿ, ಹೆಣ್ಮಕ್ಕಳಿಗೆ ಬಳೆ, ಜರಿಕಣ, ಕನ್ನಡಿ, ದುಡ್ಡು, ಸಿಹಿ ಕೊಟ್ಟು ಗೌರವಿಸುವ ಪದ್ಧತಿ ಇದೆ. ಸಾಮಾನ್ಯವಾಗಿ ಹೆಣ್ಮಕ್ಕಳ ಹೆಸರಲ್ಲೇ ಹಬ್ಬಗಳಿದ್ದರೂ, ಅಂದು ಪೂಜೆ, ಮನೆಗೆಲಸ, ಅಡುಗೆ ಎಂದೆಲ್ಲ ಅವರು ಹೈರಾಣಾಗಿರುತ್ತಾರೆ. ಕೊನೆಗೆ ಹಬ್ಬವೂ ಬೇಡ, ಏನೂ ಬೇಡ ಎಂಬ ಸ್ಥಿತಿಗೆ ತಲುಪಿರುತ್ತಾರೆ. ಆದರೆ ಇದೊಂದೇ ಹಬ್ಬದಲ್ಲಿ ಹೆಣ್ಣುಮಕ್ಕಳನ್ನು ಕೂರಿಸಿ ಪೂಜೆ ಮಾಡಿ, ಅವರಿಗೆ ದಕ್ಷಿಣೆ ಕೊಟ್ಟು, ಊಟ ಹಾಕಿ ಗೌರವಿಸುವುದು. ಹಾಗಾಗಿ ನವರಾತ್ರಿಯೆಂದರೆ ಹೆಣ್ಣುಮಕ್ಕಳನ್ನು ಗೌರವಿಸುವ ಹಬ್ಬವಾಗಿದೆ. ಹೀಗೆ ಹೆಣ್ಣುಮಕ್ಕಳನ್ನು ಗೌರವಿಸುವ, ಪೂಜಿಸುವ ಪರಿಪಾಠವಿರುವ ಊರುಗಳಲ್ಲಿ ಈ ಆಚರಣೆ ಪ್ರತಿ ಮನೆಯ ಗಂಡುಮಕ್ಕಳ ಸಮ್ಮುಖದಲ್ಲೇ ನಡೆಯುತ್ತದೆ. ಪ್ರತಿ ಮನೆಯಲ್ಲೂ ಗಂಡಸೇ ಕುಮಾರಿಯರನ್ನು ಪೂಜಿಸುತ್ತಾನೆ. ಬೆಳೆಯುತ್ತಿರುವ ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೆ ಗೌರವ ಕೊಡಬೇಕು, ಅವರೂ ಮನುಷ್ಯರು ಎಂಬ ಭಾವನೆ ಎಳವೆಯಲ್ಲೇ ಮೊಳೆಯುತ್ತದೆ. ಹೆಣ್ಣನ್ನು ಗೌರವಿಸುವ ಇಂಥ ಸಂಪ್ರದಾಯ ನಿಜಕ್ಕೂ ಸಾರ್ವತ್ರಿಕಗೊಳಿಸಬೇಕು. ಇದು ಇಡೀ ಊರಿನ, ಪ್ರತಿ ತಾಲ್ಲೂಕಿನ, ಪ್ರತಿ ಜಿಲ್ಲೆಯ ಒಟ್ಟಾರೆ ಇಡೀ ಸಮಾಜದ ಹಬ್ಬವಾಗಿ ಬೆಳೆಯಬೇಕು. ಆದರೆ, ಇದು ಕೇವಲ ಆಚರಣೆಯಾಗಷ್ಟೆ ಉಳಿಯಬಾರದು ಎಂಬ ಎಚ್ಚರವೂ ನಮ್ಮಲ್ಲಿ ಬರಬೇಕು.

ನವರಾತ್ರಿ ಸಂಭ್ರಮಕ್ಕೆ ಸಿಂಪಲ್ ಸಿಹಿಭಕ್ಷ್ಯ

ನಳಪಾಕ

ಶ್ರುತ ರಾಘವಿ

ಒಂಬತ್ತು ದಿನಗಳ ಕಾಲ ನಡೆಯುವ ನವರಾತ್ರಿ ಹಬ್ಬದಲ್ಲಿ ಪ್ರತಿ ದಿನವೂ ಒಂದೊಂದು ಸಿಹಿ ಭಕ್ಷ್ಯ ತಯಾರಿಸುವುದು ವಾಡಿಕೆ.ಬೊಂಬೆ ಕೂರಿಸುವ ಮನೆಗಳಲ್ಲಂತೂ ತರಹೇವಾರಿ ಸಿಹಿ ಇರಲೇಬೇಕು. ಇನ್ನೇನು ಹಬ್ಬ ಶುರುವಾಗುತ್ತಿದೆ. ಏನೇನು ಸಿಹಿ ಮಾಡಬೇಕೆಂದು ಯೋಚಿಸುತ್ತಿದ್ದೀರಲ್ಲವಾ? ಇಲ್ಲಿವೆ ನೋಡಿ ಒಂದಷ್ಟು ರೆಸಿಪಿಗಳು.



ಪನೀರ್ ಜಿಲೇಬಿ

ಬೇಕಾಗುವ ಸಾಮಗ್ರಿಗಳು: 200 ಗ್ರಾಂ ಪನೀರ್, ಸಕ್ಕರೆ ಒಂದು ಲೋಟ, ಏಲಕ್ಕಿ ಪುಡಿ, ಎರಡು ಚಮಚ ಕಾರ್ನ್‌ಫ್ಲೋರ್, ಎರಡು ಚಮಚ ಮೈದಾ, ಒಂದು ಚಿಟಿಕೆ ಅಡುಗೆ ಸೋಡ, ಒಂದು ಬಟ್ಟಲು ಹಾಲು. ಸ್ವಲ್ಪ ಅರಿಶಿನ. ಕೇಸರಿ ದಳ.

ಮಾಡುವ ವಿಧಾನ : ಒಂದು ಲೋಟ ಸಕ್ಕರೆಗೆ ಕಾಲು ಲೋಟದಷ್ಟು ನೀರು ಹಾಕಿ. ಸಕ್ಕರೆ ಪಾಕ ಮಾಡಿಟ್ಟುಕೊಳ್ಳಬೇಕು. ಇದಕ್ಕೆ ಏಲಕ್ಕಿ ಪುಡಿ ಹಾಕಿ. ಎರಡು ಹನಿ ನಿಂಬೆರಸ ಹಾಗೂ ಕೇಸರಿ ದಳವನ್ನು ಹಾಕಿ.

ಪನೀರ್ ಅನ್ನು ಮಿಕ್ಸಿಗೆ ಹಾಕಿ ಚೆನ್ನಾಗಿ ಪೇಸ್ಟ್ ಮಾಡಿಕೊಳ್ಳಿ. ಕಾರ್ನ್ ಫ್ಲೋರ್, ಮೈದಾ, ಅಡುಗೆ ಸೋಡ, ಸ್ವಲ್ಪ ಸ್ವಲ್ಪ ಹಾಲು ಹಾಕಿಕೊಂಡು ಚೆನ್ನಾಗಿ ಹದ ಮಾಡಿಟ್ಟುಕೊಳ್ಳಿ. ಅಗತ್ಯವೆನಿಸಿದರೆ ಫುಡ್ ಕಲರ್ ಬಳಸಬಹುದು. ಇಲ್ಲವಾದರೆ, ಅರಿಶಿನ ಬಳಸಿದರೂ ಸಾಕು. ಈಗ ಹದ ಮಾಡಿಟ್ಟುಕೊಂಡ ಹಿಟ್ಟನ್ನು ಸಾಸ್ ಡಬ್ಬಕ್ಕೆ ತುಂಬಿ, ಕಾದ ಎಣ್ಣೆಗೆ ವೃತ್ತಾಕಾರದಲ್ಲಿ ಬಿಡಿ. ಐದು ನಿಮಿಷಗಳ ಎಣ್ಣೆಯಲ್ಲಿ ಕಾಯಿಸಿದ ಮೇಲೆ ಸಿದ್ಧಗೊಂಡ ಜಿಲೇಬಿಯನ್ನು ಸಕ್ಕರೆ ಪಾಕದಲ್ಲಿ ನೆನೆಸಿಡಿ. ಗರಿ ಗರಿಯಾದ ಪನೀರ್ ಜಿಲೇಬಿ ತಿನ್ನಲು ಸಿದ್ಧ.



ಕೊಬ್ಬರಿ ಲಡ್ಡು

ಬೇಕಾಗುವ ಸಾಮಗ್ರಿಗಳು: 1 ಚಮಚ ತುಪ್ಪ, ಎರಡೂವರೆ ಕಪ್ ತುರಿದ ತೆಂಗಿನಕಾಯಿ, 1 ಕಪ್ ಬೆಲ್ಲ, ಕಾಲು ಚಮಚ ಏಲಕ್ಕಿ ಪುಡಿ.

ಮಾಡುವ ವಿಧಾನ: ದೊಡ್ಡ ಕಡಾಯಿಯಲ್ಲಿ ತುಪ್ಪವನ್ನು ಬಿಸಿ ಮಾಡಿ, ತೆಂಗಿನಕಾಯಿ ತುರಿ ಸೇರಿಸಿ. ತೇವಾಂಶ ಒಣಗುವವರೆಗೂ ಹುರಿಯಿರಿ. ಈ ಮಿಶ್ರಣಕ್ಕೆ ಬೆಲ್ಲ ಸೇರಿಸಿ ಮತ್ತು ಮಧ್ಯಮ ಉರಿಯಲ್ಲಿ ಬೇಯಿಸಿ. ಬೆಲ್ಲ ಕರಗುವ ತನಕ ಬೇಯಿಸಬೇಕು. ಇದಕ್ಕೆ ಏಲಕ್ಕಿ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು. ನಂತರ ಪಾತ್ರೆ ಇಳಿಸಿ.

ಸಿದ್ಧವಾಗಿರುವ ಮಿಶ್ರಣವನ್ನು ತೆಗೆದುಕೊಂಡು ಉಂಡೆ ಮಾಡಿ. ಸವಿಯಲು ಕೊಬ್ಬರಿ ಲಡ್ಡು ಸಿದ್ಧವಾಗುತ್ತದೆ. ಈ ಲಡ್ಡುಗಳನ್ನು ಗಾಳಿಯಾಡದ ಪಾತ್ರೆಯಲ್ಲಿ ಮುಚ್ಚಿಟ್ಟರೆ ವಾರಗಳ ಕಾಲ ಇಟ್ಟು, ತಿನ್ನಬಹುದು.



ಬಾಳೆಹಣ್ಣಿನ ಹಲ್ವಾ

ಬೇಕಾಗುವ ಸಾಮಗ್ರಿಗಳು: ಒಂದು ಕೆ.ಜಿ. ಚೆನ್ನಾಗಿ ಮಾಗಿದ ಬಾಳೆ ಹಣ್ಣು, ಕಾಲು ಕಪ್ ತುಪ್ಪ, ಅರ್ಧ ಕೆ.ಜಿ. ಬೆಲ್ಲ, ಕಾಲು ಕಪ್ ನೀರು, ಕಾಲು ಚಮಚ ಏಲಕ್ಕಿ ಪುಡಿ, 3 ಚಮಚ ಹುರಿದ ಗೋಡಂಬಿ.

ಮಾಡುವ ವಿಧಾನ: ಬಾಳೆಹಣ್ಣಿನ ಸಿಪ್ಪೆಯನ್ನು ತೆಗೆದು, ಹೋಳುಗಳಾಗಿ ಕತ್ತರಿಸಿ. ಮಿಕ್ಸಿಗೆ ಹಾಕಿಕೊಂಡು ಪೇಸ್ಟ್ ಮಾಡಿಕೊಳ್ಳಿ. ದೊಡ್ಡ ಕಡಾಯಿಯಲ್ಲಿ ತುಪ್ಪವನ್ನು ಬಿಸಿ ಮಾಡಿ, ಅದಕ್ಕೆ ಈ ಪೇಸ್ಟ್ ಅನ್ನು ಹಾಕಿ ಮಧ್ಯಮ ಉರಿಯಲ್ಲಿ ಬೇಯಿಸಿ. ಬಾಳೆಹಣ್ಣಿನ ಹಸಿ ವಾಸನೆ ಹೋಗುವವರೆಗೂ ಬೇಯಿಸಿ.

ನಂತರ ಮತ್ತೊಂದು ಬಾಣಲೆಯಲ್ಲಿ ಬೆಲ್ಲಕ್ಕೆ ನೀರು ಹಾಕಿ ಕರಗಿಸಿ. ಈ ಬೆಲ್ಲದ ಪಾಕವನ್ನು ಬಾಳೆಹಣ್ಣಿನ ಮಿಶ್ರಣದ ಮೇಲೆ ಹಾಕಿ, ಚೆನ್ನಾಗಿ ಬೇಯಿಸಿ. ಈಗ ಏಲಕ್ಕಿಪುಡಿ, ಗೋಡಂಬಿ ಬೆರೆಸಿ. ಹಲ್ವಾವನ್ನು ಬೇಕಿಂಗ್ ಪೇಪರ್‌ನಿಂದ ಮುಚ್ಚಿದ ಟ್ರೇಗೆ ವರ್ಗಾಯಿಸಿ. ಮೂರು ಗಂಟೆಗಳ ಕಾಲ ಹಾಗೆ ಇಡಿ. ನಂತರ ಬೇಕಾದ ಆಕಾರದಲ್ಲಿ ಕತ್ತರಿಸಿಕೊಂಡರೆ, ಬಾಳೆ ಹಣ್ಣಿನ ಹಲ್ವಾ ಸಿದ್ಧ.

ಬಾದಾಮಿ ಹಲ್ವಾ



ಬೇಕಾಗುವ ಸಾಮಗ್ರಿಗಳು: ನೆನೆಸಿ ಸಿಪ್ಪೆ ತೆಗೆದ ಬಾದಾಮಿ ಒಂದು ಕಪ್, ತುಪ್ಪ ಅರ್ಧ ಕಪ್, ರವೆ ಕಾಲು ಕಪ್, ಹಾಲು ಒಂದು ಲೋಟ, ಸಕ್ಕರೆ ಒಂದು ಕಪ್, ಹಾಲಿನಲ್ಲಿ ನೆನೆಸಿದ ಕೇಸರಿ ದಳ ಅರ್ಧ ಚಮಚ, ಏಲಕ್ಕಿ ಪುಡಿ ಅರ್ಧ ಚಮಚ, ಪಿಸ್ತಾ ಅಲಂಕಾರಕ್ಕೆ

ಮಾಡುವ ವಿಧಾನ: ಒಂದು ಮಿಕ್ಸಿ ಜಾರಿಗೆ 1 ಕಪ್ ನೆನೆಸಿ ಸಿಪ್ಪೆ ತೆಗೆದ ಬಾದಾಮಿ, ಕಾಲು ಕಪ್ ನೀರು ಹಾಕಿ ನುಣ್ಣಗೆ ರುಬ್ಬಿ. ಈಗ ಒಂದು ಬಾಣಲೆಗೆ ಅರ್ಧ ಕಪ್ ತುಪ್ಪ, ಕಾಲು ಕಪ್ ರವೆ ಹಾಕಿ 3 ರಿಂದ 4 ನಿಮಿಷ ಹುರಿಯಿರಿ. ನಂತರ ಇದಕ್ಕೆ ರುಬ್ಬಿದ ಬಾದಾಮಿ ಹಾಕಿ ಚೆನ್ನಾಗಿ ಕಲಸಿ. ಮೂರು ನಿಮಿಷ ಮಧ್ಯಮ ಉರಿಯಲ್ಲಿ ಒಂದೇ ಸಮನೆ ಮಗುಚುತ್ತಾ ಹುರಿಯಿರಿ. ಹಾಗೆ ಕಲಸುತ್ತಾ 2 ದೊಡ್ಡ ಚಮಚ ತುಪ್ಪ ಹಾಕಿ 2 ನಿಮಿಷ ಕಲಸಿ.ನಂತರ ಇದಕ್ಕೆ ಹಾಲು ಹಾಕಿ ಚೆನ್ನಾಗಿ ಗಂಟಿಲ್ಲದಂತೆ 5 ನಿಮಿಷ ತಿರುವಬೇಕು. ಇದಕ್ಕೆ ಸಕ್ಕರೆ ಹಾಕಿ, ಸಕ್ಕರೆ ಕರಗುವವರೆಗೂ ಚೆನ್ನಾಗಿ ತಿರುವಿ. ನಂತರ ಇದಕ್ಕೆ ಹಾಲಿನಲ್ಲಿ ನೆನೆಸಿದ ಕೇಸರಿ ದಳ ಹಾಕಿ. ಮಧ್ಯಮ ಉರಿಯಲ್ಲಿ ಇಡಿ. ತಳ ಬಿಡಲು ಪ್ರಾರಂಭಿಸಿದಾಗ ಇದಕ್ಕೆ ಅರ್ಧ ಚಮಚ ಏಲಕ್ಕಿ ಪುಡಿ ಹಾಕಿ. ಈಗ ಇದನ್ನು ಬಟ್ಟಲಿಗೆ ಹಾಕಿ ಮೇಲೆ ಪಿಸ್ತಾ ಚೂರುಗಳಿಂದ ಅಲಂಕರಿಸಿದರೆ ರುಚಿಯಾದ ಬಾದಾಮಿ ಹಲ್ವಾ ಸವಿಯಲು ಸಿದ್ಧ.

ಬೇಗನೆ ಮುಟ್ಟು ನಿಂತರೆ ತೊಂದರೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್

1. ನನಗೆ 38 ವರ್ಷಗಳು. ಹಿಂದೆ ಯಾವಾಗಲೂ ಮುಟ್ಟಾದಾಗ ಕಡಿಮೆ ರಕ್ತಸ್ರಾವ ಆಗುತ್ತಿತ್ತು. ಈಗ ಒಂದು ವರ್ಷದಿಂದ ಮುಟ್ಟು ಆಗಿಲ್ಲ. ನನಗೆ ಎರಡು ಮಕ್ಕಳಿವೆ. ಟ್ಯೂಬೆಕ್ಟಮಿ ಆಪರೇಷನ್ ಆಗಿದೆ. ಯಾವ ತಜ್ಞವೈದ್ಯರನ್ನು ಸಂಪರ್ಕಿಸಿಲ್ಲ. ಏನು ಮಾಡಲಿ?

ಹೆಸರು, ಊರು ತಿಳಿಸಿಲ್ಲ.

ನಿಮಗೆ ಮುಟ್ಟು ನಿಂತುಹೋಗಿರಬಹುದು. ಅಂದರೆ ಸಂತಾನೋತ್ಪತ್ತಿ ವಯಸ್ಸಿನಲ್ಲಿ ಒಂದು ವರ್ಷಕ್ಕೂ ಹೆಚ್ಚು ನಿರಂತರವಾಗಿ ಮುಟ್ಟಾಗದಿದ್ದರೆ ಅದನ್ನು ಅಕಾಲಿಕ ಋತುಬಂಧ (ಪ್ರಿಮೆಚ್ಯೂರ್ ಮೆನುಪಾಸ್) ಎನ್ನುತ್ತೇವೆ. ನಿಮಗೂ ಅದೇ ಆಗಿರಬಹುದು. ಇದಕ್ಕೆ ಹೆಚ್ಚಿನ ಸಂದರ್ಭಗಳಲ್ಲಿ ಕಾರಣ ಕೊಡುವುದು ಅಸಾಧ್ಯವಾಗುತ್ತದೆ. ಸಾವಿರದಲ್ಲಿ ಒಬ್ಬರಿಗೆ 30 ವರ್ಷಗಳ ನಂತರ ಹೀಗೆ ಬೇಗನೇ ಮುಟ್ಟು ನಿಲ್ಲಬಹುದು. ಅನುವಂಶೀಯ ಕಾರಣವೂ ಸೇರಿದಂತೆ, ಆಟೋಇಮ್ಯೂನ್ ಕಾಯಿಲೆಯಿದ್ದವರಲ್ಲಿ, ಮಂಪ್ಸ್ ಆಗಿದ್ದರೆ, ಥೈರಾಯಿಡ್ ಗ್ರಂಥಿ ಸ್ರಾವದ ಸಮಸ್ಯೆ ಇದ್ದರೆ ಹೀಗೆ ಆಗಬಹುದು. ಅಂಡಾಶಯದ ಕ್ಷಯರೋಗ, ಕ್ಯಾನ್ಸರ್‌ಗೆ ಚಿಕಿತ್ಸೆಗಾಗಿ ವಿಕಿರಣ ಚಿಕಿತ್ಸೆ ಮತ್ತು ಕಿಮೊಥೆರೆಪಿ ತೆಗೆದುಕೊಂಡಾಗ ಹೀಗಾಗುವ ಸಾಧ್ಯತೆ ಇದೆ. ದೀರ್ಘಾವಧಿವರೆಗೆ ಬಂಜೆತನದ ಚಿಕಿತ್ಸೆ ತೆಗೆದುಕೊಂಡಾಗ ಮತ್ತು ಟನರ್ಸ್ ಸಿಂಡ್ರೋಮ್, ಗ್ಯಾಲಕ್ಟೋಸಿಮಿಯಾ ಕಾರಣಕ್ಕೂ ಅಕಾಲಿಕ ಋತುಬಂಧ ಆಗಬಹುದು. ಇದಕ್ಕೆ ಕಾರಣ, ಪ್ರತಿ ಮಹಿಳೆಯರಲ್ಲೂ ಅಂಡಾಶಯದಲ್ಲಿ ನಿಗದಿತವಾದ ಕೋಶಿಕೆಗಳು ಇದ್ದು ತಿಂಗಳು ತಿಂಗಳು ಅಂಡೋತ್ಪತ್ತಿಯಾಗುತ್ತದೆ. ಈ ಪ್ರಕ್ರಿಯೆ ನಿಂತುಹೋಗಿ ಅಂಡೋತ್ಪತ್ತಿ ಕ್ಷೀಣಿಸುತ್ತಾ ಬಂದು, ಹೆಣ್ತನದ ಹಾರ್ಮೋನುಗಳ ಸ್ರಾವವೂ ಕಡಿಮೆಯಾಗುತ್ತಾ ಬಂದು ಋತುಚಕ್ರವೂ ಬೇಗನೆ ನಿಂತುಬಿಡುತ್ತದೆ. ಹೀಗಾಗಿ ಅಕಾಲಿಕ ಋತುಬಂಧವಾದಾಗ, ಸಹಜ ಋತುಬಂಧದಲ್ಲಿ ಆಗುವ ಉಷ್ಣಅಲೆಗಳು, ನಿದ್ರಾಹೀನತೆ, ಲೈಂಗಿಕ ನಿರಾಸಕ್ತಿ ಇತ್ಯಾದಿ ಇರಬಹುದು.

ನಿಮಗೆ ಏನಾದರೂ ಈ ಮೇಲಿನ ತರಹದ ಸಮಸ್ಯೆ ಆಗಿದೆಯೇ? ಯಾವುದಕ್ಕೂ ನೀವು ಒಮ್ಮೆ ತಜ್ಞರಿಂದ ತಪಾಸಣೆಗೊಳಾಗಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್‌ನಲ್ಲಿ ಗರ್ಭಕೋಶ ಹಾಗೂ ಅಂಡಾಶಯಗಳನ್ನು ಪರೀಕ್ಷಿಸಿಕೊಳ್ಳಿ. ಗರ್ಭಕೋಶದ ಒಳಪದರ 4 ಮಿ.ಮೀಗಿಂತ ತೆಳ್ಳಗಿದ್ದು, ಅಂಡಾಶಯದ ಗಾತ್ರವು ಮಾಮೂಲಿಗಿಂತ ಚಿಕ್ಕದಾಗಿದ್ದರೆ, ನಿಮಗೆ ಅಕಾಲಿಕ ಋತುಬಂಧವಾಗಿರಬಹುದು. ಹೀಗೆ ಆಗುವುದು ಒಳ್ಳೆಯದಲ್ಲ. ಏಕೆಂದರೆ ಅಂಡಾಶಯ ದಿಂದ ಉತ್ಪತ್ತಿಯಾಗುವ ಈಸ್ಟ್ರೋಜನ್ ಹಾರ್ಮೋನು ಮಹಿಳೆಯರ ಹೃದಯದ ರಕ್ಷಣೆ ಮಾಡುವುದರಿಂದ, ಹೀಗೆ ಬೇಗನೆ ಮುಟ್ಟುನಿಲ್ಲುವುದರಿಂದ ಕೇವಲ ಸಂತಾನೋತ್ಪತ್ತಿ ಸಾಮರ್ಥ್ಯ ಕಳೆದುಕೊಳ್ಳುವುದಲ್ಲದೇ, ಮೂಳೆಸವೆತ, ಹೃದ್ರೋಗ, ಖಿನ್ನತೆಯಂಥ ಸಮಸ್ಯೆಗಳು ಬರಬಹುದು. ಲೈಂಗಿಕ ಆಸಕ್ತಿಯೂ ಕುಂದಬಹುದು. ಋತುಬಂಧದ ನಂತರದ ಸಮಸ್ಯೆಗಳಲ್ಲ ಬೇಗನೆ ಬರಬಹುದು. ಹಾಗಾಗಿ ನಿಮಗೆ ಈ ಮೇಲೆ ಹೇಳಿದ ತರಹ ತೊಂದರೆಯಾಗುತ್ತಿದಲ್ಲಿ ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ಪಡೆಯಬೇಕು. ಉತ್ತಮ ಜೀವನಶೈಲಿ ಅಳವಡಿಸಿಕೊಳ್ಳಬೇಕು. ಹೆಚ್ಚು ಫೈಟೊಈಸ್ಟ್ರೋಜನ್‌ಗಳಿರುವ ಅಗಸೆಬೀಜ, ಮೆಂತ್ಯೆ, ಬೀನ್ಸ್, ಕ್ಯಾರೆಟ್, ಕುಂಬಳಬೀಜ, ಮೊಳಕೆಕಾಳುಗಳು, ಒಣಹಣ್ಣುಗಳು ಮತ್ತು ಹೆಚ್ಚು ಕ್ಯಾಲ್ಸಿಯಂಯುಕ್ತ ಆಹಾರ ಸೇವಿಸಬೇಕು. ದಿನಾಲೂ ಕನಿಷ್ಠ ಒಂದು ಗಂಟೆ ಯಾವುದಾದರು ದೈಹಿಕ ಚಟುವಟಿಕೆ ಅಳವಡಿಸಿಕೊಳ್ಳಿ. ಪ್ರತಿದಿನ ರಾತ್ರಿ 6 ರಿಂದ 8 ತಾಸು ನಿದ್ರೆ ಮಾಡಿ. ಸಮತೂಕ ಕಾಯ್ದುಕೊಳ್ಳಬೇಕು. ಇವೆಲ್ಲದರ ಜೊತೆಗೆ ಸಕಾರಾತ್ಮಕ ಚಿಂತನೆಗಳು ನಿಮ್ಮ ಸಮಸ್ಯೆ ಪರಿಹಾರಕ್ಕೆ ನೆರವಾಗುತ್ತವೆ. ಧೈರ್ಯವಾಗಿರಿ.

2. ನಾನು ಈಗ 5 ತಿಂಗಳ ಗರ್ಭಿಣಿ. ಈಚೆಗೆ ಅನಾಮಲಿ ಸ್ಕ್ಯಾನಿಂಗ್ ಅಗಿದೆ. ರಿಪೋರ್ಟ್ ಎಲ್ಲವೂ ನಾರ್ಮಲ್ ಇದೆ. ಅದರೆ ಇತ್ತೀಚೆಗೆ ನನಗೆ ಕಾಮಾಸಕ್ತಿ ಹೆಚ್ಚುತ್ತಿದೆ. ಇದು ಸಹಜವೇ ? ಗಂಡನಲ್ಲಿ ಈ ಬಗ್ಗೆ ಹೇಳಿದರೆ ಈ ಸಂದರ್ಭದಲ್ಲಿ ಕೂಡುವುದು ತಪ್ಪು ಎನ್ನುತ್ತಾರೆ. ಗರ್ಭಿಣಿಯರು ಹಸ್ತಮೈಥುನ ಮಾಡಿಕೊಳ್ಳಬಹುದೇ? ಪೋರ್ನ್ ನೋಡಿ ಹಸ್ತಮೈಥುನ ಮಾಡಿಕೊಳ್ಳಬಹುದೇ? ಒಂದೊಮ್ಮೆ ಹಸ್ತಮೈಥುನ ಮಾಡಿಕೊಂಡರೆ ಮಗುವಿನ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಬಹುದೇ?

ಊರು ಹೆಸರು ತಿಳಿಸಿಲ್ಲ.

ಗರ್ಭಿಣಿಯರಲ್ಲಿ ಕಾಮಾಸಕ್ತಿ ಉಂಟಾಗುವುದು ಅಸಹಜವೇನಲ್ಲ. ಹಾಗೆಯೇ ಗರ್ಭಿಣಿಯರು ಲೈಂಗಿಕ ಕ್ರಿಯೆ ನಡೆಸುವುದು ತಪ್ಪಲ್ಲ. ನಿಮ್ಮ ಪತಿಯ ಅಭಿಪ್ರಾಯ ತಪ್ಪು. ಗರ್ಭಧಾರಣೆಯಲ್ಲಿ ಮೊದಲ ಎರಡು ತಿಂಗಳು ಮತ್ತು ಕೊನೆಯ 6 ರಿಂದ 8 ವಾರ ಸ್ವಲ್ಪ ಜಾಗರೂಕತೆಯಿಂದ ಈ ಪ್ರಕ್ರಿಯೆಯಲ್ಲಿ ತೊಡಗಬೇಕಷ್ಟೇ. ಹೆಚ್ಚಿನ ದಂಪತಿಯರು ಗರ್ಭಿಣಿಯರಲ್ಲಿ ಉಬ್ಬುತ್ತಿರುವ ಹೊಟ್ಟೆಯ ಕಾರಣ, ಈ ಪ್ರಕ್ರಿಯೆಯಿಂದ ಗರ್ಭಸ್ಥ ಶಿಶುವಿಗೆ ತೊಂದರೆಯಾಗಬಹುದೆಂದು ತಪ್ಪು ತಿಳಿವಳಿಕೆ ಹೊಂದಿರುತ್ತಾರೆ. ಆದರೆ, ಗರ್ಭದಲ್ಲಿರುವ ಶಿಶು ಗರ್ಭಕೋಶ ದೊಳಗಿರುವ ಭ್ರೂಣದ ಚೀಲದಲ್ಲಿ ಸುರಕ್ಷಿತವಾಗಿರುತ್ತದೆ. ಆಮ್ನಿಯಾಟಿಕ್ ದ್ರವದಿಂದ (ನೆತ್ತಿನೀರು) ಸುತ್ತುವರೆದಿರುತ್ತದೆ. ಹಾಗಾಗಿ ಗರ್ಭಿಣಿಯರು ಲೈಂಗಿಕ ಕ್ರಿಯೆ ನಡೆಸುವುದರಿಂದ ಮಗುವಿನ ದೈಹಿಕ, ಮಾನಸಿಕ, ಆರೋಗ್ಯದ ಮೇಲೆ ದುಷ್ಪರಿಣಾಮಗಳೇನಿಲ್ಲ.

ಅಷ್ಟೇ ಅಲ್ಲ, ಲೈಂಗಿಕ ಕ್ರಿಯೆಯಿಂದ ಈ ಸಂದರ್ಭದಲ್ಲಿ ಮತ್ತೆ ಗರ್ಭಧರಿಸುವ ಆತಂಕವೂ ಇರುವುದಿಲ್ಲ. ಹಾಗಾಗಿ ಅನಗತ್ಯ ಸಂತಾನ ಪ್ರಾಪ್ತಿಯಾಗುವುದೆಂಬ ಚಿಂತೆಯೂ ಇಲ್ಲದೆ ನಿಮಗೆ ಕಾಮಾಸಕ್ತಿ ಹೆಚ್ಚಾಗಿ ರಬಹುದು. ಹಸ್ತಮೈಥುನದಿಂದ ನಿಮಗೆ ಸ್ವಯಂ ಲೈಂಗಿಕ ಉದ್ರೇಕವಾಗಿ ಸಂತೃಪ್ತಿ ಸಿಗಬಹುದು, ತಪ್ಪೇನಿಲ್ಲ. ನಿಮಗೆ ಗರ್ಭಧಾರಣೆಯಲ್ಲಿ ಯಾವುದೇ ಗಂಡಾಂತರ ಉಂಟು ಮಾಡುವ ತೊಂದರೆ ಇಲ್ಲದಿದ್ದಲ್ಲಿ ಲೈಂಗಿಕ ಕ್ರಿಯೆಯಲ್ಲಿ ಸುರಕ್ಷಿತವಾಗಿ ತೊಡಗಬಹುದು. ಯಾವುದಾದರೂ ತೊಂದರೆ ಇದ್ದಲ್ಲಿ ತಜ್ಞವೈದ್ಯರನ್ನು ಸಂಪರ್ಕಿಸಿ.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸರಳತೆಯ ಶಕ್ತಿಯನ್ನು ಎಷ್ಟೊಂದು ಮಂದಿ ಕಡೆಗಣಿಸುತ್ತಾರೆ! ಆದರೆ, ಹೃದಯಕ್ಕೆ ಇರುವ ನಿಜವಾದ ಕೀಲಿಕೈ ಅದೇ ಆಗಿರುತ್ತದೆ.

–ವಿಲಿಯಂ ವರ್ಡ್ಸ್‌ವರ್ತ್

ಕೋರ್ಟ್ ಕಲಾಪಗಳ ನೇರಪ್ರಸಾರ ಸುಪ್ರೀಂ ಕೋರ್ಟ್ ಕ್ರಮ ಪ್ರಶಂಸನೀಯ

ಸಾಂವಿಧಾನಿಕ ನ್ಯಾಯಪೀಠಗಳು ನಡೆಸುವ ವಿಚಾರಣೆಗಳನ್ನು ನೇರಪ್ರಸಾರ ಮಾಡುವ ಸುಪ್ರೀಂ ಕೋರ್ಟ್‌ನ ತೀರ್ಮಾನವು ಬಹಳ ಪ್ರಮುಖ ಹೆಜ್ಜೆ. ಇದರಲ್ಲಿ ಹಲವು ಸಕಾರಾತ್ಮಕ ಅಂಶಗಳು ಇವೆ. ನ್ಯಾಯಾಲಯವು 2018ರಲ್ಲಿಯೇ ಕಲಾಪಗಳ ನೇರ ಪ್ರಸಾರಕ್ಕೆ ಮುಂದಾಗಿತ್ತು. ಮೂವರು ನ್ಯಾಯಮೂರ್ತಿಗಳು ಇದ್ದ ಪೀಠವು ಈ ಬಗ್ಗೆ ಆದೇಶವನ್ನು ಕೂಡ ಹೊರಡಿಸಿತ್ತು. ನೇರ ಪ್ರಸಾರದ ವಿಚಾರವಾಗಿ ಕೆಲವು ಮಾರ್ಗಸೂಚಿಗಳನ್ನು ಕೂಡ ನ್ಯಾಯಪೀಠ ರೂಪಿಸಿತ್ತು. ಆದರೆ, ಆ ಯೋಜನೆಯು ಹೆಚ್ಚು ಮುಂದುವರಿಯಲಿಲ್ಲ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಹಾಗೂ ಹಲವು ಹೈಕೋರ್ಟ್‌ಗಳ ಕಲಾಪಗಳು ಆನ್‌ಲೈನ್ ಮೂಲಕ ನಡೆದವು. ಆದರೆ, ಆಗ ಆಗಿದ್ದು ತುರ್ತು ಸಂದರ್ಭವೊಂದಕ್ಕೆ ನೀಡಿದ್ದ ಪ್ರತಿಕ್ರಿಯೆಯಂತೆ ಇತ್ತು. ಅದು, ಸಾರ್ವಜನಿಕರು ಕೋರ್ಟ್ ಕಲಾಪಗಳನ್ನು ಆನ್‌ಲೈನ್ ಮೂಲಕ ವೀಕ್ಷಿಸಲು ಲಭ್ಯವಾದ ಒಂದು ಪೂರ್ಣ ಅವಕಾಶ ಎನ್ನಲಾಗದು. ಆದರೆ, ಕಲಾಪಗಳನ್ನು ಆನ್‌ಲೈನ್ ಮೂಲಕ ಪ್ರಸಾರ ಮಾಡುವ ಆಲೋಚನೆಯು ಹೆಚ್ಚು ಮಹತ್ವ ಪಡೆದುಕೊಂಡಿತು. ಈಗ ಕರ್ನಾಟಕ ಹೈಕೋರ್ಟ್ ಸೇರಿದಂತೆ ಒಟ್ಟು ಆರು ಹೈಕೋರ್ಟ್‌ಗಳು ತಮ್ಮದೇ ಆದ ಯೂಟ್ಯೂಬ್ ವಾಹಿನಿ ಮೂಲಕ ಕಲಾಪಗಳನ್ನು ನೇರವಾಗಿ ಪ್ರಸಾರ ಮಾಡುತ್ತಿವೆ. ಹಲವು ಪ್ರಕರಣಗಳ ವಿಚಾರಣೆಯು ನೇರವಾಗಿ ಪ್ರಸಾರ ಆದಾಗ ಅದನ್ನು ಜನ ದೊಡ್ಡ ಸಂಖ್ಯೆಯಲ್ಲಿ ವೀಕ್ಷಿಸಿರುವುದನ್ನು ಗಮನಿಸಿದರೆ, ನ್ಯಾಯಾಲಯದ ಕಲಾಪಗಳಲ್ಲಿ ಸಾರ್ವಜನಿಕರಿಗೆ ಎಷ್ಟು ಆಸಕ್ತಿ ಇದೆ ಎಂಬುದು ಅರಿವಾಗುತ್ತದೆ.



ಕಲಾಪಗಳ ನೇರ ಪ್ರಸಾರವು ನ್ಯಾಯಾಂಗವನ್ನು ನೇರವಾಗಿ ಜನರ ಬಳಿಗೆ ಒಯ್ಯುತ್ತದೆ

ಕಲಾಪಗಳನ್ನು ನೇರವಾಗಿ ಪ್ರಸಾರ ಮಾಡುವುದರಿಂದಾಗಿ 'ಮಾಹಿತಿಯನ್ನು ಸಾಧ್ಯವಾದಷ್ಟು ಹೆಚ್ಚು ವ್ಯಾಪಕವಾಗಿ ಬಿತ್ತರಿಸಲು ಆಗುತ್ತದೆ, ನ್ಯಾಯಾಂಗದ ಪ್ರಕ್ರಿಯೆಗಳಿಗೆ ಹೆಚ್ಚು ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ಬರುತ್ತದೆ' ಎಂದು ಮೂವರು ನ್ಯಾಯಮೂರ್ತಿಗಳ ನ್ಯಾಯಪೀಠವು ಹೇಳಿತ್ತು. ನ್ಯಾಯಾಲಯದಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದು ಪ್ರಜೆಗಳ ಮೂಲಭೂತ ಹಕ್ಕುಗಳ ಒಂದು ಭಾಗ ಎಂದು ಸಹ ಕೋರ್ಟ್ ಹೇಳಿತ್ತು. ದೇಶದ ಅತ್ಯಂತ ಪ್ರಮುಖ ಸಂಸ್ಥೆಗಳಲ್ಲಿ ಒಂದಾಗಿರುವ ನ್ಯಾಯಾಂಗವನ್ನು ದೇಶದ ಜನ ಬಹಳ ಗೌರವದಿಂದ ಕಾಣುತ್ತಾರೆ. ನ್ಯಾಯಾಂಗದ ಕಲಾಪಗಳಲ್ಲಿ ಪಾರದರ್ಶಕತೆ ಹೆಚ್ಚಾದರೆ ನ್ಯಾಯಾಂಗದ ಕುರಿತು ಜನ ಇರಿಸಿರುವ ವಿಶ್ವಾಸವು ಇನ್ನಷ್ಟು ಜಾಸ್ತಿ ಆಗುತ್ತದೆ. ಹೀಗಾಗಿ, ನ್ಯಾಯಾಂಗದ ಕಲಾಪಗಳ ಪಾರದರ್ಶಕತೆಯನ್ನು ಹೆಚ್ಚು ಮಾಡುವ ಯಾವುದೇ ಕ್ರಮ ಸ್ವಾಗತಾರ್ಹ ಆಗುತ್ತದೆ. ಭಾರತದ ನ್ಯಾಯಾಂಗ, ನ್ಯಾಯಾಲಯಗಳು ಸಾರ್ವಜನಿಕರಿಗೆ ತಮ್ಮ ಬಾಗಿಲುಗಳನ್ನು ಮುಚ್ಚಿಲ್ಲ. ಆದರೆ, ಸೀಮಿತ ಸ್ಥಳಾವಕಾಶದ ಕಾರಣದಿಂದಾಗಿ ಹೆಚ್ಚಿನವರಿಗೆ ಕಲಾಪಗಳನ್ನು ವೀಕ್ಷಿಸಲು ಸಾಧ್ಯವಾಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ, ಕಲಾಪಗಳ ನೇರ ಪ್ರಸಾರವು ನ್ಯಾಯಾಂಗವನ್ನು ನೇರವಾಗಿ ಜನರ ಬಳಿಗೆ ಒಯ್ಯುತ್ತದೆ. ನ್ಯಾಯದಾನ ಮಾಡುವುದಷ್ಟೇ ಅಲ್ಲ, ನ್ಯಾಯದಾನ ಆಗುತ್ತಿದೆ ಎಂಬುದು ಇತರರಿಗೆ ಗೊತ್ತಾಗುವಂತೆಯೂ ಇರಬೇಕು ಎಂಬ ಮಾತು ಇದೆ. ಕಲಾಪಗಳ ನೇರ ಪ್ರಸಾರದ ಕ್ರಮದಿಂದಾಗಿ ಈ ಮಾತು ಇನ್ನಷ್ಟು ಅರ್ಥಪೂರ್ಣ ಆಗುತ್ತದೆ.

ನ್ಯಾಯಾಲಯಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದು ದೇಶದಲ್ಲಿ ಬಹುತೇಕರಿಗೆ ಪೂರ್ಣವಾಗಿ ಗೊತ್ತಿಲ್ಲ. ಕಲಾಪಗಳ ನೇರ ಪ್ರಸಾರ ಆರಂಭವಾದ ನಂತರದಲ್ಲಿ ಅವರಿಗೆ ಪ್ರಕ್ರಿಯೆಗಳ ಬಗ್ಗೆ ಇನ್ನಷ್ಟು ಹೆಚ್ಚು ಸ್ಪಷ್ಟವಾಗಿ ಗೊತ್ತಾಗುತ್ತದೆ, ಅವರಿಗೆ ಕಾನೂನಿನ ಕುರಿತು ಇನ್ನಷ್ಟು ಅರಿವು ಮೂಡುತ್ತದೆ. ಕಾನೂನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇದು ಬಹಳ ಸಹಾಯಕ್ಕೆ ಬರುತ್ತದೆ. ಕಕ್ಷಿದಾರರು ಹಾಗೂ ಸಾರ್ವಜನಿಕರು, ನ್ಯಾಯಾಲಯಗಳಲ್ಲಿ ವಕೀಲರ ವಾದ ಮಂಡನೆ ಹೇಗಿರುತ್ತದೆ ಎಂಬುದನ್ನು ಹೆಚ್ಚು ಸ್ಪಷ್ಟವಾಗಿ ಅರಿಯಬಹುದು. ವಿಚಾರಣೆಯ ಹಂತದಲ್ಲಿ ಇರುವ ಕೆಲವು ಪ್ರಮುಖ ಪ್ರಕರಣಗಳನ್ನು 25 ಸಾಂವಿಧಾನಿಕ ಪೀಠಗಳು ಪ್ರತಿನಿತ್ಯ ವಿಚಾರಣೆ ನಡೆಸಲಿವೆ ಎಂದು ಸುಪ್ರೀಂ ಕೋರ್ಟ್ ಹೇಳಿರುವ ಹಿನ್ನೆಲೆಯಲ್ಲಿ ಕೂಡ ಹೊಸ ಉಪಕ್ರಮವು ಮಹತ್ವ ಪಡೆಯುತ್ತದೆ. ರಾಷ್ಟ್ರದ ಭದ್ರತೆ ಮತ್ತು ಇತರ ಕೆಲವು ಸೂಕ್ಷ್ಮ ಪ್ರಕರಣಗಳನ್ನು ಹೊರತುಪಡಿಸಿ, ಬೇರೆ ಪ್ರಕರಣಗಳ ನೇರ ಪ್ರಸಾರದ ಬಗ್ಗೆಯೂ ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಬೇಕು. ಅಧೀನ ನ್ಯಾಯಾಲಯಗಳು ಕೂಡ ಇದೇ ಕ್ರಮವನ್ನು ಅನುಸರಿಸುವಂತೆ ಸುಪ್ರೀಂ ಕೋರ್ಟ್ ಕ್ರಮ ಕೈಗೊಳ್ಳಬಹುದು. ಇದಕ್ಕೆ ಅಗತ್ಯವಿರುವ ಮೂಲಸೌಕರ್ಯವನ್ನು ಸರ್ಕಾರಗಳು ಒದಗಿಸಬೇಕು. ಕೆಳಹಂತದ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಹೆಚ್ಚಿರುವ ಕಾರಣ, ಅಲ್ಲಿನ ಕಲಾಪಗಳ ಬಗ್ಗೆ ಜನರ ಆಸಕ್ತಿ ಕೂಡ ಹೆಚ್ಚಿನದಾಗಿಯೇ ಇರುತ್ತದೆ.

ದಿನದ ಟ್ವೀಟ್

ಅಪವಿತ್ರ ನುಡಿಗಟ್ಟು



ಭ್ರಷ್ಟಾಚಾರವನ್ನು ಖಂಡಿಸುವಾಗ 'ಭ್ರಷ್ಟಾಚಾರದ ಗಂಗೋತ್ರಿ' ಎಂದು ಹೇಳಿ 'ಪವಿತ್ರ ಗಂಗೋತ್ರಿ'ಯನ್ನೇ ಭ್ರಷ್ಟ ಮಾಡುವುದು ಸರಿಯಲ್ಲ.

ಎಸ್.ಸುರೇಶ್ ಕುಮಾರ್, ಬಿಜೆಪಿ ಶಾಸಕ

ಕಿಡಿನುಡಿ



ಬಿಜೆಪಿಯು 2022ರಲ್ಲಿ ಕೇವಲ ಐದು ರಾಜ್ಯಗಳ ಚುನಾವಣೆಗಳಿಗೆ ₹ 340 ಕೋಟಿ ಖರ್ಚು ಮಾಡಿದೆ- ಉತ್ತರಪ್ರದೇಶ ವೊಂದರಲ್ಲೇ ₹ 221 ಕೋಟಿ ವೆಚ್ಚವಾಗಿದೆ. ಇದು ಘೋಷಿತ ಚುನಾವಣಾ ವೆಚ್ಚ. ಇದಕ್ಕಿಂತ ಹೆಚ್ಚಿನ ವೆಚ್ಚವು ಅಧಿಕೃತ ಲೆಕ್ಕದಲ್ಲಿ ಕಾಣಿಸಿಕೊಳ್ಳುವುದಿಲ್ಲ. ರಾಮರಾಜ್ಯ ಎನ್ನುವುದು ನಿಸ್ಸಂದೇಹವಾಗಿಯೂ ದುಬಾರಿ ಸಂಗತಿ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಬುಧವಾರ, 24-9-1997

• ಬಿಳಿ ನವಿಲಿಗೆ ಮರಿ ಮೃಗಾಲಯದಲ್ಲಿ ಸಂಭ್ರಮ

ಮೈಸೂರು, ಸೆ. 23– ಮೈಸೂರು ಮೃಗಾಲಯದಲ್ಲಿ ಈಗ ಹಕ್ಕಿಗಳ ಸಂಭ್ರಮ, ನಾಟ್ಯ ವೈಭವ.

ಮೊನ್ನೆ ಎಂಟು ಹಕ್ಕಿಮರಿಗಳು ಹುಟ್ಟಿ ಈ ವೈಭವವನ್ನು ಹೆಚ್ಚಿಸಿವೆ. ಬಿಳಿ ನವಿಲಿನ ಮೊಟ್ಟೆಗಳು ಒಡೆದು ಮೂರು ಮರಿಗಳು ಹೊರಬಂದಿವೆ. ಕಂದು ಬಣ್ಣದ ಪೆಲಿಕನ್‌ನ ಒಂದು ಮರಿ ಇದೇ ಹೊತ್ತಿಗೆ ಹೊರಬಂದಿದೆ. ಗಿನಿಕೋಳಿಯ ನಾಲ್ಕು ಮೊಟ್ಟೆಗಳು ಮರಿಗಳಾಗಿವೆ.

ಬಿಳಿ ನವಿಲಿನ ಮರಿಗಳು ಸುಲಭವಾಗಿ ಹೊರಬಂದಿಲ್ಲ. 28 ದಿನಗಳ ಕಾಲ ತಾಯಿ ನವಿಲು ಕಾವು ಕೊಟ್ಟದ್ದು ಕಾರಣವಾಗಿ ಈ ಮರಿಗಳು ಹೊರಬಂದಿವೆ. ಒಂದು ದಶಕದ ಕಾಲ ಈ ಮೃಗಾಲಯದಲ್ಲಿ ಬಿಳಿ ನವಿಲು ಮೊಟ್ಟೆಗಳು ಮರಿಯಾದ ಉದಾಹರಣೆಗಳೇ ಇಲ್ಲ. ಹೀಗಾಗಿ ಈ ಬಿಳಿ ನವಿಲ ಮರಿಗಳಿಂದಾಗಿ ಮೃಗಾಲಯ ಸಂಭ್ರಮಿಸುತ್ತಿದೆ. ಇದೇ ರೀತಿ ಮೃಗಾಲಯದಲ್ಲಿ ಕಂದು ಬಣ್ಣದ ಪೆಲಿಕನ್ ಮರಿ ಹುಟ್ಟಿರುವುದು ಕೂಡಾ ಮೊದಲ ಬಾರಿ.

• ಕಾಶ್ಮೀರ ವಿವಾದ ಪರಿಹಾರ ಅಮೆರಿಕ ಮಧ್ಯಸ್ಥಿಕೆ ಇಲ್ಲ

ನ್ಯೂಯಾರ್ಕ್, ಸೆ. 23 (ಯುಎನ್‌ಐ, ಪಿಟಿಐ)– ಕಾಶ್ಮೀರ ವಿಷಯದಲ್ಲಿ ಭಾರತ ದೇಶವು ಪಾಕಿಸ್ತಾನದೊಂದಿಗೆ ಹೊಂದಿರುವ ಭಿನ್ನಾಭಿಪ್ರಾಯದ ಬಗ್ಗೆ ಅಮೆರಿಕ ಮಧ್ಯ ಪ್ರವೇಶಿಸುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ಆಶ್ವಾಸನೆ ನೀಡಿದ್ದಾರೆ.

ಪ್ರಧಾನಿ ಗುಜ್ರಾಲ್ ಅವರ ಜತೆ ನಿನ್ನೆ ನಡೆದ ಭೇಟಿ ಸಮಯದಲ್ಲಿ ಕ್ಲಿಂಟನ್ ಅವರು ಈ ಆಶ್ವಾಸನೆ ನೀಡಿದರು. ಈ ಆಶ್ವಾಸನೆ ನೀಡುವ ಮೂಲಕ ಕಾಶ್ಮೀರ ವಿಚಾರದಲ್ಲಿ ಅಮೆರಿಕ ಮಧ್ಯಪ್ರವೇಶದ ಭಾರತದ ಭೀತಿಯನ್ನು ಅವರು ಹೋಗಲಾಡಿಸಿದರು. ಕಾಶ್ಮೀರ ವಿಷಯವನ್ನು ಚರ್ಚಿಸಲಾಯಿತೇ ಎಂಬ ಪ್ರಶ್ನೆಗೆ ವಿದೇಶಾಂಗ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು, 'ಇಬ್ಬರೂ ನಾಯಕರಿಗೆ ಇಂತಹ ಸೂಕ್ಷ್ಮ ವಿಷಯದ ಬಗ್ಗೆ ಅರಿವಿದೆ' ಎಂದು ಉತ್ತರಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 24-9-1972

• ಕುದುರೆಮುಖ ಅದಿರು ಅಭಿವೃದ್ಧಿ ಯೋಜನೆಗೆ ಕೇಂದ್ರದ ಒಪ್ಪಿಗೆ ಸನ್ನಿಹಿತ

ಬೆಂಗಳೂರು, ಸೆ. 23– ರಾಜ್ಯದ ಪಶ್ಚಿಮ ಭಾಗದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿರುವ 190 ಕೋಟಿ ರೂಪಾಯಿ ಮೊತ್ತದ ಕುದುರೆಮುಖ ಅದಿರು ಅಭಿವೃದ್ಧಿ ಯೋಜನೆಗೆ ಕೇಂದ್ರದ ಅಂತಿಮ ಮಂಜೂರಾತಿ ಸನ್ನಿಹಿತವಾಗಿದೆ.

ಕೆಲವು ಆರಂಭಿಕ ಕೇಂದ್ರ ಸರ್ಕಾರದ ಒಪ್ಪಿಗೆಗೆ ಕಾದಿರುವ ಈ ಯೋಜನೆಯ ಶೀಘ್ರ ಅನುಷ್ಠಾನದ ಬಗ್ಗೆ, ನಗರದಲ್ಲಿರುವ ಕೇಂದ್ರ ಉಕ್ಕು ಮಂತ್ರಿ ಶ್ರೀ ಮೋಹನ ಕುಮಾರ ಮಂಗಲಂ ಅವರೊಡನೆ ಮುಖ್ಯಮಂತ್ರಿ ಶ್ರೀ ಅರಸು ಮತ್ತು ಕೈಗಾರಿಕಾ ಮಂತ್ರಿ ಶ್ರೀ ಕೃಷ್ಣ ಅವರು ಇಂದು ಮಾತುಕತೆ ನಡೆಸಿದರು.

'ಈ ಯೋಜನೆಗೆ ಮಂಜೂರಾತಿ ನೀಡುವುದರಲ್ಲಿ ಯಾವುದೇ ಅಡ್ಡಿ ಇಲ್ಲ' ಎಂದು ಶ್ರೀ ಮೋಹನ ಕುಮಾರ ಮಂಗಲಂ ಅವರು ಸಂಜೆ ಪ್ರೆಸ್ ಗೋಷ್ಠಿಯಲ್ಲಿ ವರದಿಗಾರರಿಗೆ ತಿಳಿಸಿದರು.

• ಅತಿಥಿ ನಿಯಂತ್ರಣ ಆಜ್ಞೆ ಜಾರಿಗೆ

ಬೆಂಗಳೂರು, ಸೆ. 23– ರಾಜ್ಯದಲ್ಲಿ ಅಭಾವ ಪರಿಸ್ಥಿತಿಯುದ್ದರಿಂದ ಸೆಪ್ಟೆಂಬರ್ 21ರಿಂದ ಅತಿಥಿ ನಿಯಂತ್ರಣ ಆದೇಶವನ್ನು ರಾಜ್ಯಾದ್ಯಂತ ಜಾರಿಗೆ ತರಲಾಗಿದೆ.

ಆಹಾರದ ಮಿತ ಉಪಯೋಗದ ಈ ಆದೇಶದ ಪ್ರಕಾರ, ಸಾಮಾನ್ಯ ಸಮಾರಂಭಗಳಲ್ಲಿ 25 ಮಂದಿ ಮದುವೆಯಂಥ ಸಮಾರಂಭಗಳಲ್ಲಿ ನೂರಕ್ಕಿಂತ ಹೆಚ್ಚು ಮಂದಿಗೆ ಭೋಜನ ವ್ಯವಸ್ಥೆಯಿರಬಾರದು.

ಈ ಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಸರ್ಕಾರವು ಅಧಿಕಾರಿಗಳಿಗೆ ಸೂಚಿಸಿದೆ.

ಈ ಬಗೆಯ ಪರಿಣತಿಯಲ್ಲಿ ಆಳವುಂಟು, ಅಗಲವಿಲ್ಲ ಎಂಬ ಟೀಕೆಗೆ ಯುಜಿಸಿ ಹೇಗೆ ಉತ್ತರ ಕಂಡುಕೊಳ್ಳಲಿದೆ?

ವಿಶ್ವವಿದ್ಯಾಲಯಗಳಲ್ಲಿ ಉದ್ಯಮದ ಪರಿಣತರು



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

2020ರಲ್ಲಿ ಅನುಮೋದನೆ ದೊರೆತು ಅನುಷ್ಠಾನಗೊಳ್ಳುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಲ್ಲಿ ವೃತ್ತಿಪರ, ಉದ್ಯೋಗಾರ್ಹ, ಉದ್ಯಮಶೀಲ ಕೌಶಲಗಳನ್ನು ಬೆಳೆಸಿ, ಪೋಷಿಸಿ, ಸಂವರ್ಧಿಸುವ ಸವಾಲುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಈ ಪ್ರಯತ್ನದ ಭಾಗವಾಗಿ, ಕೈಗಾರಿಕಾ ಕ್ಷೇತ್ರದ ಪರಿಣತರು, ಉದ್ಯಮದ ನಾಯಕರನ್ನು ವಿಶ್ವವಿದ್ಯಾಲಯಗಳಲ್ಲಿ ನೇಮಕ ಮಾಡಿಕೊಂಡು, ಅವರ ಅನುಭವ, ಪರಿಣತಿಗಳನ್ನು ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಗೆ ಬಳಸಿಕೊಳ್ಳುವ ಯೋಜನೆಗೆ ಸಂಬಂಧಿಸಿದಂತೆ ಕರಡು ಮಾರ್ಗದರ್ಶಿ ಸೂತ್ರಗಳನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಆಗಸ್ಟ್ 23ರಂದು ಪ್ರಕಟಿಸಿದೆ. ಆ ಕ್ಷೇತ್ರದಲ್ಲಿನ ವಿದ್ವಾಂಸರು ಹಾಗೂ ಆಸಕ್ತ ಸಾರ್ವಜನಿಕರ ಸಲಹೆ, ಸೂಚನೆಗಳನ್ನು ಆಹ್ವಾನಿಸಿದೆ.

ಈ ಮಾರ್ಗದರ್ಶಿ ಸೂತ್ರಗಳ ಅನ್ವಯ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಮಾಧ್ಯಮ, ವಾಣಿಜ್ಯ ವ್ಯವಹಾರ, ಉದ್ಯಮಶೀಲತೆ, ಸಮಾಜವಿಜ್ಞಾನ, ನಾಗರಿಕ ಸೇವೆ, ನ್ಯಾಯಾಂಗ, ಭಾರತೀಯ ಸೇನೆಯಂಥ ಕೇತ್ರಗಳಲ್ಲಿ ಕನಿಷ್ಠ 15 ವರ್ಷ ಉತ್ತಮ ಸೇವೆ ಸಲ್ಲಿಸಿ, ಗಣನೀಯ ಕೊಡುಗೆ ನೀಡಿರುವ ಪ್ರತಿಭಾವಂತರನ್ನು ಆಯ್ಕೆ ಮಾಡಿ, 'ಪ್ರೊಫೆಸರ್ ಆಫ್ ಪ್ರ್ಯಾಕ್ಟಿಸ್' ಎಂಬ ಹೊಸ ಪದನಾಮ ನೀಡಿ, ವಿಶ್ವವಿದ್ಯಾಲಯಗಳು ನೇಮಿಸಿಕೊಳ್ಳಬಹುದು. ಈ ನೂತನ ವರ್ಗದ ಪ್ರಾಧ್ಯಾಪಕರಿಗೆ ಔಪಚಾರಿಕ ಶೈಕ್ಷಣಿಕ ಅರ್ಹತೆ, ಪಿಎಚ್.ಡಿ, ಬೋಧನೆ ಮತ್ತು ಸಂಶೋಧನೆಯ ಅನುಭವಗಳು ಸ್ವಾಗತಾರ್ಹವಾದರೂ ಕಡ್ಡಾಯವಲ್ಲ. ಸಾಂಪ್ರದಾಯಿಕ ಪ್ರಾಧ್ಯಾಪಕರಂತೆ, ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಬೇಕೆಂಬ ಒತ್ತಡವೂ ಅವರ ಮೇಲಿರುವುದಿಲ್ಲ. ಆದರೆ ಅಂತಹ ಹುದ್ದೆಯ ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸುವ ಸಾಮರ್ಥ್ಯವಿರಬೇಕು. ಕೈಗಾರಿಕಾ ಕ್ಷೇತ್ರದ ನೈಜ ಸನ್ನಿವೇಶಗಳು, ಸಮಸ್ಯೆ, ಸವಾಲುಗಳನ್ನು ತರಗತಿಯೊಳಗೆ ತಂದು, ವಿಶ್ಲೇಷಿಸಿ ಅವುಗಳನ್ನು ನಿರ್ವಹಿಸುವ ರೀತಿ, ಚಿಂತನಾಕ್ರಮ, ವಿವೇಕಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ, ಪೋಷಿಸಬೇಕು. ಉದ್ಯಮಶೀಲತೆ, ನಾವೀನ್ಯಗಳನ್ನು ಬೆಳೆಸಲು ಅಗತ್ಯವಾದ ಪಠ್ಯವಸ್ತು, ಪಾಠ ಪ್ರವಚನಗಳನ್ನು ವಿನ್ಯಾಸಗೊಳಿಸಬೇಕು. ವಿಶ್ವವಿದ್ಯಾಲಯ ಮತ್ತು ಉದ್ಯಮಗಳ ನಡುವೆ ಸಂಪರ್ಕಸೇತುವಾಗಬೇಕು. ನೇಮಕಾತಿಯ ಅವಧಿ ಮೂರು ವರ್ಷಗಳಿಗೆ ಸೀಮಿತವಾಗಿದೆ. ವಿಶೇಷ ಸಂದರ್ಭಗಳಲ್ಲಿ ಇನ್ನೊಂದು ವರ್ಷ ವಿಸ್ತರಿಸಲು ಅವಕಾಶವುಂಟು. ವಿಶ್ವವಿದ್ಯಾಲಯಗಳ ವಿವಿಧ ವಿಭಾಗಗಳಿಗೆ ಮಂಜೂರಾಗಿರುವ ಒಟ್ಟು ಪ್ರಾಧ್ಯಾಪಕ ಹುದ್ದೆಗಳ ಶೇ 10ಕ್ಕೆ ಮೀರದಂತೆ ಪ್ರೊಫೆಸರ್ ಆಫ್ ಪ್ರ್ಯಾಕ್ಟಿಸ್ ಹುದ್ದೆಗಳಿರಬಹುದು. ಈ ಹುದ್ದೆಗಳಿಂದ, ಆಯಾ ವಿಭಾಗದಲ್ಲಿ ಈಗಾಗಲೇ ವಿಧ್ಯುಕ್ತವಾಗಿ ನೇಮಕಗೊಂಡಿರುವ ಪ್ರಾಧ್ಯಾಪಕರ ಸೇವಾ ಸ್ಥಿತಿಗತಿಗಳಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

ಇಂತಹ ಪರಿಣತರ ನೇಮಕಕ್ಕೆ ಉದ್ಯಮಗಳೇ ವಿಶ್ವವಿದ್ಯಾಲಯಗಳಿಗೆ ಧನಸಹಾಯ ನೀಡಬಹುದು ಅಥವಾ ವಿಶ್ವವಿದ್ಯಾಲಯ, ಉನ್ನತ ಶಿಕ್ಷಣ ಸಂಸ್ಥೆಗಳೇ ತಾವಾಗಿಯೇ ಮುಂದಾಗಿ ನೇಮಿಸಿಕೊಳ್ಳಬಹುದು. ಯಾವುದೇ ಹಣಕಾಸಿನ ನಿರೀಕ್ಷೆಯಿಲ್ಲದೆ, ಸೇವೆಯ ದೃಷ್ಟಿಯಿಂದ ಮುಂದೆ ಬರುವ ಪರಿಣತರನ್ನೂ ಪರಿಗಣಿಸಬಹುದು. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಈ ನೂತನ ಪದನಾಮದ ಪ್ರಾಧ್ಯಾಪಕರು ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಕಾಲೇಜುಗಳಲ್ಲಿ ಕೆಲಸ ಪ್ರಾರಂಭಿಸುವಂತೆ ಆಗಬೇಕೆಂಬುದು ಯುಜಿಸಿಯ ನಿರೀಕ್ಷೆ. ಈ ಯೋಜನೆ ಮತ್ತು ಮಾರ್ಗದರ್ಶಿ ಸೂತ್ರಗಳಿಗೆ ವಿಭಿನ್ನ ಪ್ರತಿಕ್ರಿಯೆಗಳು ಬಂದಿದ್ದು ಚರ್ಚೆಗಳು ನಡೆಯುತ್ತಿವೆ.

ಶಿಕ್ಷಣೇತರ ಕ್ಷೇತ್ರಗಳ ವೃತ್ತಿಜೀವನದಲ್ಲಿ ಗಳಿಸಿದ ಅನುಭವ, ಕೌಶಲ, ಪರಿಣತಿಗಳನ್ನು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ವರ್ಗಾಯಿಸಿ ಅವರನ್ನು ಉದ್ಯೋಗಸಿದ್ಧರನ್ನಾಗಿ ಮಾಡುವ ಪದ್ಧತಿಯು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಬಹು ಸಾಮಾನ್ಯ. ಅಂತಹ ಪರಿಣತರಿಗೆ 'ಪ್ರೊಫೆಸರ್ ಆಫ್ ಪ್ರ್ಯಾಕ್ಟಿಸ್', 'ಪ್ರ್ಯಾಕ್ಟಿಸ್ ಪ್ರೊಫೆಸರ್', 'ಕ್ಲಿನಿಕಲ್ ಪ್ರೊಫೆಸರ್' ಮುಂತಾದ ಪದನಾಮಗಳಿವೆ.

ಉದ್ಯಮದ ಪರಿಣತರನ್ನು ವಿಶ್ವವಿದ್ಯಾಲಯ, ಕಾಲೇಜುಗಳಲ್ಲಿ ಬೋಧನಾ ಉದ್ದೇಶಕ್ಕಾಗಿ ನೇಮಿಸಿಕೊಳ್ಳುವ ಪದ್ಧತಿ ನಮ್ಮ ದೇಶಕ್ಕೂ ಹೊಸದೇನಲ್ಲ. ಸುಮಾರು 25 ವರ್ಷಗಳಿಂದ ವಿದ್ಯಾಸಂಸ್ಥೆಗಳು ಉದ್ಯಮದ ಪರಿಣತರನ್ನು ನೇಮಿಸಿಕೊಂಡು, ಅವರ ಸೇವೆಯನ್ನು ಬಳಸಿಕೊಂಡು ಬಂದಿವೆ. ಅಂತಹ ಪದ್ಧತಿಯಲ್ಲಿ ಕ್ರಮಬದ್ಧವಾದ ಏಕರೂಪತೆಯನ್ನು ತಂದು, ಹೆಚ್ಚು ವ್ಯವಸ್ಥಿತಗೊಳಿಸಿ, ಬೋಧನೆಯ ಜೊತೆಗೆ ಮತ್ತಷ್ಟು ಹೊಸ ಜವಾಬ್ದಾರಿಗಳನ್ನು ಸೇರಿಸುವ ಉದ್ದೇಶದಿಂದ, 2015ರಲ್ಲಿ ಯುಜಿಸಿಯು ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿತು. 2015 ಮತ್ತು 2022ರ ಈಗಿನ ಯುಜಿಸಿ ಮಾರ್ಗದರ್ಶಿ ಸೂತ್ರಗಳನ್ನು ಹೋಲಿಸಿ ನೋಡಿದರೆ, ಉದ್ಯಮದ ಪರಿಣತರನ್ನು ವಿಶ್ವವಿದ್ಯಾಲಯಗಳಲ್ಲಿ ನೇಮಿಸಿಕೊಳ್ಳುವ ಉದ್ದೇಶ, ವಿಧಾನ, ಸೇವಾ ನಿಯಮಗಳು, ಅವರ ಕರ್ತವ್ಯ, ಜವಾಬ್ದಾರಿಗಳಲ್ಲಿ ಹೆಚ್ಚಿನ ವ್ಯತ್ಯಾಸಗಳು ಕಂಡುಬರುವುದಿಲ್ಲ.

2015ರಲ್ಲಿ ಯುಜಿಸಿ ಪ್ರಕಟಿಸಿದ ಮಾರ್ಗದರ್ಶಿ ಸೂತ್ರಗಳಿಗೆ ವಿಶ್ವವಿದ್ಯಾಲಯಗಳೂ ಸೇರಿದಂತೆ ಶಿಕ್ಷಣ ಕ್ಷೇತ್ರದಿಂದ ಯಾವ ವಿಶೇಷ ಪ್ರತಿಕ್ರಿಯೆಯೂ ಬರಲಿಲ್ಲ. ಆ ಪ್ರಕಟಣೆಯಲ್ಲಿ, ವಿಶ್ವವಿದ್ಯಾಲಯಗಳಿಗೆ ಬರುವ ಉದ್ಯಮದ ಪರಿಣತರಿಗೆ, 'ಅಡ್ಜಂಕ್ಟ್ ಫ್ಯಾಕಲ್ಟಿ' (ಆನುಷಂಗಿಕ ಬೋಧಕ ವರ್ಗ) ಎಂಬ ಪದನಾಮವನ್ನು



ನೀಡಲಾಗಿತ್ತು. ಆದರೆ ಈಗಿನ ಸೂತ್ರದಲ್ಲಿ, ಶೈಕ್ಷಣಿಕ ಅರ್ಹತೆಯಿಂದ ವಿನಾಯಿತಿ ಪಡೆದ, ಪಿಎಚ್.ಡಿ ಪದವಿಯಿಲ್ಲದ ಉದ್ಯಮದ ಪರಿಣತರಿಗೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಪಟ್ಟ ನೀಡುವ ಪ್ರಸ್ತಾಪವಿದ್ದು ಅದಕ್ಕೆ ತೀವ್ರ ವಿರೋಧ ಕಂಡುಬರುತ್ತಿದೆ. 'ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಹುದ್ದೆ ಆಳವಾದ ಜ್ಞಾನ, ಪ್ರಬುದ್ಧವಾದ ಚಿಂತನೆ, ವಿಸ್ತಾರವಾದ ಅನುಭವಗಳ ಪ್ರತೀಕ. ತಮ್ಮ ಅಧ್ಯಯನ ಕ್ಷೇತ್ರದ ಎಲ್ಲ ಪ್ರಚಲಿತ ಸಂಶೋಧನೆ, ಬೆಳವಣಿಗೆಗಳ ವಿಸ್ತಾರವಾದ, ಸಮಗ್ರ ಪರಿಚಯವಿರುವ ಪ್ರಾಧ್ಯಾಪಕರಿಂದ ವಿದ್ಯಾರ್ಥಿಗಳಿಗೆ ದೊರೆಯುವ ಜ್ಞಾನ, ಮಾರ್ಗದರ್ಶನ ಬಹಳ ಮೌಲಿಕವಾದುದು. ಅಂಥವರು ರೂಪಿಸುವ ಪಠ್ಯವಸ್ತು, ಪಾಠ, ಪ್ರವಚನಗಳು, ಆ ಕ್ಷೇತ್ರದ ಎಲ್ಲ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ವಿಶ್ಲೇಷಣಾತ್ಮಕವಾಗಿ ಬಿಡಿಸಲು ಅಗತ್ಯವಾದ, ಭದ್ರವಾದ ಬುನಾದಿಯನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತವೆ. ಉದ್ಯಮಗಳ ಪರಿಣತರ ಪರಿಸ್ಥಿತಿಯೇ ಬೇರೆ. ಅವರ ಪರಿಣತಿಯ ಬಗ್ಗೆ ಎರಡು ಮಾತಿಲ್ಲ. ಆದರೆ ಆ ಪರಿಣತಿ ಒಂದು ಸೂಕ್ಷ್ಮವಾದ, ಸಣ್ಣ ಕ್ಷೇತ್ರಕ್ಕೆ ಮಾತ್ರ ಸೀಮಿತ. ಆ ಪರಿಣತಿಯಲ್ಲಿ ಆಳವುಂಟು, ಆದರೆ ಅಗಲವಿಲ್ಲ. ಅಂಥವರಿಂದ ಸೀಮಿತ ಕ್ಷೇತ್ರದ, ನಿರ್ದಿಷ್ಟ ಸಮಸ್ಯೆಯನ್ನು ಬಗೆಹರಿಸುವ ಕೌಶಲ ದೊರೆಯಬಹುದೇ ಹೊರತಾಗಿ ವಿಶಾಲ ವ್ಯಾಪ್ತಿಯ ಸಮಗ್ರ ಜ್ಞಾನ ಲಭಿಸುವುದಿಲ್ಲ. ಹೀಗಾಗಿ ಅಂತಹ ಪರಿಣತರನ್ನು 'ಪ್ರೊಫೆಸರ್ ಆಫ್ ಪ್ರ್ಯಾಕ್ಟಿಸ್' ಎಂದು ಗುರುತಿಸುವುದು ಗೊಂದಲಕ್ಕೆ ಕಾರಣವಾಗುತ್ತದೆ' ಎನ್ನುವುದು ಶೈಕ್ಷಣಿಕ ವಲಯದಿಂದ ಬಂದಿರುವ ಟೀಕೆ. ಈ ಕಾರಣಕ್ಕಾಗಿಯೇ ಈ ಪ್ರಸ್ತಾವವನ್ನು ವಿರೋಧಿಸುವುದಾಗಿ ದೆಹಲಿಯ ಶಿಕ್ಷಕರ ಸಂಘಟನೆ ಹೇಳಿದೆ. ಆದರೆ ಗುಣಮಟ್ಟ ಕುಸಿದು, ಶೈಕ್ಷಣಿಕ ವಾತಾವರಣ ಹದಗೆಟ್ಟು ಹೋಗಿರುವ ನಮ್ಮ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸ್ವತಃ ನಿರಂತರವಾಗಿ ಕಲಿಯುತ್ತ, ವಿದ್ಯಾರ್ಥಿಗಳಿಗೆ ಪ್ರಾಮಾಣಿಕವಾಗಿ ಕಲಿಸುವ ಆಚಾರ್ಯರೂಪಿ ಪ್ರಾಧ್ಯಾಪಕರು ಬಹು ಅಪರೂಪವೆಂಬುದೂ ಸತ್ಯ.

2015ರಲ್ಲಿ ಯುಜಿಸಿ ಪ್ರಕಟಿಸಿದ ಮಾರ್ಗದರ್ಶಿ ಸೂತ್ರಗಳಲ್ಲಿದ್ದ ಕೊರತೆಗಳೇನು, ಯಾವ ಕಾರಣಗಳಿಂದ ನಿರೀಕ್ಷಿತ ಫಲಿತಾಂಶ ದೊರೆಯಲಿಲ್ಲ, 2022ರ ಮಾರ್ಗದರ್ಶಿ ಸೂತ್ರಗಳಲ್ಲಿ ಆ ಸಮಸ್ಯೆಗಳನ್ನು ಹೇಗೆ ಪರಿಹರಿಸಲಾಗಿದೆ ಮುಂತಾದ ಪ್ರಶ್ನೆಗಳಿಗೆ ಯಾವ ಸ್ಪಷ್ಟ ಉತ್ತರವೂ ದೊರೆಯುವುದಿಲ್ಲವೆಂಬ ಅಭಿಪ್ರಾಯ ವ್ಯಾಪಕವಾಗಿ ವ್ಯಕ್ತವಾಗಿದೆ. ಈ ಮಧ್ಯೆ ಅನೇಕ ಐಐಟಿ, ಐಐಎಂಗಳು ಇಂತಹ ಗೊಂದಲಗಳಿಲ್ಲದೇ ಉದ್ಯಮದ ಉತ್ಕೃಷ್ಟ ಪರಿಣತರ ಸೇವೆಯನ್ನು ಬಳಸಿಕೊಳ್ಳುತ್ತಿವೆ. ಅಧ್ಯಯನದ ಶಿಸ್ತಿಗೆ ಭದ್ರ ಬುನಾದಿ, ವಿಶಾಲ ದೃಷ್ಟಿಯನ್ನೊದಗಿಸುವ ಕೆಲಸವನ್ನು ಪ್ರಾಧ್ಯಾಪಕರು ಮಾಡಿದರೆ, ಉದ್ಯಮ ರಂಗದಲ್ಲಿನ ಸಂಬಂಧಿತ ಕೆಲಸಗಳನ್ನು ಸಮರ್ಪಕವಾಗಿ, ಅಚ್ಚುಕಟ್ಟಾಗಿ, ಮಾಡಿಮುಗಿಸಲು ಬೇಕಾದ ಕೌಶಲ, ನೈಪುಣ್ಯಗಳನ್ನು ಉದ್ಯಮದ ಪರಿಣತರು ರೂಪಿಸುತ್ತಾರೆ. ಅನೇಕ ಪ್ರತಿಷ್ಠಿತ ಕಾಲೇಜುಗಳು ಸದ್ದುಗದ್ದಲಗಳಿಲ್ಲದೇ ಐಐಟಿ, ಐಐಎಂಗಳ ಮಾದರಿಯನ್ನು ಅನುಸರಿಸುತ್ತಿರುವುದೂ ಉಂಟು. 2022ರ ಯುಜಿಸಿ ಮಾರ್ಗದರ್ಶಿ ಸೂತ್ರಗಳಿಗೆ, ಟೀಕೆಗಳ ಜೊತೆಗೆ ಅನೇಕ ಸಲಹೆ, ಸೂಚನೆಗಳು ಬಂದಿರುವ ವರದಿಗಳಿವೆ. ಇವುಗಳ ಹಿನ್ನೆಲೆಯಲ್ಲಿ ಯುಜಿಸಿ, ಈ ಯೋಜನೆಯಲ್ಲಿ ಎಂತಹ ಬದಲಾವಣೆಗಳನ್ನು ತರಲಿದೆ ಎಂಬುದನ್ನು ಕಾದು ನೋಡಬೇಕು.

ಚುರುಮುರಿ



'ವೈರಲ್' ಫೀವರ್ !

• ಗುರು ಪಿ.ಎಸ್.

'**ನೋಡಿ** ನೋಡಿ ನೋಡಿ ಸರ್, ಹೆಂಗ್ ವೈರಲ್ ಆಗ್ತಿದೆ ನಾನು ಕ್ರಿಯೇಟ್ ಮಾಡಿರೋ ಪೋಸ್ಟು, ಮಿಲಿಯನ್ ವ್ಯೂಸ್, ಥೌಸಂಡ್ ಶೇರ್ಸ್' ಖುಷಿಯಿಂದ ಹೇಳ್ದ ಮಿನಿಸ್ಟರ್ ವಿಜಿ ಅವರ ಪಿಎ ಮುದ್ದಣ್ಣ.

'ಆ ಕಮೆಂಟ್‌ಗಳನ್ನ ಓದ್ತಾ ಇದ್ರೆ ಎಷ್ಟ್ ಮಜಾ ಬರುತ್ತೆ. ಎದುರು ಪಾರ್ಟಿಯವರು ಕೊತ್ತಂಬರಿ ಗಿಡಕ್ಕೆ ನೇಣು ಹಾಕಿಕೊಳ್ಳೋದೊಂದು ಬಾಕಿ...' ಬೆರಳೆಣಿಕೆಯಷ್ಟು ಕೂದಲುಗಳಿದ್ದ ತಲೆಯನ್ನು ನೇವರಿಸಿಕೊಳ್ಳುತ್ತಾ ಖುಷಿಯಿಂದ ಹೇಳಿದ ವಿಜಿ.

'ಯಾವುದೋ ಫೋಟೊಗೆ ಇನ್ಯಾವುದೋ ಫೋಟೊ ಜೋಡಿಸಿ, ಯಾವುದೋ ಸಂದರ್ಭದಲ್ಲಿ ತೆಗೆದ ಚಿತ್ರಕ್ಕೆ ಇನ್ನೇನೋ ಕ್ಯಾಪ್ಷನ್ ಬರೆದು, ಬ್ಯಾಕ್‌ಗ್ರೌಂಡ್‌ನಲ್ಲಿ ಭಯಾನಕ ಮ್ಯೂಸಿಕ್ ಹಾಕಿ ಪೋಸ್ಟ್ ಕ್ರಿಯೇಟ್ ಮಾಡಿದ್ರೆ ಮುಗೀತು ಸರ್, ಟ್ರೋಲು ಸೂಪರ‍್ರು...' ತನ್ನಲ್ಲಿನ ಕೌಶಲಗಳ ಬಗ್ಗೆ ಕೊಚ್ಚಿಕೊಳ್ಳತೊಡಗಿದ ಮುದ್ದಣ್ಣ.

'ಎದುರು ಪಾರ್ಟಿಯವರಿಗೆ ಒಂದೊಂದು ನಿಕ್ ನೇಮ್ ಕೂಡ ಇಡಬೇಕು ಮುದ್ದಣ್ಣ. ಬೆಪ್ಪು, ಕೆಪ್ಪು, ಮಿಸ್ಟರ್ ತಪ್ಪು... ಹೀಗೆ ಒಂದೊಂದು ಹೆಸರಿಟ್ಟುಬಿಟ್ಟರೆ ಫುಲ್ ವೈರಲ್ ಆಗಿಬಿಡ್ತಾವೆ ಪೋಸ್ಟ್‌ಗಳು' ಖುಷಿಯಿಂದ ಸಲಹೆಗಳ ಸುರಿಮಳೆ ಸುರಿಸತೊಡಗಿದ ವಿಜಿ.

ಮರುದಿನ ಓಡಿಬಂದ ಮುದ್ದಣ್ಣ, 'ಅಯ್ಯಯ್ಯಯ್ಯೋ, ಇಲ್ನೋಡಿ ಸರ್, ನಮ್ಮ ಪ್ಲ್ಯಾನ್ ನಮಗೇ ಉಲ್ಟಾ ಆಗಿದೆ... ನಿಮ್ಮ ಬಗ್ಗನೇ ಯಾರೋ ಸಖತ್ ಆಗಿರೋ ಪೋಸ್ಟ್ ಕ್ರಿಯೇಟ್ ಮಾಡಿ, ವೈರಲ್ ಮಾಡಿದಾರೆ...'

ವಿಜಿಯ ಕಿವಿ, ಮೂಗು, ಬಾಯಲ್ಲೆಲ್ಲ ಹೊಗೆ ಬಂದಂತಾಯಿತು. 'ಇಡಿಯಟ್, ನೀನೇನು ಕತ್ತೆ ಕಾಯ್ತಿದ್ಯಾ, ಅವರು ಅಷ್ಟೆಲ್ಲ ಮಾಡೋವರೆಗೂ ಸುಮ್ಮನಿದ್ದು, ಈಗ ಸಖತ್ ಆಗಿದೆ ಅಂತ ನನ್ನ ಹತ್ತಿರವೇ ಹೊಗಳ್ತಿದೀಯಾ, ಅವರನ್ನೆಲ್ಲ ಒದ್ದು ಒಳಗೆ ಹಾಕ್ಸು...' ಅರಚಿದ ವಿಜಿ.

'ಇಷ್ಟ್ ದಿನ ನಾವು ಮಾಡ್ತಿದ್ದುದನ್ನೇ ಅವರೂ ಮಾಡಿದ್ದಾರೆ ಸರ್... ಆದರೆ, ಒಂದೇ ವ್ಯತ್ಯಾಸವಿದೆ'.

'ಏನು?'

'ಅವರ ಪೋಸ್ಟ್‌ನಲ್ಲಿ ಸ್ವಲ್ಪ ಸತ್ಯ ಇದೆ...' ಹೊರಗೋಡಿದ ಮುದ್ದಣ್ಣ!

ಸಂಗತ

ಶೈಕ್ಷಣಿಕ ಮಾರ್ಗದರ್ಶನ: ಇಂದಿನ ಅಗತ್ಯ

ವಿದ್ಯಾರ್ಥಿ ಹಂತದಿಂದ ವೃತ್ತಿ ಬದುಕಿಗೆ ಕಾಲಿರಿಸುವವರೆಗೂ ವಿದ್ಯಾರ್ಥಿಗಳಲ್ಲಿ ಮೂಡುವ ಪ್ರಶ್ನೆಗಳು, ಗೊಂದಲಗಳನ್ನು ಬಗೆಹರಿಸುವ ದಿಸೆಯಲ್ಲಿ ಸರ್ಕಾರವೇಕೆ ಕಾರ್ಯೋನ್ಮುಖವಾಗಬಾರದು?

• ಎಚ್.ಕೆ.ಶರತ್

'ಮುಂದೆ ಏನು ಓದಿದ್ರೆ ಒಳ್ಳೆಯದು?' ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಮುಗಿಸಿದ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಮೂಡುವ ಪ್ರಶ್ನೆ ಇದು. ಇದಕ್ಕೆ ಉತ್ತರ ಕಂಡುಕೊಳ್ಳಲು ಅವರಿಗೆ ನೆರವಾಗುವವರು ಬಹುತೇಕ ಸಂದರ್ಭಗಳಲ್ಲಿ ಪೋಷಕರು, ಪರಿಚಯಸ್ಥರು ಹಾಗೂ ಶಿಕ್ಷಕರು. ಕೆಲವೊಮ್ಮೆ ಮಾತ್ರ ಮಾಧ್ಯಮ, ಅಂತರ್ಜಾಲ ಅಥವಾ ಖಾಸಗಿ ಕಾರ್ಯಕ್ರಮಗಳ ಮೂಲಕ ದೊರಕುವ ವೃತ್ತಿಪರ ಮಾರ್ಗದರ್ಶನ ನೆರವಿಗೆ ಬರುತ್ತದೆ.

ಇಲ್ಲಿ ವಿದ್ಯಾರ್ಥಿಗಳ ಸಾಮಾಜಿಕ ಹಿನ್ನೆಲೆ ಬಹುಮುಖ್ಯ ಪಾತ್ರ ವಹಿಸುತ್ತದೆ. ಸಾಮಾಜಿಕವಾಗಿ ಮುಂದುವರಿದ ಕೌಟುಂಬಿಕ ಹಿನ್ನೆಲೆ ಹೊಂದಿರುವ ವಿದ್ಯಾರ್ಥಿಗಳಿಗೆ ಸಹಜವಾಗಿಯೇ ಸೂಕ್ತ ಮಾರ್ಗದರ್ಶನ ದೊರೆಯುವ ಸಾಧ್ಯತೆ ಹೆಚ್ಚು. ಶಿಕ್ಷಣಕ್ಕೆ ಒತ್ತು ಸಿಗದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳ ಎದುರು ತೆರೆದುಕೊಳ್ಳುವ ಆಯ್ಕೆಗಳು ಸೀಮಿತ ಮಾತ್ರವಲ್ಲ, ಅವರಿಗೆ ಏನನ್ನು ಓದಬೇಕು ಎಂದು ಸೂಕ್ತ ರೀತಿಯಲ್ಲಿ ಮಾರ್ಗದರ್ಶನ ನೀಡುವವರು ಸಿಗುವುದೂ ಅಪರೂಪವೇ. ಇನ್ನು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ, ಸೀಮಿತ ಹಣದಲ್ಲಿ ತಾವು ಓದಬಯಸಿರುವ ಪದವಿ ಕೋರ್ಸುಗಳನ್ನು ಪೂರೈಸಲು ಸಾಧ್ಯವೇ ಎಂಬ ಪ್ರಶ್ನೆ ಕಾಡುತ್ತದೆ. ಬಹುತೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ದೊರಕುವ ಸಲಹೆಗಳು ಪರಿಪೂರ್ಣವಾಗೇನೂ ಇರುವುದಿಲ್ಲ. ಸಲಹೆ ನೀಡುವವರ ತಿಳಿವಳಿಕೆ ಮತ್ತು ಹಿತಾಸಕ್ತಿಗೆ ಅನುಗುಣವಾಗಿ ಮಾರ್ಗದರ್ಶನ ದೊರಕುತ್ತದೆ.

ವಿದ್ಯಾರ್ಥಿ ಹಂತದಿಂದ ವೃತ್ತಿ ಬದುಕಿಗೆ ಕಾಲಿರಿಸುವವರೆಗೂ ವಿದ್ಯಾರ್ಥಿಗಳಲ್ಲಿ ಮೂಡುವ ನಾನಾ ರೀತಿಯ ಪ್ರಶ್ನೆಗಳು ಹಾಗೂ ಗೊಂದಲಗಳನ್ನು ಬಗೆಹರಿಸುವ ದಿಸೆಯಲ್ಲಿ ಸರ್ಕಾರವೇಕೆ ಕಾರ್ಯೋನ್ಮುಖವಾಗಬಾರದು? ವಿದ್ಯಾರ್ಥಿಗಳು ಹಾಗೂ ಪೋಷಕರು ತಮ್ಮ ಗೊಂದಲಗಳನ್ನು ಬಗೆಹರಿಸಿಕೊಳ್ಳಲು ಸೂಕ್ತ ಮಾರ್ಗದರ್ಶನ ಪಡೆಯಲು ಸಾಧ್ಯವಾಗುವಂತಹ ಪರಿಣಾಮಕಾರಿ ಹಾಗೂ ಸಮಗ್ರ ಬೆಂಬಲ ವ್ಯವಸ್ಥೆಯೊಂದು ಅಸ್ತಿತ್ವಕ್ಕೆ ಬಂದರೆ, ಎಷ್ಟೋ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ದೊರಕಬಹುದು. ಈ ವ್ಯವಸ್ಥೆಯ ಆಧಾರಸ್ತಂಭವಾಗಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಅಗತ್ಯ ತರಬೇತಿ ಹಾಗೂ ಮಾರ್ಗದರ್ಶನ ನೀಡಿ, ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರೆ ಅಸಂಖ್ಯ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ದಿಸೆಯಲ್ಲಿ ಇದು ಮಹತ್ವದ ಪಾತ್ರ ನಿರ್ವಹಿಸಲಿದೆ.

ನೂತನ ಶಿಕ್ಷಣ ನೀತಿ ಜಾರಿಯ ಭಾಗವಾಗಿ ಪದವಿ ಹಂತದ ಶಿಕ್ಷಣದಲ್ಲಿ ತರಲಾಗುತ್ತಿರುವ ಬದಲಾವಣೆಗಳ ಕುರಿತು ಕೂಡ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಹೆಚ್ಚಿನ ಮಾಹಿತಿ ಒದಗಿಸುವ ಅನಿವಾರ್ಯ ಸೃಷ್ಟಿಯಾಗಿದೆ. ಮೇಜರ್ ಡಿಗ್ರಿ, ಮೈನರ್ ಡಿಗ್ರಿ, ಆನರ್ಸ್ ಡಿಗ್ರಿ ಅಂತೆಲ್ಲ ವಿವಿಧ ರೀತಿಯ ಪದವಿಗಳನ್ನು ನೀಡಲು ಮುಂದಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ಇವುಗಳ ನಡುವಿನ ವ್ಯತ್ಯಾಸ ಮತ್ತು ಇವಕ್ಕಿರುವ ಮಹತ್ವದ ಕುರಿತು ಅರಿವು ಮೂಡಿಸುವ ಅಗತ್ಯ ಇದೆ. ಹೊಸ ಶಿಕ್ಷಣ ನೀತಿ ವಿದ್ಯಾರ್ಥಿ ಹಾಗೂ ಪೋಷಕರ ವಲಯದಲ್ಲಿ ಹುಟ್ಟುಹಾಕಬಹುದಾದ ಬಹಳಷ್ಟು ಪ್ರಶ್ನೆಗಳಿವೆ. ಇವುಗಳಿಗೆ ಉತ್ತರಿಸುವ ಹೊಣೆಗಾರಿಕೆಯನ್ನು, ನೂತನ ಶಿಕ್ಷಣ ನೀತಿ ಜಾರಿಗೆ ಇನ್ನಿಲ್ಲದ ಉತ್ಸಾಹ ತೋರುತ್ತಿರುವ ರಾಜ್ಯ ಸರ್ಕಾರವೂ ಹೊರಬೇಕಲ್ಲವೇ?

ಇತ್ತೀಚಿನ ವರ್ಷಗಳಲ್ಲಿ ಹೊಸ ವಿಷಯಗಳಿಗೆ ಸಂಬಂಧಿಸಿದ ಬಹಳಷ್ಟು ಪದವಿ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ವಿದ್ಯಾರ್ಥಿಗಳ ಎದುರು ಅಸಂಖ್ಯ ಆಯ್ಕೆಗಳು ತೆರೆದುಕೊಳ್ಳುತ್ತಿವೆ. ಹೊಸ ಪದವಿ ಕೋರ್ಸುಗಳಿಗೆ ದಾಖಲಾದರೆ ಮುಂದೆ ಸಮಸ್ಯೆ ಎದುರಾಗುವುದಿಲ್ಲವೇ ಎಂಬ ಪ್ರಶ್ನೆಯೂ ಹಲವರನ್ನು ಕಾಡುವುದಿದೆ. ಖಾಸಗಿ ವಿಶ್ವವಿದ್ಯಾಲಯಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ತಲೆ ಎತ್ತುತ್ತಿರುವ ಮತ್ತು ತರಹೇವಾರಿ ಪದವಿ ಕೋರ್ಸುಗಳನ್ನು ಪರಿಚಯಿಸುತ್ತಿರುವ ಈ ಹೊತ್ತಿನಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಯಾವುದೇ ರೀತಿಯ ಸ್ವಹಿತಾಸಕ್ತಿ ಇಲ್ಲದೆ ವಸ್ತುನಿಷ್ಠವಾಗಿ ಮಾರ್ಗದರ್ಶನ ನೀಡುವ ಸದೃಢ ಬೆಂಬಲ ವ್ಯವಸ್ಥೆಯೊಂದರ ಅಗತ್ಯವಿದೆ. ಮತ್ತದನ್ನು ಎಲ್ಲರಿಗೂ ಉಚಿತವಾಗಿ ಮತ್ತು ಮುಕ್ತವಾಗಿ ಲಭ್ಯವಾಗಿಸುವ ಅನಿವಾರ್ಯವೂ ಇದೆ.



ಶಿಕ್ಷಣ ಹಾಗೂ ವೃತ್ತಿ ಮಾರ್ಗದರ್ಶನ ನೀಡುವ ವ್ಯವಸ್ಥೆಯೊಂದನ್ನು ರೂಪಿಸಲು ಸರ್ಕಾರಕ್ಕೆ ಹೆಚ್ಚಿನ ಸಂಪನ್ಮೂಲವೇನೂ ಬೇಕಿಲ್ಲ. ಬೇಕಿರುವುದು ಇಚ್ಛಾಶಕ್ತಿ ಮತ್ತು ಬದ್ಧತೆ. ಬಹುತೇಕ ಸರ್ಕಾರಿ ಯೋಜನೆಗಳ ಜಾರಿ ವೇಳೆ ಪರಿಗಣನೆಗೆ ಬರುವ, 'ಇದರಿಂದ ನಮಗೇನು ಲಾಭ' ಅಥವಾ 'ಇದರಲ್ಲಿ ನಮಗೆಷ್ಟು ಪರ್ಸೆಂಟೇಜು' ಎಂಬ ಧೋರಣೆ ಶಿಕ್ಷಣ ಹಾಗೂ ವೃತ್ತಿ ಮಾರ್ಗದರ್ಶನ ವ್ಯವಸ್ಥೆಯನ್ನು ರೂಪುಗೊಳಿಸುವಾಗಲೂ ನುಸುಳಿದರೆ, ಇದು ಕೂಡ ಮತ್ತೊಂದು ಜಡ, ಅಸಮರ್ಥ, ಕೆಲಸಕ್ಕೆ ಬಾರದ ಯೋಜನೆಯಾಗಿ ಹೊರಹೊಮ್ಮುವ ಸಾಧ್ಯತೆಯೂ ಇದೆ.

ವಿದ್ಯಾರ್ಥಿಗಳ ಕುರಿತು ನಿಜವಾದ ಕಾಳಜಿ ಹೊಂದಿರುವ ವೃತ್ತಿಪರರ ತಂಡವನ್ನು ಇದರ ನಿರ್ವಹಣೆಗೆ ಬಿಟ್ಟರೆ ಇದರಿಂದಾಗಿ ಬಹಳಷ್ಟು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ಸೂಕ್ತ ಮಾಹಿತಿ ಮತ್ತು ಮಾರ್ಗದರ್ಶನ ದೊರಕದ ಕಾರಣಕ್ಕೆ ಆಸಕ್ತಿ ಮತ್ತು ಸಾಮರ್ಥ್ಯವಿದ್ದೂ ಸಾಮಾಜಿಕ ಚಲನೆ ದಕ್ಕಿಸಿಕೊಳ್ಳದೇ ಹೋಗುವ ಎಷ್ಟೋ ಯುವಮನಸ್ಸುಗಳನ್ನು ಪೊರೆದ ಹಿರಿಮೆಯೂ ಸರ್ಕಾರಕ್ಕೆ ದಕ್ಕಲಿದೆ.

ವಾಚಕರ ವಾಣಿ

ಇನ್ನಾದರೂ ಬುದ್ಧಿ ಬರಲಿ

ವಾಮಮಾರ್ಗದಲ್ಲಿ ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಂಡು ಸಮಾಜದ ಕಣ್ಣಿಗೆ ಮಣ್ಣೆರಚುವ ಕೆಲಸ ಬಹಳ ಹಿಂದಿನಿಂದ ನಡೆದು ಬಂದಿರುವುದಕ್ಕೆ ನಿದರ್ಶನ 2014- 2015ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರ. ಇಂತಹವರಿಂದ ಅನೇಕ ಪ್ರತಿಭಾವಂತರು ಮೂಲೆಗುಂಪಾಗುವಂತಾಗಿದೆ. ಇನ್ನಾದರೂ ಪೋಷಕರಿಗೆ, ಉದ್ಯೋಗ ಆಕಾಂಕ್ಷಿಗಳಿಗೆ ಬುದ್ಧಿ ಬರಬೇಕು. ಅಡ್ಡದಾರಿ ತುಳಿದು ಉದ್ಯೋಗ ಗಿಟ್ಟಿಸಿಕೊಂಡರೆ ಬೀದಿಪಾಲಾಗುವ ಪರಿಸ್ಥಿತಿ ಉಂಟಾಗಬಹುದೆಂಬ ಭಯ ಬಂದು, ಲಂಚ ಕೊಡುವ ಗೋಜಿಗೆ ಹೋಗಬಾರದು. ಅರ್ಹತೆಯುಳ್ಳವರು ಉದ್ಯೋಗಕ್ಕೆ ಸೇರಿದರೆ ಸಮಾಜಕ್ಕೆ ಒಳಿತಲ್ಲವೇ?

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

ಅಯ್ಯೋ... ಪಾಯಿ!

ಕುಸಿದಿದೆಯಂತೆ ಬೆಲೆ
ಡಾಲರ್ ಎದುರು ರೂಪಾಯಿ
ನನ್ನದೂ ಅದೇ ಪರಿಸ್ಥಿತಿ
ಮನೆ ಸಾಮಾನುಗಳ ಚೀಟಿ
ಬರೆದು ಕೈಗಿಟ್ಟ ನನ್ನವಳ ಎದುರು
ನಾನೂ ಒಬ್ಬ ಬಡಪಾಯಿ!

ಮ.ಗು.ಬಸವಣ್ಣ, ಸುತ್ತೂರು, ಮೈಸೂರು

ನಿಯಂತ್ರಣಕ್ಕೆ ಹಲವು ಮಾರ್ಗ

ಆನೆಗಳ ಭ್ರೂಣಹತ್ಯೆ ಮಾಡುವ ಮೂಲಕ ಅವುಗಳ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂಬ ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರ ಆಗ್ರಹ (ಪ್ರ.ವಾ., ಸೆ. 23) ಅಮಾನವೀಯವಾದುದು. ಆನೆಗಳನ್ನು ನಿಯಂತ್ರಿಸಲು ಹಲವು ಮಾರ್ಗಗಳಿವೆ. ಅವುಗಳನ್ನು ಬಿಟ್ಟು ಭ್ರೂಣಹತ್ಯೆಗೆ ಕೈಹಾಕುವುದು ಅವಿವೇಕದ ನಡೆ. ಸರಿಯಾದ ಮಾರ್ಗದಿಂದ ಪ್ರಾಣಿಗಳನ್ನು ನಿಯಂತ್ರಿಸಿ ಮನುಷ್ಯ ರಕ್ಷಣೆ ಪಡೆಯಬೇಕೇ ವಿನಾ ಅವುಗಳನ್ನು ಸಾಯಿಸಿ ಅಲ್ಲ. ಸೃಷ್ಟಿಯಲ್ಲಿ ಮನುಷ್ಯನಂತೆ ಇತರ ಜೀವಿಗಳಿಗೂ ಜೀವಿಸುವ ಹಕ್ಕಿದೆ. ಜೀವಿ ವ್ಯವಸ್ಥೆಯಲ್ಲೇ ಹೆಚ್ಚಿನ ವೈಚಾರಿಕ ಸಾಮರ್ಥ್ಯವನ್ನು ಹೊಂದಿರುವ ಏಕೈಕ ಜೀವಿಯಾದ ಮನುಷ್ಯ, ಮಾನವೀಯತೆಯ ನೆಲೆಗಟ್ಟಿನಲ್ಲಿ ಚಿಂತಿಸಬೇಕು. ಇತರ ಜೀವಿಗಳ ಜೀವಕ್ಕೆ ಧಕ್ಕೆಯಾಗದಂತೆ ಅವುಗಳನ್ನು ನಿಯಂತ್ರಿಸುವ ಕ್ರಮವನ್ನು ಅನುಸರಿಸಬೇಕು.

ಸೋಮಲಿಂಗಪ್ಪ, ಬೆಣ್ಣಿ ಗುಳದಳ್ಳಿ, ಕೊಪ್ಪಳ

ಪ್ರಯಾಣದರ ಜೇಬು ಸುಡುತ್ತಿರುವುದೇಕೆ?

ಕೆಲವೇ ತಿಂಗಳುಗಳ ಹಿಂದೆ ಉಬರ್, ಓಲಾ ಕಂಪನಿಯ ಟ್ಯಾಕ್ಸಿಗಳ ಮುಖಾಂತರ ಪ್ರಯಾಣ ಮಾಡಿದರೆ ದರ ದುಬಾರಿ ಅನ್ನಿಸುತ್ತಿರಲಿಲ್ಲ. ಇತ್ತೀಚೆಗೆ ಅವುಗಳಲ್ಲಿನ ಪ್ರಯಾಣ ದರ ವಿಪರೀತ ಎಂಬಂತೆ ಹೆಚ್ಚಳವಾಗಿದೆ. ಕೇವಲ ₹ 30ರಲ್ಲಿ ಮುಗಿಯುತ್ತಿದ್ದುದು ಈಗ ₹ 80– 100 ಆಗಿದೆ. ಶೇಕಡಾವಾರು ಲೆಕ್ಕ ಹಾಕಿದರೆ ಸುಮಾರು ಶೇ 250ರಷ್ಟು ಹೆಚ್ಚಳವಾಗಿದೆ. ಹಾಗೆ ನೋಡಿದರೆ ದರ ಹೆಚ್ಚಳಕ್ಕೆ ಕಾರಣಗಳೇ ಇಲ್ಲ. ಇಂಧನ ದರ ಕೂಡಾ ಸ್ಥಿರವಾಗಿದೆ. ಆದರೂ ಪ್ರಯಾಣವು ಜೇಬು ಸುಡುತ್ತಿದೆ. ಒಂದೂವರೆ ಕಿ.ಮೀ. ದೂರದ ಶಾಲೆಗೆ ಮಗುವನ್ನು ಬಿಡಲು ಬುಕ್ ಮಾಡಹೋದರೆ ನೂರೂ ರೂಪಾಯಿಗೂ ಹೆಚ್ಚು ದರ ತೋರಿಸಿತ್ತು!

ದರದ ವಿಚಾರದಲ್ಲಿ ಈ ಕಂಪನಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣ ಇಲ್ಲವೇ? ಟ್ಯಾಕ್ಸಿಯಲ್ಲೇ ಓಡಾಡಬೇಕಾದ ಅನಿವಾರ್ಯ ಇರುವವರು ತಮ್ಮ ದುಡಿಮೆಯ ಹಣವನ್ನು ಸಾರಿಗೆಗೇ ಕೊಟ್ಟು ಹೈರಾಣಾಗಬೇಕಾಗುತ್ತದೆ. ಇನ್ನು ಖಾಲಿ ಹೋಗುತ್ತಿರುವ ಆಟೊವನ್ನು ಕರೆದರೆ ಅವರು ಮೀಟರ್ ಹಾಕದೆ ಇಂತಿಷ್ಟು ಕೊಡಿ ಎಂದು ಎರಡು– ಮೂರು ಪಟ್ಟು ಹೆಚ್ಚಿಗೆ ಕೇಳುತ್ತಾರೆ. ಪ್ರಯಾಣಿಕರಿಗೆ ನೆಮ್ಮದಿ ದೊರಕಿಸಿಕೊಡುವ ದಿಸೆಯಲ್ಲಿ ಸರ್ಕಾರ ಕ್ರಮ ಜರುಗಿಸಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಾಗಿಲು ತೆರೆದಿದೆ... ಕೆಲಸ ಖಾಲಿ ಇಲ್ಲ!

ರಾಜ್ಯ ಸರ್ಕಾರ ಅಥವಾ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಎಸ್ಎಸ್ಎಲ್‌ಸಿವರೆಗೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡಿ ಉತ್ತೀರ್ಣರಾಗಿರುವುದನ್ನು ಕಡ್ಡಾಯಗೊಳಿಸುವ ಸಂಬಂಧ ರಾಜ್ಯ ಸರ್ಕಾರವು ವಿಧಾನಸಭೆಯಲ್ಲಿ ಮಸೂದೆ ಮಂಡಿಸಿದೆ. ಇದರಲ್ಲಿ ಹೊಸದೇನೂ ಇಲ್ಲ. ಮೂರರ ಜತೆ ಮತ್ತೊಂದು ಎಂಬಂತಾಗಿದೆ. ಸರ್ಕಾರದ ಉದ್ಯೋಗಕ್ಕೆ ಕನ್ನಡ ಮಾಧ್ಯಮದ ಓದನ್ನು ಕಡ್ಡಾಯಗೊಳಿಸುವಂತಹ ಅಂಶವೇನಾದರೂ ಇದ್ದಿದ್ದರೆ ಸೈ ಎನ್ನಬಹುದಿತ್ತು.

ಎಸ್ಎಸ್ಎಲ್‌ಸಿವರೆಗೆ ಕನ್ನಡವನ್ನು ಒಂದು ವಿಷಯವಾಗಿ ಓದಿರುವುದು ಎನ್ನುವುದರಲ್ಲಿ ವಿಶೇಷವೇನಿದೆ? ಇದೊಂದು ಕಣ್ಣೊರೆಸುವ ತಂತ್ರ. 'ಕೆಲಸ ಖಾಲಿ ಇಲ್ಲ' ಎಂಬ ಬೋರ್ಡ್ ಬರೆದಿಟ್ಟು ಬಾಗಿಲು ತೆರೆದಂತಿದೆ. ಕೇಂದ್ರದಲ್ಲಿ ತಮ್ಮದೇ ಪಕ್ಷದ ನೇತೃತ್ವದ ಸರ್ಕಾರ ಇದೆ. ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳ ಕರ್ನಾಟಕ ಶಾಖೆಗಳಲ್ಲಿ ಕಡ್ಡಾಯವಾಗಿ ಕನ್ನಡಿಗರಿಗೇ ಉದ್ಯೋಗ ದೊರಕಿಸಿಕೊಡುವ ದಿಸೆಯಲ್ಲಿ ರಾಜ್ಯ ಸರ್ಕಾರ ಪ್ರಯತ್ನ ಮಾಡಲಿ.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಮೊಕದ್ದಮೆ ದಾಖಲಿಸುವಾಗ ಗಮನ ಎಲ್ಲಿತ್ತು?

ಒಮ್ಮೆ ಕ್ರಿಮಿನಲ್ ಮೊಕದ್ದಮೆ ದಾಖಲಾದರೆ ಅದನ್ನು ಹಿಂಪಡೆಯಲು ಸರ್ಕಾರಗಳಿಗೆ ವಿವೇಚನಾ ಅಧಿಕಾರ ಇರಬಾರದು ಎಂದು, ದ್ವೇಷ ಭಾಷಣಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನು ಹಿಂಪಡೆಯುವ ಸರ್ಕಾರದ ನಿರ್ಧಾರಕ್ಕೆ ಪಿ.ಸ್ವಾತಿ ಅವರು ಪ್ರತಿಕ್ರಿಯಿಸಿದ್ದಾರೆ (ವಾ.ವಾ., ಸೆ. 23). ಅವರ ಈ ಅಭಿಪ್ರಾಯವನ್ನು, ಬಹುಶಃ ರಾಜಕಾರಣಿಗಳ ವಿನಾ ಬೇರೆ ಎಲ್ಲರೂ ಒಪ್ಪುತ್ತಾರೆ. ಸರ್ಕಾರದ ವಿವೇಚನಾಧಿಕಾರ ಎಂದರೇನು? ಮೊದಲು ಮೊಕದ್ದಮೆಯನ್ನು ದಾಖಲಿಸುವಾಗ ಸರ್ಕಾರದ ಗಮನ ಎಲ್ಲಿತ್ತು? ಮೊಕದ್ದಮೆಗಳನ್ನು ದಾಖಲಿಸಿದ ಪೊಲೀಸ್ ಇಲಾಖೆ ಮಾತ್ರವಲ್ಲದೆ ಇನ್ನೂ ಎರಡು ಇಲಾಖೆಗಳ ಅಭಿಪ್ರಾಯವನ್ನೂ ಕಡೆಗಣಿಸುವಷ್ಟು ಮೇಧಾವಿತನ ಸಚಿವ ಸಂಪುಟದ್ದು ಎಂದು ನಾಗರಿಕರು ತಿಳಿಯಬೇಕೇ?! ಈ ಇಲಾಖೆಗಳ ಅಸ್ತಿತ್ವಕ್ಕೆ ಮತ್ತು ಅವು ನೀಡುವ ಅಭಿಪ್ರಾಯಕ್ಕೆ ಬೆಲೆ ಇಲ್ಲವೆಂದೇ ಅರ್ಥವಾಗುತ್ತದಲ್ಲವೇ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ನವರಾತ್ರಿ ಸಮೀಪಿಸಿದೆ. ನಾಡಿನಾದ್ಯಂತ ಹಬ್ಬದ ಸಂಭ್ರಮ ಮನೆ ಮಾಡಿದೆ. ದೇಶದ ವಿವಿಧ ಭಾಗಗಳಲ್ಲಿಯೂ ನವರಾತ್ರಿ ಆಚರಿಸಲಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಇದು ದುರ್ಗಾ ಪೂಜೆ ಎಂದೇ ಪ್ರಸಿದ್ಧ. ನವರಾತ್ರಿ ಶಕ್ತಿ ದೇವತೆಯ ಆರಾಧನೆಯ ಹಬ್ಬ. ಕರ್ನಾಟಕದಲ್ಲಿ ಹೆಚ್ಚು ಪ್ರಸಿದ್ಧವಾದ, ಅಪಾರ ಭಕ್ತರನ್ನು ಹೊಂದಿರುವ ಶಕ್ತಿ ದೇವತೆಯ ದೇವಾಲಯಗಳು ಹಲವಿವೆ. ಅವುಗಳಲ್ಲಿ ಕೆಲವು ದೇಗುಲಗಳತ್ತ ಒಂದು ನೋಟ ಇಲ್ಲಿದೆ

ನವರಾತ್ರಿಯ ಸಂಭ್ರಮ

405 ಕಿ.ಮೀ.

ಪುಷ್ಪಗಳಿಂದ ಮನಸೆಳೆಯುವ ಮಾರಿಕಾಂಬೆ



ಶಿರಸಿ: ನಾಡಿನ ಶಕ್ತಿಪೀಠಗಳಲ್ಲಿ ಒಂದೆನಿಸಿರುವ ಇಲ್ಲಿನ ಮಾರಿಕಾಂಬಾ ದೇವಾಲಯದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ಅದ್ಧೂರಿ ಜಾತ್ರೆ ನಡೆಯುತ್ತದೆ. ನವರಾತ್ರಿ ಉತ್ಸವವನ್ನೂ ಇಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತದೆ.

ದೇವಿಯ ಸನ್ನಿಧಾನದಲ್ಲಿ ನವಧಾನ್ಯ ಬಳಸಿ 'ಘಟ ಸ್ಥಾಪನೆ' ಮಾಡಿ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಪ್ರತಿ ಮೂರು ದಿನಕ್ಕೊಮ್ಮೆ ದೇವಿಯ ಗರ್ಭಗುಡಿ, ಹೊರಾಂಗಣಕ್ಕೆ ಲಕ್ಷಾಂತರ ಹೂಗಳನ್ನು ಬಳಸಿ ಅಲಂಕರಿಸಲಾಗುತ್ತದೆ. ನವರಾತ್ರಿ ವೇಳೆ ಉಡಿ ಸೇವೆಯ ಹೊರತಾಗಿ ಉಳಿದ ಪೂಜಾ ಸೇವೆಗಳು ಸ್ಥಗಿತಗೊಂಡಿರುತ್ತವೆ.

ಪ್ರತಿದಿನ ಸಂಜೆ ದೇವಸ್ಥಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗುತ್ತದೆ. ಭಕ್ತರಿಗೆ ಕ್ರೀಡೆ, ಮನರಂಜನಾ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ನಾಡಿನ ವಿವಿಧೆಡೆಗಳಿಂದ ಲಕ್ಷಾಂತರ ಭಕ್ತರು ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ.

470 ಕಿ.ಮೀ.



ಬೃಹತ್ ಜಾತ್ರೆಗೆ ಸಾಕ್ಷಿಯಾಗುವ ಯಲ್ಲಮ್ಮನಗುಡ್ಡ

ಉಗರಗೋಳ: ದಕ್ಷಿಣ ಭಾರತದ ಪ್ರಸಿದ್ಧ ಧಾರ್ಮಿಕ ಪೀಠಗಳಲ್ಲಿ ಒಂದಾದ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿ ನವರಾತ್ರಿ ಅಂಗವಾಗಿ 9 ದಿನಗಳ ಕಾಲ ಬೃಹತ್ ಜಾತ್ರೆ ಜರುಗುತ್ತದೆ.

ಮೊದಲ ದಿನದಂದು ಯಲ್ಲಮ್ಮ ದೇವಿ ದೇವಸ್ಥಾನದಲ್ಲಿ 'ಘಟ್ಟಸ್ಥಾಪನೆ' ಕಾರ್ಯಕ್ರಮ ನೆರವೇರುತ್ತದೆ. ಗರ್ಭಗುಡಿ ಎದುರು ಹಾಗೂ ದೇವಾಲಯ ಆವರಣದಲ್ಲಿ ದೀಪಗಳನ್ನು ಅಳವಡಿಸಲಾಗುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾದಿಂದ ಲಕ್ಷಾಂತರ ಭಕ್ತರು ಆಗಮಿಸಿ ಇಲ್ಲಿನ ದೀಪಗಳಿಗೆ ಎಣ್ಣೆ ಹಾಕುತ್ತಾರೆ. ನಿತ್ಯ ಬೆಳಿಗ್ಗೆ ಮತ್ತು ಸಂಜೆ ಯಲ್ಲಮ್ಮ ದೇವಿಗೆ ವಿಶೇಷ ಪೂಜೆ, ಅಭಿಷೇಕ ಮತ್ತು ನೈವೇದ್ಯ ನೆರವೇರುತ್ತದೆ. ಸಾವಿರಾರು ಸೀರೆಗಳೊಂದಿಗೆ ಯಲ್ಲಮ್ಮ ದೇವಿಗೆ ಅಲಂಕಾರ ಮಾಡಲಾಗುತ್ತದೆ. ಈ ಬಾರಿ 80 ಬ್ಯಾರೆಲ್ ಎಣ್ಣೆ ಸಂಗ್ರಹವಾಗುವ ನಿರೀಕ್ಷೆಯಿದೆ.

440 ಕಿ.ಮೀ.

ಸಿಗಂದೂರು ಚೌಡೇಶ್ವರಿ

ಶಿವಮೊಗ್ಗ: ಮಲೆನಾಡಿನ ಅಧಿದೇವತೆ ಚೌಡೇಶ್ವರಿಯ ನೆಲೆ ಸಿಗಂದೂರಿನ ದೇವಸ್ಥಾನ ಪರಿಸರದಲ್ಲಿ ಈಗ ನವರಾತ್ರಿಯ ಸಂಭ್ರಮ ಗರಿಗೆದರಿದೆ. ಬೇಡಿದ ವರ ಕರುಣಿಸುವ ತಾಯಿ, ಶಿಷ್ಟರ ರಕ್ಷಿಸುವಳು ಎಂಬ ನಂಬಿಕೆ ಭಕ್ತರದ್ದು. ಸಾಗರ ತಾಲ್ಲೂಕಿನ ತುಮರಿ ಬಳಿಯ ಸಿಗಂದೂರಿಗೆ ಶರಾವತಿ ಹಿನ್ನೀರು ದಾಟಿ ಹೋಗಬೇಕಿದೆ. ಸಾಗರ ಪಟ್ಟಣದಿಂದ ಅಂಬಾರಗೋಡ್ಲಿಗೆ 20 ಕಿ.ಮೀ ದೂರ ತೆರಳಿ ಅಲ್ಲಿಂದ ಐದು ಕಿ.ಮೀ ಲಾಂಚ್‌ನಲ್ಲಿ ಸಾಗುವುದೇ ಚೇತೋಹಾರಿ ಸಂಗತಿ. ಸೆ. 26ರಿಂದ ಅ. 5ರವರೆಗೆ ಪ್ರಸಕ್ತ ನವರಾತ್ರಿ ಉತ್ಸವದ ವಿಭಿನ್ನ ಆಚರಣೆಗೆ ಆಡಳಿತ ಮಂಡಳಿ ಸಿದ್ಧತೆ ನಡೆಸಿದೆ. 9 ದಿನ ನಾಡಿನ ಮಠಾಧೀಶರು ಆಶೀರ್ವಚನ ನೀಡಲಿದ್ದಾರೆ. ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ ದೀಪೋತ್ಸವ, ಯಕ್ಷಗಾನ, ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ.



365 ಕಿ.ಮೀ.



ಕಟೀಲಿನಲ್ಲಿ ನವರಾತ್ರಿ ಯಕ್ಷ ವೈಭವ

ನಂದಿನಿ ನದಿಯ ತಟದಲ್ಲಿ ಇರುವ ಕಟೀಲು ದುರ್ಗಾಪರಮೇಶ್ವರಿ ದೇವಾಲಯವು ದಕ್ಷಿಣ ಕನ್ನಡ ಜಿಲ್ಲೆ ಮೂಲ್ಕಿ ತಾಲ್ಲೂಕಿನಲ್ಲಿದೆ. ನವರಾತ್ರಿ ಅಂಗವಾಗಿ ಸೆ.26ರಿಂದ ಅಕ್ಟೋಬರ್ 5ರ ವಿಜಯ ದಶಮಿಯವರೆಗೆ ಧಾರ್ಮಿಕ, ಸಾಂಸ್ಕೃತಿಕ ವೈಭವ ಮೇಳೈಸಲಿದೆ. ಲಲಿತಾ ಪಂಚಮಿ (ಸೆ.30), ಮೂಲನಕ್ಷತ್ರ ಬರುವ ದಿನ ಶಾರದಾ ಪೂಜೆ (ಅ.2), ಮಹಾನವಮಿ (ಅ.4), ವಿಜಯ ದಶಮಿ (ಅ.5) ಇಲ್ಲಿ ವೈಭವದಿಂದ ನಡೆಯುತ್ತದೆ. ಪ್ರತಿನಿತ್ಯ ಸಂಜೆ 5.30ರಿಂದ ಭಕ್ತಿ ಸಂಗೀತ, ಹರಿಕಥೆ, ಭರತನಾಟ್ಯದ ಜತೆಗೆ, ಸೇವೆಯ ಯಕ್ಷಗಾನ, ಬಯಲಾಟ ಪ್ರದರ್ಶನಗೊಳ್ಳಲಿವೆ.








450 ಕಿ.ಮೀ.

ಶಕ್ತಿದೇವತೆ ಬನಶಂಕರಿದೇವಿ



ಬಾದಾಮಿ: ಚಾಲುಕ್ಯರ ರಾಜಧಾನಿಯಾಗಿದ್ದ ಐತಿಹಾಸಿಕ ಬಾದಾಮಿ ಸಮೀಪದ ನಿಸರ್ಗ ಸೌಂದರ್ಯ ಬನದ ಮಡಿಲಿನಲ್ಲಿರುವ ಶಕ್ತಿಪೀಠ ಬನಶಂಕರಿದೇವಿಗೆ ವಿಜಯದಶಮಿ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ವಿಜಯನಗರ ಅರಸರ ಕಾಲದಲ್ಲಿ ಬನಶಂಕರಿ ದೇವಾಲಯ ನಿರ್ಮಾಣವಾಗಿದೆ. ಆಗ ಪ್ರತಿಷ್ಠಾಪಿಸಿದ್ದ ಮೂರ್ತಿ ಈಗಿಲ್ಲ. ಹೊಸದಾಗಿ 17ನೇ ಶತಮಾನದಲ್ಲಿ ಬನಶಂಕರಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ ಎಂದು ಇತಿಹಾಸಕಾರರು ಹೇಳುತ್ತಾರೆ. ಚಾಲುಕ್ಯರು ಈ ಶಕ್ತಿದೇವತೆಯನ್ನು ಆರಾಧಿಸುತ್ತಿದ್ದರು. ಸೆ.26ರಂದು ಘಟಸ್ಥಾಪನೆ ನೆರವೇರಿಸಿ, ಲಲಿತಾ ಪಂಚಮಿ. ದುರ್ಗಾಷ್ಟಮಿ, ಮಹಾನವಮಿ, ನವಚಂಡಿ ಹವನ ಪೂರ್ಣಾಹುತಿ ಮಾಡಲಾಗುತ್ತದೆ. ಅ. 4ರಂದು ಸಂಜೆ ಬನ್ನಿ ಮುಡಿಯಲಾಗುತ್ತದೆ.

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲದೆ, ಮಹಾರಾಷ್ಟ್ರ, ಗೋವಾ ಮತ್ತು ಆಂಧ್ರಪ್ರದೇಶ ರಾಜ್ಯದಿಂದ ಭಕ್ತರು ದೇವಿ ದರ್ಶನಕ್ಕೆ ಬರುತ್ತಾರೆ.

340 ಕಿ.ಮೀ.

ಪೊಳಲಿಯಲ್ಲಿ ನಿತ್ಯ ಚಂಡಿಕಾ ಹೋಮ



ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಕರಿಯಂಗಳ ಗ್ರಾಮದ ದೇವಿ ಪೊಳಲಿ ರಾಜರಾಜೇಶ್ವರಿ ಸನ್ನಿಧಿಯಲ್ಲಿ ನವರಾತ್ರಿಯ ವೇಳೆ ಭಕ್ತರ ಹರಕೆಯ ಭಾಗವಾಗಿ ಪ್ರತಿದಿನ ಮಧ್ಯಾಹ್ನ ಚಂಡಿಕಾ ಹೋಮ ನಡೆಯಲಿದೆ. ಸೆ.26ರಂದು ಪ್ರಾರಂಭವಾಗುವ ನವರಾತ್ರಿ ಮಹೋತ್ಸವ ಅ.3ರಂದು ಮುಕ್ತಾಯಗೊಳ್ಳುತ್ತದೆ. ಸೆ.30ರ ಲಲಿತಾ ಪಂಚಮಿಯಂದು ಮಹಿಳೆಯರಿಗೆ ವಿಶೇಷ ಸಡಗರ. ಅಂದು ಬೆಳಿಗ್ಗೆ 9ರಿಂದ 12 ಗಂಟೆಯವರೆಗೆ ದೇವಿಗೆ ಹರಕೆಗೆ ಬಂದ ಸೀರೆಗಳನ್ನು ಭಕ್ತರಿಗೆ ಪ್ರಸಾದ ರೂಪದಲ್ಲಿ ನೀಡಲಾಗುತ್ತದೆ. ಪ್ರತಿದಿನ ಸಂಜೆ 6 ಗಂಟೆಯಿಂದ ಸಾಂಸ್ಕೃತಿಕ ಹಬ್ಬವನ್ನು ಆಯೋಜಿಸಲಾಗಿದೆ. ಸಂಗೀತ, ನೃತ್ಯದೊಂದಿಗೆ ಯಕ್ಷಗಾನ, ತಾಳಮದ್ದಳೆ, ಅ.3ರಂದು ನವರಾತ್ರಿಯ ವೇಷಗಳ ಸಂಭ್ರಮ ಇರುತ್ತದೆ.

150 ಕಿ.ಮೀ.

ವರವ ಕೊಡುವ ಚಾಮುಂಡಿ


ಮೈಸೂರಿನ ಚಾಮುಂಡೇಶ್ವರಿ ಬೆಟ್ಟವನ್ನು ಮಹಾಬಲಗಿರಿ ಎಂತಲೂ ಕರೆಯುತ್ತಾರೆ. ಚಂಡ–ಮುಂಡ ರಾಕ್ಷಸರನ್ನು ಸಂಹಾರ ಮಾಡಿದ ನಂತರ ಚಾಮುಂಡೇಶ್ವರಿ ಇಲ್ಲಿ ನೆಲೆಸಿದಳೆಂದು ಪ್ರತೀತಿಯಿದ್ದು, ಮಾರ್ಕಂಡೇಯ ಮಹರ್ಷಿ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದರೆಂಬ ಐತಿಹ್ಯವೂ ಇದೆ.

ಯದುವಂಶದ ಮೈಸೂರು ಒಡೆಯರು ದೇವಾಲಯವನ್ನು ಅಭಿವೃದ್ಧಿಗೊಳಿಸಿದ್ದು, ಕಳೆದ 500 ವರ್ಷಗಳಿಂದ ದೇಗುಲವು ಗರ್ಭಗುಡಿ, ನವರಂಗ, ವಿಮಾನ, ರಾಜಗೋಪುರ ಹಂತ ಹಂತವಾಗಿ ಬೆಳೆದಿದೆ. ಶರನ್ನವರಾತ್ರಿಯಲ್ಲಿ ನವದುರ್ಗೆಗೆ ಪೂಜೆ ಸಲ್ಲಿಸಿದರೆ ಕೇಳಿದ ವರವನ್ನು ಕೊಡುವಳೆಂಬ ನಂಬಿಕೆ ಭಕ್ತರಲ್ಲಿದೆ. ನವರಾತ್ರಿ ನ.26ರಿಂದ ಅ.4ರವರಗೆ ಇರಲಿದ್ದು, ಪ್ರತಿ ದಿನ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಟಾ, ಕೂಷ್ಮಾಂಡಾ, ಸ್ಕಂದಮಾ, ಕಾತ್ಯಾಯಿನಿ, ಕಾಳರಾತ್ರಿ, ಮಹಾಗೌರಿ, ಸಿದ್ಧಿಧಾತ್ರಿ ಅಲಂಕಾರವನ್ನು ಮಾಡಲಾಗುತ್ತದೆ.

ವಿಜಯದಶಮಿಯಂದು ಚಾಮುಂಡೇಶ್ವರಿ ಮೂರ್ತಿಯನ್ನು ಬೆಟ್ಟದ ದರ್ಬಾರ್ ಮಂಟಪದಲ್ಲಿ ಕೂರಿಸಿ ವಿಜಯ ಉತ್ಸವ ಮಾಡಲಾಗುತ್ತದೆ.

315 ಕಿ.ಮೀ.

ಹೊರನಾಡು ಅನ್ನಪೂರ್ಣೇಶ್ವರಿ



ಚಿಕ್ಕಮಗಳೂರು ಜಿಲ್ಲೆ ಕಳಸ ಸಮೀಪದ ಹೊರನಾಡಿನ ಅನ್ನಪೂರ್ಣೇಶ್ವರಿ ದೇಗುಲದಲ್ಲಿ ನವರಾತ್ರಿ ಆಚರಣೆ ವಿಶಿಷ್ಟವಾಗಿ ಜರುಗುತ್ತದೆ.

ನವರಾತ್ರಿಯ ಎಲ್ಲ ದಿನ ದೇವಿಗೆ ವಿಶೇಷ ಅಲಂಕಾರ ಮಾಡಲಾಗುತ್ತದೆ. ಪ್ರತಿದಿನ ಬೆಳಿಗ್ಗೆ ಧಾರ್ಮಿಕ ವಿಧಿ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಇರುತ್ತದೆ.

ವಿಜಯದಶಮಿ ಪ್ರಯುಕ್ತ ವಿಜಯೋತ್ಸವ ಆಚರಣೆ ನಡೆಯುತ್ತದೆ. ದಸರಾ ಮುಗಿದ ಕೂಡಲೇ ಜರುಗುವ ಮಹಾಚಂಡಿಕಾ ಹೋಮ ಪ್ರಸಿದ್ಧಿ ಪಡೆದಿದೆ.

320 ಕಿ.ಮೀ.


ಶೃಂಗೇರಿಯ ಶಾರದಾಂಬೆ

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯ ಶಾರದಾಂಬೆ ಸನ್ನಿಧಿಯಲ್ಲಿ ಶರನ್ನವರಾತ್ರಿ ಉತ್ಸವ 12 ದಿನ ಜರುಗುತ್ತದೆ. ಜಗತ್ಪ್ರಸೂತಿಕಾ, ಹಂಸವಾಹಿನಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ ಇಂದ್ರಾಣಿ, ವೀಣಾ ಶಾರದೆ. ಮೋಹಿನಿ, ರಾಜರಾಜೇಶ್ವರಿ, ಚಾಮುಂಡಿ, ಗಜಲಕ್ಷ್ಮಿ ಅಲಂಕಾರಗಳಿಂದ ದೇವಿ ಕಂಗೊಳಿಸುವುದು ವಿಶೇಷ.

ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲು ವಿವಿಧೆಡೆಗಳಿಂದ ಭಕ್ತರು ಬರುತ್ತಾರೆ. ದೇವಾಲಯ ಅಂಗಳದಲ್ಲಿ ಸ್ವರ್ಣ ರಥ ಉತ್ಸವ ನೆರವೇರುತ್ತದೆ. ಬೀದಿ ಉತ್ಸವ ನಡೆಯುತ್ತದೆ. ನವರಾತ್ರಿಯ ವಿಶೇಷ ಕಾರ್ಯಕ್ರಮದಲ್ಲಿ ದರ್ಬಾರು ಒಂದು. 11ನೇ ದಿನ ಮಹಾರಥೋತ್ಸವ ಜರುಗುತ್ತದೆ. ರಥೋತ್ಸವದಲ್ಲಿ ಉಭಯ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತದೆ.

430 ಕಿ.ಮೀ.

ಕೊಲ್ಲೂರು ದೇವಸ್ಥಾನದಲ್ಲಿ ನವರಾತ್ರಿ ರಂಗು



ಉಡುಪಿ ಜಿಲ್ಲೆಯ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಸೆ.29ರಿಂದ ನವರಾತ್ರಿ ಉತ್ಸವದ ಆಚರಣೆಗಳು ಆರಂಭಗೊಂಡು ಅ.5ರವರೆಗೆ ನಡೆಯಲಿವೆ. ಕಟ್ಟುಕಟ್ಟಳೆ ಪೂಜೆಗಳ ಜತೆ ನವರಾತ್ರಿ ವಿಶೇಷ ಪೂಜೆ, ಉತ್ಸವಗಳು ನಡೆಯಲಿವೆ. ಅ.4ರಂದು ಮಹಾನವಮಿ ನಡೆಯಲಿದ್ದು, ಬೆಳಿಗ್ಗೆ 11.30ಕ್ಕೆ ಚಂಡಿಕಾಯಾಗ, ಮಧ್ಯಾಹ್ನ 1ಕ್ಕೆ ರಥೋತ್ಸವ ಜರುಗಲಿದೆ. ಅ.5 ರಂದು ವಿಜಯದಶಮಿಯ ಪ್ರಯುಕ್ತ ಬೆಳಿಗ್ಗೆ ವಿದ್ಯಾರಂಭ, ನವಾನ್ನ ಪ್ರಾಶನ, ಸಂಜೆ 5.30ಕ್ಕೆ ಮೂಕಾಂಬಿಕಾ ದೇವಿಯ ವಿಜಯೋತ್ಸವ ನಡೆಯಲಿದೆ. ನವರಾತ್ರಿ ಅಂಗವಾಗಿ ಪ್ರತಿನಿತ್ಯ ದೇವಳದ ಸ್ವರ್ಣಮುಖಿ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ದೇಶದ ಒಂಬತ್ತು ಶಕ್ತಿಪೀಠಗಳಲ್ಲಿ ಕೊಲ್ಲೂರು ಸ್ಥಾನ ಪಡೆದುಕೊಂಡಿದೆ. ದೇವಸ್ಥಾನದಲ್ಲಿ ಚಂಡಿಕಾ ಹೋಮದ ಸೇವೆ ಸಲ್ಲಿಸುವುದು ಅತ್ಯಂತ ಪ್ರಸಿದ್ಧವಾಗಿದ್ದು ಭಕ್ತರು ಹೋಮಕ್ಕಾಗಿ ವರ್ಷಾನುಗಟ್ಟಲೆ ಸರದಿಯಲ್ಲಿ ಕಾಯುವುದು ವಿಶೇಷ.

ಪದಬಂಧ 5089


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜಗಳಕ್ಕೊಂದು ಪರ್ಯಾಯ ಪದ (3)
4.ಒಳ್ಳೆಯ ಆಸೆ (4)
6.ಬಿಸಿಲುಕುದುರೆ ಇಲ್ಲಿಯೇ ಕಾಣುತ್ತಿದೆ (4)
8.ಉಚಿತವಾದರೂ ಇದು ನಿಶ್ಚಿತವಾದದ್ದು! (3)
10.ಹುಲಿ ಇಲ್ಲಿಗೆ ಬಂದಿದೆಯಲ್ಲಾ!...(2)
11.ಹಸುವಿನ ಮರಿ (2)
12.ಗುಲಾಬಿ ಹೂ ಹಿಡಿದಿರುವ ದಾಸ (3)
14.ಗುಸು ಗುಸು ಶಬ್ದ ಮಾಡುತ್ತಿರುವ ಕಂದ (4)
18.ವಿರಾಜಮಾನವಾಗಿರುವ ಚಕ್ರವರ್ತಿ (4)
19.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)

ಮೇಲಿಂದ ಕೆಳಕ್ಕೆ

1.ಕರುವನ್ನು ನೋಡಿದ್ದಕ್ಕೇ ಈ ಹೊಟ್ಟೆಕಿಚ್ಚು(3)
2.ಸಖನ ನಗುಮುಖ (4)
3.ಇಣುಕುತ್ತಿರುವ ಅಳಿಲು (3)
5.ನರಕಾಧಿಪತಿ ಇಲ್ಲಿದ್ದಾನೆ (2)
7.ಗಾದೆಯಂತೆ ಬಾಯಿಗೆ ಮೊಸರು ಬೇಕಾದರೆ ಕೈ ರಾಡಿ! (3)
9.ಈ ತರ ಬಿದ್ದಿರುವ ಒಣಗಿದ ವಸ್ತು (3)
10.ಅತಿಶಯವಾದ ಪ್ರೀತಿ (3)
13.ಜರೂರಾಗಿ ಮಾಡಿಮುಗಿಸಿರುವ ಪಂಚನಾಮೆ (4)
15.ಕೇಳಲು ಮಧುರವಾಗಿರುವುದು (3)
16.ಸುಗಮವಾಗಿ ಕಿತ್ತು ತಂದ ಹೂ (2)
17.ಬಯ್ಯಲು ಸೂಕ್ತವೆನಿಸಿದ ವಿಸ್ತಾರ ಜಾಗ! (3)



5088ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸಹಾಯಸ್ಥಿತಿ
4.ದಿಗ್ಬಂಧನ 5.ಗದರು
7.ಪ್ರಕಾಶ 10.ತುರಗ
12.ಶಬರ 13.ಕಲರವ
15.ಶರೀರದಂಡನೆ

ಮೇಲಿಂದ ಕೆಳಕ್ಕೆ:
1.ಅಜಗರ 2.ತಿದಿ
3.ವಾನಪ್ರಸ್ಥ 6.ರುಜುವಾತು
7.ಪ್ರಯೋಗ 8.ಶಬ್ದಕೋಶ
9.ಮರಕತ 11.ಅರಮನೆ
14.ವಶ

ಸುಡೊಕು 5475

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

5474ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ದಶಿ ಗಂ. 27-13
ನಕ್ಷತ್ರ: ಪೂರ್ವಫಲ್ಗುನಿ ಗಂ. 29-07 **ಯೋಗ:** ಸಾಧ್ಯ ಗಂ. 09-42, **ಕರಣ:** ವಿಷ್ಟಿ ಗಂ. 14-56, ಕನ್ಯಾ ಮಾಸದ 07 ನೇ ದಿನ. **ರಾಹುಕಾಲ :** ಬೆಳಿಗ್ಗೆ 09:00 – 10:30
ಸೂರ್ಯೋದಯ : 06-23 **ಸೂರ್ಯಾಸ್ತ :** 06-22 **ಮುಸ್ಲಿಂ ದಿನಾಂಕ :** 27 ಸಫರ್
ದಿನ ವಿಶೇಷ : ವಿಷಶಸ್ತ ಚತುರ್ದಶಿ
ಅದೃಷ್ಟ ಸಂಖ್ಯೆ : 4, 7

ಮೇಷ: ಕೇವಲ ಮನರಂಜನೆಗಾಗಿ ಅಧಿಕ ಮಟ್ಟದಲ್ಲಿ ಧನಹಾನಿ ಆಗಲಿದೆ. ಸಹೋದರರಲ್ಲಿ ಸಣ್ಣ ಸಣ್ಣ ವಿಚಾರದಲ್ಲಿ ಅನರ್ಥಗಳು ನಡೆಯುವ ಸಂಭವವಿದೆ, ಅದರ ಪರಿಣಾಮವಾಗಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡುವುದು.

ವೃಷಭ: ಕಾರ್ಮಿಕ ವರ್ಗದವರಿಂದ ಮೋಸ ಹೋಗುವಿರಿ. ಎಚ್ಚರವಿರಲಿ. ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳುವುದರಿಂದ ನೋವು ಕಡಿಮೆಯಾಗುವುದು. ಕೃಷಿ ಕಾರ್ಯಗಳಿಂದಾಗಿ ಆಯಾಸ ಉಂಟಾಗುವುದು.

ಮಿಥುನ: ಮನೆಯಲ್ಲಿನ ಕೆಲ ಸಮಸ್ಯೆಗಳು ಈ ದಿನ ಸುಲಭವಾಗಿ ಪರಿಹಾರವಾಗುವುದು. ಕಾರ್ಖಾನೆಯಲ್ಲಿ ವಿದ್ಯುತ್ ಶಕ್ತಿಯ ಲೋಪದಿಂದಾಗಿ ನಷ್ಟ ಸಂಭವಿಸಬಹುದು. ಖಾದ್ಯ ತೈಲ ವ್ಯಾಪಾರಿಗಳಿಗೆ ಲಾಭದ ನಿರೀಕ್ಷೆ ಇರುವುದು.

ಕರ್ಕಾಟಕ: ಉತ್ತಮ ಅವಕಾಶಗಳು ಜಾರಿ ಹೋಗದಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಸ್ವಂತ ಉದ್ಯೋಗದವರಿಗೆ ಹೆಚ್ಚಿನ ಪ್ರಗತಿ ಉಂಟಾಗುತ್ತದೆ. ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿಯೊಬ್ಬರು ನೆರವಿಗೆ ಬರುವರು.

ಸಿಂಹ: ತೆಂಗಿನಕಾಯಿ ವ್ಯಾಪಾರಿಗಳಿಗೆ ಹೆಚ್ಚು ಲಾಭ ಸಿಗಲಿದೆ. ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿ ಆಸಕ್ತಿ ಮೂಡುವುದು. ಈ ದಿನ ಮನಸ್ಸನ್ನು ಸ್ಥಿಮಿತ ಇಟ್ಟುಕೊಳ್ಳಬೇಕಾದ ಅಗತ್ಯವಿದೆ. ಗಲಾಟೆ ಮಾಡಿಕೊಳ್ಳಬೇಡಿ.

ಕನ್ಯಾ: ಉದ್ಯೋಗ ಬದಲಾವಣೆ ಮಾಡುವ ವಿಚಾರವನ್ನು ಮೇಲಧಿಕಾರಿಗಳ ಗಮನಕ್ಕೆ ತರುವುದು ಒಳ್ಳೆಯದು. ಭಾಷಣ, ಚಿತ್ರಕಲೆಯಲ್ಲಿನ ನಿಮ್ಮ ಆಸಕ್ತಿಯಿಂದಾಗಿ, ಹೆಚ್ಚಿನ ಕಲಿಕೆಗೆ ಸಮಯ ಮೀಸಲಿಡುವ ತೀರ್ಮಾನ ಮಾಡಿ.

ತುಲಾ: ವಿದ್ಯಾಭ್ಯಾಸದಲ್ಲಿ ಹಿನ್ನಡೆ ತೋರಿಬಂದು ವಿದ್ಯಾರ್ಥಿಗಳಿಗೆ ನಿರಾಸೆ ಹಾಗೂ ಕೋಪ ಕಾಡಲಿದೆ. ವಿನ್ಯಾಸಕಾರ ಸಲಹೆಗಾರರಾಗಿ ಕಟ್ಟಡ ನಿರ್ಮಾಣ ಸಂಸ್ಥೆಯೊಂದಕ್ಕೆ ನೇಮಕಗೊಳ್ಳುವಿರಿ. ಹೊಟ್ಟೆ ನೋವು ಎದುರಾಗಬಹುದು.

ವೃಶ್ಚಿಕ: ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ಸರ್ಕಾರಿ ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರುವ ಸೂಚನೆ ಕಾಣುವಿರಿ, ಅದರಿಂದಾಗಿ ಆದಾಯದಲ್ಲಿ ಹೆಚ್ಚಳವಿರುವುದು.

ಧನು: ಯಾವುದೇ ವಿಷಯದಲ್ಲಿ ಮುಂದುವರಿಯುವ ಮೊದಲು ಅದರ ಉದ್ದಗಲದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವಿರಲಿ. ಟಿ.ವಿ, ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಆದಾಯ.

ಮಕರ: ಬಹಳ ದಿನದ ನಂತರ ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವಿರಿ. ಸುಖ ಭೋಜನ ಮಾಡುವ ಅವಕಾಶ ಸಿಗಲಿದೆ.

ಕುಂಭ: ಪ್ರತಿಯೊಂದು ಕಾರ್ಯಕ್ಕೂ ಯಶಸ್ಸು ಹೊಂದಲು ಹಲವು ಬಾರಿ ಪ್ರಯತ್ನ ಪಡಬೇಕಾದೀತು. ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಕಾರ್ಯಗಳು ಏರು- ಪೇರಾಗಬಹುದು.

ಮೀನ: ಆಡಳಿತಾತ್ಮಕ ವಿಚಾರದಲ್ಲಿ ನಡೆದ ಭಾರಿ ಬದಲಾವಣೆಗಳು ನಿಮ್ಮನ್ನು ಗುರಿಮಾಡುವುದು. ಈ ದಿನ ವ್ಯವಹರಿಸುವಾಗ ಪ್ರದರ್ಶಿಸಿದ ಬುದ್ಧಿವಂತಿಕೆಯು ಲಾಭಕ್ಕೆ ಕಾರಣವಾಗುವುದು. ಜೀವನದಲ್ಲಿ ನಿಯಮವನ್ನು ರೂಢಿಸಿಕೊಳ್ಳಿ.

ಕಡೇ ದಿನ ನಡೆಯದ ವಿಧಾನಸಭೆ ಕಲಾಪ • ಭಿತ್ತಿ ಫಲಕ ಹಿಡಿದು ಜೆಡಿಎಸ್ ಸದಸ್ಯರ ಧರಣಿ– ಗದ್ದಲ

ಬಿಎಂಎಸ್ ದಾಖಲೆ ಮೋದಿಗೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಎಂಎಸ್ ಶಿಕ್ಷಣ ಸಂಸ್ಥೆಯಲ್ಲಿ ಬೈಲಾ ಉಲ್ಲಂಘಿಸಿ ಟ್ರಸ್ಟಿಗಳ ನೇಮಕ, ಪ್ರವೇಶ ಪ್ರಕ್ರಿಯೆ, ಶುಲ್ಕ ವಸೂಲಿ ಮತ್ತು ಜಮೀನು ಅಕ್ರಮಕ್ಕೆ ಸಂಬಂಧಿಸಿದ ಎಲ್ಲ ಕಡತಗಳು ಮತ್ತು ದಾಖಲೆಗಳನ್ನು ಸದ್ಯವೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಕಳುಹಿಸಿ ತನಿಖೆಗೆ ಒತ್ತಾಯಿಸುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ವಿಧಾನಸಭಾ ಅಧಿವೇಶನವನ್ನು ಶುಕ್ರವಾರ ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ದಯಾನಂದ ಪೈ ಮತ್ತು ರಾಗಿಣಿ ನಾರಾಯಣ ಅವರು ಬಿಎಂಎಸ್ ಶಿಕ್ಷಣ ಸಂಸ್ಥೆಯ ಸಂಪೂರ್ಣ ಆಸ್ತಿಯನ್ನು ಸ್ವಂತಕ್ಕೆ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದಕ್ಕೆ ಉನ್ನತ ಶಿಕ್ಷಣ ಸಚಿವರ ಬೆಂಬಲವಿದೆ ಮತ್ತು ಹಿಂದಿನ ಮುಖ್ಯಮಂತ್ರಿಯವರ ಅವಧಿಯಲ್ಲಿ ಕಾಣದ ಕೈಗಳು ಟ್ರಸ್ಟಿಗಳ ಬದಲಾವಣೆಗೆ ಸಂಬಂಧಿದಂತೆ ಕಡತಕ್ಕೆ ಸಹಿ ಹಾಕಿಸಿಕೊಂಡಿವೆ. ಭಾರಿ ಅಕ್ರಮ ನಡೆದಿರುವುದರಿಂದ ಟ್ರಸ್ಟ್ ಮತ್ತು ಟ್ರಸ್ಟ್‌ನ ಎಲ್ಲ ಸ್ವತ್ತುಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕಲಾಪದಲ್ಲಿ ಗದ್ದಲ: ಶುಕ್ರವಾರ ಬೆಳಿಗ್ಗೆ ಕಲಾಪ ಆರಂಭಗೊಂಡಾಗ ಜೆಡಿಎಸ್ ಸದಸ್ಯರು ಭಿತ್ತಿ ಫಲಕ ಹಿಡಿದು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಆರಂಭಿಸಿದರು. ಉನ್ನತ ಶಿಕ್ಷಣ ಸಚಿವರ ವಿರುದ್ಧ ಘೋಷಣೆಗಳನ್ನು ಕೂಗಿದರು. ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, 'ಇದೊಂದು ಗಂಭೀರ ಪ್ರಕರಣ. ಸರ್ಕಾರ ತನ್ನ ಜವಾಬ್ದಾರಿ ನಿರ್ವಹಿಸದೇ ಎಡವಿದೆ. ಸದನದಲ್ಲಿ ನಾವು ಇಟ್ಟ ದಾಖಲೆಗಳಿಗೆ ಸ್ಪಷ್ಟ ಉತ್ತರ ನೀಡದೇ ನುಣುಚಿಕೊಂಡಿದೆ. ತನಿಖೆಗೆ ಆದೇಶಿಸದೇ ಇದ್ದರೆ ನಾವು ಜಾಗ ಬಿಟ್ಟು ಕದಲುವುದಿಲ್ಲ' ಎಂದು ಗುಡುಗಿದರು.

ಆಗ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, 'ಜೆಡಿಎಸ್‌ನವರು ಧರಣಿ ಮಾಡುತ್ತಿದ್ದು, ತನಿಖೆಗೆ ಒತ್ತಾಯಿಸಿದ್ದಾರೆ. ನಿಮ್ಮ ಕೊಠಡಿಗೆ ಕರೆಸಿ ಮಾತುಕತೆ ಮಾಡಿ ಇತ್ಯರ್ಥ ಮಾಡಿ. ನಾವು ಭ್ರಷ್ಟಾಚಾರ ವಿಷಯ ಪ್ರಸ್ತಾಪಿಸಬೇಕಿದೆ' ಎಂದರು.

ಅದಕ್ಕೆ ಒಪ್ಪಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಕುಮಾರಸ್ವಾಮಿ ಮತ್ತು ಇತರ ಶಾಸಕರನ್ನು ಕರೆಸಿ ಚರ್ಚಿಸಿದರು. ಸುದೀರ್ಘ ಚರ್ಚೆ ನಂತರವೂ ತನಿಖೆಗೆ ಸರ್ಕಾರ ಒಪ್ಪಲಿಲ್ಲ. ಮತ್ತೆ ಕಲಾಪ ಸೇರಿದಾಗ ಜೆಡಿಎಸ್‌ನವರು ಧರಣಿ ಮುಂದುವರೆಸಿದರು. ಗದ್ದಲ, ಕೂಗಾಟ ಹೆಚ್ಚಾಯಿತು.

ತನಿಖೆ ನಡೆಯಲೇಬೇಕು ಎಂದು ಕುಮಾರಸ್ವಾಮಿ ಹಟಕ್ಕೆ ಕುಳಿತರು. ಇದಕ್ಕೆ ಸರ್ಕಾರ ಏನು ಉತ್ತರ ನೀಡುತ್ತದೆ' ಎಂದು ಸಭಾಧ್ಯಕ್ಷ ಕಾಗೇರಿ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ, 'ಟ್ರಸ್ಟ್‌ನಲ್ಲಿ ಸರ್ಕಾರದ ಅಧಿಕಾರ ಮೊಟಕು ಮಾಡಿಲ್ಲ. ಯಾವುದೇ ಕಾರಣಕ್ಕೂ ಖಾಸಗಿಯವರಿಗೆ ಪರಭಾರೆ ಆಗುವುದಿಲ್ಲ. ಕುಮಾರಸ್ವಾಮಿ ಆರೋಪದಲ್ಲಿ ಹುರುಳಿಲ್ಲ ' ಎಂದು ಹೇಳಿದರು.

'ಶೇ 40ರ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡಲು ಬಯಸದ ಸರ್ಕಾರ ಈ ವಿಷಯದಲ್ಲಿ ಜಗ್ಗಾಟ ಮಾಡುತ್ತಿದೆ, ತಂತ್ರಗಾರಿಕೆ ನಡೆಸಿದೆ' ಎಂದು ಸಿದ್ದರಾಮಯ್ಯ ಕಿಡಿ ಕಾರಿದರು. ಗದ್ದಲ ತಹಬಂದಿಗೆ ಬರದಿದ್ದಾಗ, ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.



ವಿಧಾನ ಪರಿಷತ್ ಕಲಾಪದಲ್ಲಿ ಶುಕ್ರವಾರ ಕಾಂಗ್ರೆಸ್ ಸದಸ್ಯರು ಶೇ 40 ಸರ್ಕಾರ ಎಂಬ ಭಿತ್ತಿಪತ್ರಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ

'ಕಾಂಗ್ರೆಸ್‌ನ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲು ಸಿದ್ಧರಿದ್ದೇವೆ. ಅರ್ಕಾವತಿ ಬಡಾವಣೆಯ ರೀಡೂ, ಸೋಲಾರ್ ಹಗರಣವನ್ನು ನಿಮ್ಮ ಸರ್ಕಾರ ಸಿಬಿಐಗೆ ಏಕೆ ಒಪ್ಪಿಸಲಿಲ್ಲ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಬಿಎಂಎಸ್ ಶಿಕ್ಷಣ ಟ್ರಸ್ಟ್‌ನ ಅವ್ಯವಹಾರದ ಬಗ್ಗೆ ತನಿಖೆ ಆಗಲೇಬೇಕು. ಸಿಬಿಐ ಆದರೂ ಆಗಲಿ ಸಿಐಡಿ ಆಗಲಿ, ತನಿಖೆ ಆಗಬೇಕು
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕುಮಾರಸ್ವಾಮಿ ತಮ್ಮ ಸ್ವಾರ್ಥಕ್ಕಾಗಿ ಸರ್ಕಾರಕ್ಕೆ ಮಸಿ ಬಳಿಯಲು ಯತ್ನಿಸುತ್ತಿದ್ದಾರೆ. ಯಾವುದೇ ತನಿಖೆ ನಡೆಸುವುದಿಲ್ಲ
ಡಾ.ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

ಅನ್ನದಾನಿಗೆ ಗದರಿದ ಕಾಗೇರಿ

ಜೆಡಿಎಸ್ ಪ್ರತಿಭಟನೆಯ ವೇಳೆಗೆ ಶಾಸಕ ಕೆ.ಅನ್ನದಾನಿ ಸಭಾಧ್ಯಕ್ಷರ ಪೀಠದ ಮೆಟ್ಟಿಲು ಹತ್ತಿ ಅವರ ಮುಖಕ್ಕೆ ಭಿತ್ತಿಫಲಕ ಹಿಡಿದು ಘೋಷಣೆ ಕೂಗುತ್ತಿದ್ದಾಗ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕೆರಳಿ ಕೆಂಡವಾದರು.

'ಏನ್ರಿ ಅನ್ನದಾನಿ ಲೆಕ್ಚರರ್ ಅಂತ ಹೇಳಿಕೊಳ್ಳುತ್ತೀರಿ. ಸದನದಲ್ಲಿ ಹೇಗೆ ವರ್ತಿಸಬೇಕು ಎಂಬುದು ಗೊತ್ತಿಲ್ಲವೇ. ಸಭಾಧ್ಯಕ್ಷರ ಪೀಠದ ಮೇಲೆ ಹತ್ತಿ ಬರುತ್ತೀರಾ. ಇಳಿಸ್ರಿ ಅವರನ್ನ ಕೆಳಗೆ' ಎಂದು ಹೇಳಿದರು.

ಬಳಿಕ ಜೆಡಿಎಸ್ ಸದಸ್ಯರೇ ಅನ್ನದಾನಿಯನ್ನು ಕೆಳಗಿಳಿಸಿದರು.

ಮಾಣಿಪ್ಪಾಡಿ ವರದಿ ಮಂಡನೆಗೆ ಆಕ್ಷೇಪ: ಪರಿಷತ್‌ನಲ್ಲಿ ಧರಣಿ

ಬೆಂಗಳೂರು: ವಕ್ಫ್ ಆಸ್ತಿ ಕಬಳಿಕೆ ಕುರಿತಾದ ಅನ್ವರ್ ಮಾಣಿಪ್ಪಾಡಿ ವರದಿಯು ಶುಕ್ರವಾರವೂ ವಿಧಾನಪರಿಷತ್‌ನಲ್ಲಿ ಗದ್ದಲಕ್ಕೆ ಕಾರಣವಾಯಿತು. ಸರ್ಕಾರದ ಧೋರಣೆಗೆ ಆಕ್ಷೇಪ ವ್ಯಕ್ತಪಡಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು.

ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ವಿಧಾನ ಪರಿಷತ್‌ನಲ್ಲಿ ಗುರುವಾರ ಈ ವರದಿ ಮಂಡಿಸಿದ್ದರು. ಗದ್ದಲದ ನಡುವೆಯೇ ನಾಲ್ಕು ಮಸೂದೆಗಳಿಗೆ ಅನುಮೋದನೆ ನೀಡಲಾಯಿತು.

ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ನಿಯಮಗಳನ್ನು ಉಲ್ಲಂಘಿಸಿ ವರದಿ ಮಂಡಿಸಲಾಗಿದೆ' ಎಂದು ದೂರಿದರು.

'ಮಾಣಿಪ್ಪಾಡಿ ವರದಿ ಸದನದ ಸ್ಥಾಯಿ ಸಮಿತಿ ನೀಡಿದ ವರದಿಯಲ್ಲ. ಅಲ್ಪಸಂಖ್ಯಾತರ ಆಯೋಗದ್ದು. ಪ್ರಶ್ನೋತ್ತರ ವೇಳೆ ಬಳಿಕ ಈ ಬಗ್ಗೆ ಪ್ರಸ್ತಾಪಿಸಿ' ಎಂದು ಸಭಾಪತಿ ರಘುನಾಥ ರಾವ್ ಮಲ್ಕಾಪುರೆ ಸೂಚಿಸಿದರು.

ಶೂನ್ಯವೇಳೆಯ ನಂತರ ವಿಷಯ ಪ್ರಸ್ತಾಪಿಸಿದ ಹರಿಪ್ರಸಾದ್, 'ಗುರುವಾರ ಗದ್ದಲದ ನಡುವೆ ಮಾಣಿಪ್ಪಾಡಿ ವರದಿಯನ್ನು ಏಕೆ ಮಂಡಿಸಲಾಯಿತು. ನಮಗೂ ವರದಿ ಪ್ರತಿ ಕೊಡಬೇಕಾಗಿತ್ತು. ಸರ್ಕಾರ ಈ ವರದಿಯ ಗೋಪ್ಯತೆ ಕಾಪಾಡಲು ವಿಫಲವಾಗಿದೆ. ನಿಯಮ 59ರ ಅಡಿ ಈ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

ಇದರಿಂದ, ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ವಾದ ನಡೆದು, ಗದ್ದಲದ ವಾತಾವರಣ ಸೃಷ್ಟಿಯಾಯಿತು.

ಗದ್ದಲದ ನಡುವೆಯೇ, ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ಮಸೂದೆ, ಕರ್ನಾಟಕ ಸ್ಟ್ಯಾಂಪ್ (ಮೂರನೇ ತಿದ್ದುಪಡಿ) ಮಸೂದೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ಮಸೂದೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆಯನ್ನು ಧ್ವನಿಮತದ ಮೂಲಕ ಅನುಮೋದನೆ ಪಡೆಯಲಾಯಿತು.

ಗದ್ದಲದ ನಡುವೆ ಸದನದ ಕಲಾಪವನ್ನು ಸಭಾಪತಿ ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಸಭಾಪತಿ ಮಲ್ಕಾಪುರೆ, 'ನಿಯಮ 59ರ ನಿಲುವಳಿ ಸೂಚನೆ ತಿರಸ್ಕರಿಸುತ್ತೇನೆ. ವರದಿಯ ಪ್ರತಿಯನ್ನು ಸದಸ್ಯರಿಗೆ ನೀಡಿ' ಎಂದು ಸಭಾನಾಯಕರಿಗೆ ಸೂಚಿಸಿದರು.

ಇದೇ ವೇಳೆ, ಬಿಎಂಎಸ್ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದ ಆರೋಪಗಳ ಬಗ್ಗೆ ಚರ್ಚೆಗೂ ಅವಕಾಶ ನೀಡುವಂತೆ ಜೆಡಿಎಸ್ ಸದಸ್ಯ ಭೋಜೇಗೌಡ ಅವರ ಮನವಿಯನ್ನು ಸಭಾಪತಿ ಒಪ್ಪಲಿಲ್ಲ.

ಇದರಿಂದ, ಅಸಮಾಧಾನಗೊಂಡ ಕಾಂಗ್ರೆಸ್, ಜೆಡಿಎಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿ, ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಹಾಕಿದರು. ಬಿಜೆಪಿ ಸದಸ್ಯರು ಸಹ ಭಿತ್ತಿಪತ್ರ ಪ್ರದರ್ಶನ ಮಾಡಿದರು.

ಸುದ್ದಿ 2 ನಿಮಿಷ

ಪರಿಶಿಷ್ಟರಿಗೆ ಮೀಸಲು: ಶೀಘ್ರವೇ ಸರ್ವಪಕ್ಷ ಸಭೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಹೆಚ್ಚಿಸುವ ಸಂಬಂಧ ನ್ಯಾಯಮೂರ್ತಿಗಳಾದ ಎಚ್.ಎನ್. ನಾಗಮೋಹನದಾಸ್ ಮತ್ತು ಸುಭಾಷ್ ಅಡಿ ಅವರ ವರದಿಗಳು ಬಂದಿದ್ದು, ಈ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಒಂದು ವಾರದೊಳಗೆ ಸರ್ವಪಕ್ಷಗಳ ಸಭೆ ನಡೆಸುತ್ತೇನೆ' ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಈ ಸಂಬಂಧ ಸ್ವಯಂ ಪ್ರೇರಿತ ಹೇಳಿಕೆ ನೀಡಿದ ಅವರು, 'ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಹೆಚ್ಚಿಸಬೇಕು ಎಂದು ವಾಲ್ಮೀಕಿ ಸಮುದಾಯದ ಸ್ವಾಮೀಜಿ 200 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಅವರು ಧರಣಿ ಕೈಬಿಡಬೇಕು' ಎಂದು ಮನವಿ ಮಾಡಿದರು.



'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಕೇಳಿ ಸಭೆಯ ದಿನಾಂಕ ನಿಗದಿ ಮಾಡುತ್ತೇನೆ. ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಬಗ್ಗೆ ಸಹಾನುಭೂತಿ ಇದೆ. ಕಾನೂನಾತ್ಮಕ ವಿಚಾರ ಇರುವುದರಿಂದ ಕಾನೂನು ತಜ್ಞರೂ ಈ ಸಭೆಯಲ್ಲಿ ಭಾಗವಹಿಸುವರು' ಎಂದು ಬೊಮ್ಮಾಯಿ ತಿಳಿಸಿದರು.

'ಸರ್ವಪಕ್ಷಗಳ ಸಭೆಯಲ್ಲಿ ಭಾಗವಹಿಸುತ್ತೇವೆ. ಸ್ವಾಮೀಜಿ ಧರಣಿ ಹಿಂದಕ್ಕೆ ಪಡೆಯಬೇಕು' ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. 'ಈ ವಿಚಾರವಾಗಿ ಸರ್ವಪಕ್ಷ ಸಭೆ ನಡೆಸುವುದು ಸೂಕ್ತ' ಎಂದು ಸಿದ್ದರಾಮಯ್ಯ ಅವರು ತಿಳಿಸಿದರು.

ಭಾರತ್ ಜೋಡೊ: ಸೋನಿಯಾ, ಪ್ರಿಯಾಂಕಾ ಗಾಂಧಿ ಭಾಗಿ

ಬೆಂಗಳೂರು: ಕಾಂಗ್ರೆಸ್ ಪಕ್ಷವು ಹಮ್ಮಿಕೊಂಡಿರುವ 'ಭಾರತ್ ಜೋಡೊ' ಯಾತ್ರೆ ಕರ್ನಾಟಕದಲ್ಲಿ ಹಾದುಹೋಗುವಾಗ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಪಾಲ್ಗೊಳ್ಳಲಿದ್ದಾರೆ.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಸುತ್ತಿರುವ ಯಾತ್ರೆಯು ರಾಜ್ಯದಲ್ಲಿ ಸೆ.30ರಂದು ಬೆಳಗ್ಗೆ 9ಕ್ಕೆ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆಯಿಂದ ಆರಂಭವಾಗಲಿದೆ. ಸೋನಿಯಾ ಗಾಂಧಿ ಅವರು ಭಾಗವಹಿಸುವ ದಿನಾಂಕವನ್ನು ಶೀಘ್ರವೇ ನಿರ್ಧರಿಸಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಯಾತ್ರೆ ಸಾಗುವ ಮಾರ್ಗದ ಸಿದ್ಧತೆಗಳ ಪರಿಶೀಲನೆಯನ್ನು ಪಕ್ಷದ ನಾಯಕರು ನಡೆಸುತ್ತಿದ್ದಾರೆ. ಎಲ್ಲ ಪ್ರಮುಖ ನಾಯಕರಿಗೂ ಜವಾಬ್ದಾರಿ ನೀಡಲಾಗಿದೆ. ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅ.2ರಂದು ಬದನವಾಳುವಿನಲ್ಲಿ ಗಾಂಧಿ ಜಯಂತಿ ಕಾರ್ಯಕ್ರಮ, ಬಳ್ಳಾರಿಯಲ್ಲಿ ಬೃಹತ್ ಸಮಾವೇಶ ನಡೆಯಲಿದೆ. ದಸರಾ ಹಬ್ಬದ ಎರಡು ದಿನ ಯಾತ್ರೆ ಇರುವುದಿಲ್ಲ ಎಂದು ವಿವರ ನೀಡಿದರು.

ಪಿಎಫ್‌ಐ: 14 ಮುಖಂಡರು ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಮಾದರಿಯಲ್ಲೇ ಬೆಂಗಳೂರಿನ ಪೊಲೀಸರು ರಾಜ್ಯದಾದ್ಯಂತ ಪ್ರತ್ಯೇಕ ಕಾರ್ಯಾಚರಣೆ ನಡೆಸಿದ್ದು, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) 14 ಮುಖಂಡರನ್ನು ಬಂಧಿಸಿ ಹೆಚ್ಚಿನ ವಿಚಾರಣೆಗಾಗಿ ಶುಕ್ರವಾರ ಕಸ್ಟಡಿಗೆ ಪಡೆದಿದ್ದಾರೆ.

ಕಾನೂನುಬಾಹಿರ ಚಟುವಟಿಕೆ, ವಿದೇಶಗಳಿಂದ ಹಣ ಸಂಗ್ರಹಿಸಿ ಭಯೋತ್ಪಾದನಾ ಕೃತ್ಯಕ್ಕೆ ಸಂಚು ಹಾಗೂ ಮುಸ್ಲಿಂ ಯುವಕರನ್ನು ಐಎಸ್ (ಇಸ್ಲಾಮಿಕ್ ಸ್ಟೇಟ್) ಉಗ್ರ ಸಂಘಟನೆಗೆ ಸೇರಿಸುತ್ತಿದ್ದ ಆರೋಪದಡಿ ಪಿಎಫ್‌ಐ ಕಚೇರಿ ಹಾಗೂ ಮುಖಂಡರ ಮನೆಗಳ ಮೇಲೆ ಎನ್‌ಐಎ ಅಧಿಕಾರಿಗಳು ಗುರುವಾರ ದಾಳಿ ಮಾಡಿದ್ದರು.

'ಕೇಂದ್ರ ತನಿಖಾ ಸಂಸ್ಥೆಗಳು ನೀಡಿದ್ದ ಮಾಹಿತಿ ಆಧರಿಸಿ ಪಿಎಫ್‌ಐನ 19 ಮಂದಿ ವಿರುದ್ಧ ಕೆ.ಜಿ.ಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದ ಬೆಂಗಳೂರು ಪೊಲೀಸರು, ರಾಜ್ಯದ 9 ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿ 14 ಮಂದಿಯನ್ನು ಬಂಧಿಸಿದ್ದಾರೆ. ಎಲ್ಲರನ್ನೂ ನ್ಯಾಯಾಲಯದ ಎದುರು ಹಾಜರುಪಡಿಸಿ, ನ್ಯಾಯಾಧೀಶರ ಅನುಮತಿ ಪಡೆದು 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಐಎಸ್ ಜೊತೆ ನಂಟು: 'ಐಎಸ್ (ಇಸ್ಲಾಮಿಕ್ ಸ್ಟೇಟ್) ಸೇರಿ ಹಲವು ನಿಷೇಧಿತ ಉಗ್ರ ಸಂಘಟನೆಗಳ ಜೊತೆ ಬಂಧಿತ ಆರೋಪಿಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಂಟು ಹೊಂದಿರುವ ಮಾಹಿತಿ ಇದೆ. ವಿದೇಶಗಳಿಂದ ಹಣ ಪಡೆಯುತ್ತಿದ್ದ ಆರೋಪಿಗಳು, ರಾಜ್ಯದಲ್ಲಿ ಹಿಂದೂ–ಮುಸ್ಲಿಂ ಮಧ್ಯೆ ವೈಷಮ್ಯ ಬೆಳೆಸುವ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ವಿಚಾರಣೆ ಮುಂದುವರಿಸಿದ ಎನ್‌ಐಎ: ರಾಜ್ಯದ 9 ಸ್ಥಳಗಳಲ್ಲಿ ದಾಳಿ ಮಾಡಿ ಪಿಎಫ್‌ಐ ಸಂಘಟನೆಯ ಏಳು ಮುಖಂಡರನ್ನು ಬಂಧಿಸಿರುವ ಎನ್‌ಐಎ ಅಧಿಕಾರಿಗಳು, ದೆಹಲಿಗೆ ಕರೆದೊಯ್ದು ವಿಚಾರಣೆ ಮುಂದುವರಿಸಿದ್ದಾರೆ.

ಪ್ರಕರಣದ ಆರೋಪಿಗಳು

ಕೆ.ಜಿ.ಹಳ್ಳಿ ಠಾಣೆ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿರುವ ಆರೋಪಿಗಳ ವಿವರ: ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್ ನಿವಾಸಿ ನಾಸಿರ್ ಪಾಷಾ, ಎಚ್‌ಬಿಆರ್ ಬಡಾವಣೆಯ ಮನ್ಸೂರ್ ಅಹಮ್ಮದ್, ಕಲಬುರಗಿಯ ಶೇಖ್ ಇಜಾಜ್ ಅಲಿ, ಮೈಸೂರು ಶಾಂತಿನಗರದ ಮಹಮ್ಮದ್ ಖಲೀಂ ಉಲ್ಲಾ, ಮಂಗಳೂರಿನ ಮಹಮ್ಮದ್ ಅಶ್ರಫ್, ಮೋಯಿನುದ್ದೀನ್, ನವಾಜ್ ಕರೂರು, ಅಶ್ರಫ್, ಬಜ್ಪೆಯ ಮಹಮ್ಮದ್ ಶರೀಫ್, ತಲಪಾಡಿಯ ಅಬ್ದುಲ್ ಖಾದರ್, ಬಂಟ್ವಾಳದ ಮಹಮ್ಮದ್ ತಾಸೀರ್, ಪುತ್ತೂರಿನ ಅಬ್ದುಲ್ ರಜಾಕ್, ಅಯೂಬ್ ಅಂಗಾಡಿ, ಶಿವಮೊಗ್ಗದ ಶಾಹಿದ್ ಖಾನ್, ದಾವಣಗೆರೆ ಹರಿನಗರದ ತಾಹೀರ್, ಇಮಾದುದ್ದೀನ್, ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಅಬ್ದುಲ್ ಅಜೀಜ್, ಮೌಸಿನ್ ಅಬ್ದುಲ್ ಹಾಗೂ ಕೊಪ್ಪಳದ ಮಹಮ್ಮದ್ ಫಯಾಜ್.

ಮಾಝ್ ತಂದೆ ಮುನೀರ್ ಸಾವು

ಮಂಗಳೂರು: ನಿಷೇಧಿತ ಭಯೋತ್ಪಾದಕ ಸಂಘಟನೆ ಐಎಸ್ ಜೊತೆ ಸಂಪರ್ಕ ಹೊಂದಿರುವ ಆರೋಪದ ಮೇಲೆ ಬಂಧನಕ್ಕೊಳಗಾಗಿರುವ ನಗರದ ಮಾಝ್ ಮುನೀರ್ ಅಹಮದ್ ಅವರ ತಂದೆ ಮುನೀರ್ ಅಹಮದ್ (54) ಅವರು ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಮಗನ ಬಂಧನದ ಸುದ್ದಿ ತಿಳಿದ ಬಳಿಕ ಮುನೀರ್ ಅವರು ಮಾನಸಿಕವಾಗಿ ಆಘಾತಕ್ಕೊಳಗಾಗಿದ್ದರು. ಶುಕ್ರವಾರ ಬೆಳಿಗ್ಗೆ ನಮಾಜ್‌ಗೆಂದು ಮಸೀದಿಗೆ ಹೋಗಿ, ಮಧ್ಯಾಹ್ನ ಮನೆಗೆ ಬಂದ ಅವರು, ಕುಸಿದುಬಿದ್ದರು. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆದರು ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

'ಅನಂತಸ್ವಾಮಿ ಧಾಟಿಯಲ್ಲೇ ನಾಡಗೀತೆ'

ಒಂದನೇ ಪುಟದಿಂದ

ನಾಡಗೀತೆಗೆ ಧಾಟಿ ಮತ್ತು ಕಾಲಮಿತಿ ನಿಗದಿ ಮಾಡುವ ವಿಚಾರ 2005 ರಿಂದಲೂ ನನೆಗುದಿಗೆ ಬಿದ್ದಿತ್ತು. ಕೆಲವು ಕಾರ್ಯಕ್ರಮಗಳಲ್ಲಿ ಏಳರಿಂದ ಎಂಟು ನಿಮಿಷ ನಾಡಗೀತೆ ಹಾಡುತ್ತಿದ್ದರು. ಇದು ಅಶಕ್ತರು, ಅಂಗವಿಕಲರಿಗೆ ಅನನುಕೂಲವಾಗುತ್ತಿತ್ತು. ಆದ್ದರಿಂದ ಧಾಟಿ ಮತ್ತು ಕಾಲಮಿತಿಯ ಬಗ್ಗೆ ಸ್ಪಷ್ಟತೆ ತರಬೇಕೆಂದು ಒತ್ತಾಯ ಸರ್ಕಾರದ ಮುಂದೆ ಇತ್ತು.

2006ರಲ್ಲಿ ಸಾಹಿತಿ ವಸಂತ ಕನಕಾಪುರೆ ನೇತೃತ್ವದಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ಅವರು ಅಕಾಲಿಕವಾಗಿ ನಿಧನರಾದರು. ಹೀಗಾಗಿ, ಕವಿ ಚನ್ನವೀರ ಕಣವಿ ಅಧ್ಯಕ್ಷತೆಯಲ್ಲಿ ಸರ್ಕಾರ ಮತ್ತೊಂದು ಸಮಿತಿ ರಚಿಸಿತ್ತು. ಈ ಸಮಿತಿಯ ಸದಸ್ಯರಲ್ಲೇ ಸ್ಪಷ್ಟತೆ ಇರಲಿಲ್ಲ. ಹೀಗಾಗಿ, ಸುನಿಲ್‌ಕುಮಾರ್ ಸಚಿವರಾದ ಕೆಲವೇ ದಿನಗಳಲ್ಲಿ ನಾಡಗೀತೆಗೆ ಧಾಟಿ ಮತ್ತು ಕಾಲಮಿತಿ ನಿಗದಿ ಮಾಡುವಂತೆ ಹಿರಿಯ ಸಂಗೀತ ವಿದುಷಿ ಎಚ್.ಆರ್.ಲೀಲಾವತಿ ಅಧ್ಯಕ್ಷತೆಯಲ್ಲಿ 18 ಜನರ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಮೈಸೂರು ಅನಂತಸ್ವಾಮಿ ರಾಗ ಸಂಯೋಜನೆಯಲ್ಲಿ ಎರಡೂವರೆ ನಿಮಿಷಗಳಲ್ಲಿ ನಾಡಗೀತೆ ಹಾಡಬೇಕು ಎಂದು ಶಿಫಾರಸು ನೀಡಿತ್ತು.

ಅನಂತಸ್ವಾಮಿ ಅವರು ಸಂಯೋಜಿಸಿದ್ದ ಧಾಟಿಯ ಬದಲು, ಸಿ.ಅಶ್ವತ್ಥ್ ಅವರು ರಾಗ ಸಂಯೋಜಿಸಿದ್ದ ಧಾಟಿಯಲ್ಲಿ ನಾಡಗೀತೆ ಹಾಡುವುದನ್ನು ನಿಗದಿಪಡಿಸಬೇಕು ಎಂದು ಅಶ್ವತ್ಥ್ ಅವರ ಶಿಷ್ಯರು ಬೇಡಿಕೆ ಸಲ್ಲಿಸಿದ್ದರು. ಇದು ಕೂಡಾ ವಿಳಂಬಕ್ಕೆ ಕಾರಣವಾಗಿತ್ತು.

ಸಿಇಟಿ: ಸರಾಸರಿ 6 ಅಂಕ ಕಳೆಯಲು ಸಲಹೆ

ಪುನರಾವರ್ತಿತ ವಿದ್ಯಾರ್ಥಿಗಳ ಪರಿಗಣನೆ • ತಜ್ಞರ ಸಮಿತಿ ವರದಿಯಂತೆ ಕ್ರಮ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಪುನರಾವರ್ತಿತ ವಿದ್ಯಾರ್ಥಿಗಳ 2021ನೇ ಸಾಲಿನ ಪಿಯು ಅಂಕಗಳನ್ನು 2022ನೇ ಸಾಲಿನ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸುವ ಕುರಿತ ಬಿಕ್ಕಟ್ಟು ಪರಿಹರಿಸುವ ಸೂತ್ರ ಸಿದ್ಧವಾಗಿದೆ.

2021ನೇ ಸಾಲಿನಲ್ಲಿ ದ್ವಿತೀಯ ಪಿಯು ಉತ್ತೀರ್ಣರಾಗಿದ್ದ ವಿದ್ಯಾರ್ಥಿಗಳ ಅಂಕಗಳ ಸಾಮಾನ್ಯೀಕರಣಗೊಳಿಸುವ ಮೂಲಕ ಗಣಿತ, ಭೌತವಿಜ್ಞಾನ, ರಸಾಯನವಿಜ್ಞಾನ, ವಿಷಯಗಳಲ್ಲಿ ಸರಾಸರಿ ಆರು ಅಂಕ ಕಳೆಯಲು ತಜ್ಞರ ಸಮಿತಿ ಸಲಹೆ ಮಾಡಿದೆ. 'ಸಾಮಾನ್ಯೀಕರಣದ ಆಧಾರದಲ್ಲಿ 2021ನೇ ಸಾಲಿನ ಪಿಯು ವಿದ್ಯಾರ್ಥಿಗಳಿಗೆ ಭೌತವಿಜ್ಞಾನದ ಸರಾಸರಿ 6 ಅಂಕ, ರಸಾಯನ ವಿಜ್ಞಾನದ 5 ಅಂಕ, ಗಣಿತದ 7 ಅಂಕಗಳನ್ನು ಇಳಿಸಬೇಕು. ಆಗ 100 ಅರ್ಹತಾ ಅಂಕಗಳಿಗೆ 6 ಅಂಕ ಕಡಿಮೆಯಾಗಲಿದೆ ಹಾಗೂ 2021ನೇ ಸಾಲಿನ ವಿದ್ಯಾರ್ಥಿಗಳ ಪಿಯು ಅಂಕಗಳ ಶೇ 50 ಹಾಗೂ 2022ರ ಸಿಇಟಿಯಲ್ಲಿ ಪಡೆದ ಶೇ 50 ಅಂಕ ಆಧರಿಸಿ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸಬೇಕು' ಎಂದು ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಬಿ. ತಿಮ್ಮೇಗೌಡರ ಅಧ್ಯಕ್ಷತೆಯ ಸಮಿತಿಯ ವರದಿ ತಿಳಿಸಿದೆ.

'2022ರ ಬ್ಯಾಚ್‌ನೊಂದಿಗೆ ದ್ವಿತೀಯ ಪಿಯು ವಿದ್ಯಾರ್ಥಿಗಳ 2021ರ ಬ್ಯಾಚ್‌ನ ಅಂಕಗಳನ್ನು ಸಾಮಾನ್ಯೀಕರಣಗೊಳಿಸಲು 'ರೂಟ್ ಮೀನ್ ಸ್ಕ್ವೇರ್' (ಆರ್‌ಎಂಎಸ್) ವಿಧಾನವನ್ನು ಅನುಸರಿಸುವಂತೆ ಸಮಿತಿ ತನ್ನ ವರದಿಯಲ್ಲಿ ಸೂಚಿಸಿದೆ. 'ಸಾಮಾನ್ಯೀಕರಣ'ದ ನಂತರ 50:50ರ ಅನುಪಾತದಲ್ಲಿ ಅಂಕಗಳನ್ನು ಅನ್ವಯಿಸುವುದರಿಂದ 2021ರಲ್ಲಿ ದ್ವಿತೀಯ ಪಿಯು ಉತ್ತೀರ್ಣರಾದ ವಿದ್ಯಾರ್ಥಿಗಳ ಶ್ರೇಣಿಯನ್ನು ಸುಧಾರಿಸಬಹುದು' ಎಂದು ವರದಿ ಸ್ಪಷ್ಟಪಡಿಸಿದೆ.

ರಾಜ್ಯ ಸರ್ಕಾರವು ಈ ಸೂತ್ರವನ್ನು ಗುರುವಾರವಷ್ಟೇ (ಸೆ.22) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿತ್ತು. ಸೂತ್ರದ ವಿವರಗಳನ್ನು ಪರಿಶೀಲಿಸುವುದಾಗಿ ತಿಳಿಸಿದ್ದ ನ್ಯಾಯಪೀಠ ವಿಚಾರಣೆಯನ್ನು ಶುಕ್ರವಾರಕ್ಕೆ (ಸೆ.23) ಮುಂದೂಡಿತ್ತು. ಶುಕ್ರವಾರ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಪೀಠ ಸೂತ್ರವನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದ್ದು, ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, 2020-21ನೇ ಸಾಲಿನಲ್ಲಿ ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ಗಳಿಸಿದ ಶೇ 50 ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ರೀ–ಡೂ ಮಾಡಿ ಹೊಸ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಿ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಭ್ರಷ್ಟರಿಂದಲೇ ಅಭಿಯಾನ: ಸಿ.ಎಂ

ಬೆಂಗಳೂರು: 'ಭ್ರಷ್ಟರೇ ಈಗ ಭ್ರಷ್ಟಾಚಾರದ ವಿರುದ್ಧ ಅಭಿಯಾನ ಮಾಡುತ್ತಾರಂತೆ ಮಾಡಲಿ, ಕೊನೆಗೆ ಸತ್ಯಕ್ಕೇ ಜಯ ಸಿಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಲಾಪ ಮುಂದೂಡಿಕೆಯಾದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರ ಪತ್ರವೊಂದನ್ನು ಇಟ್ಟುಕೊಂಡು ಒಂದು ವರ್ಷದಿಂದ ತುತ್ತೂರಿ ಊದುತ್ತಿದ್ದಾರೆ. ಈವರೆಗೆ ಒಂದು ಸಣ್ಣ ದೂರನ್ನಾದರೂ ದಾಖಲಿಸಿ ಸೂಕ್ತ ದಾಖಲೆ ನೀಡಬೇಕಿತ್ತಲ್ಲ. ಇಲ್ಲಿಯವರೆಗೆ ಯಾಕೆ ದಾಖಲೆಗಳನ್ನು ಕೊಟ್ಟಿಲ್ಲ? ಲಂಚ ಕೊಡಲು ಎಲ್ಲಿಂದ, ಯಾರಿಂದ ಒತ್ತಡ ಬಂದಿತ್ತು ಎಂಬ ಬಗ್ಗೆ ಸಣ್ಣ ಚೀಟಿಯಲ್ಲಿ ದೂರು ಕೊಡಲಿ ತನಿಖೆ ಮಾಡಿಸುತ್ತೇನೆ. ಇಲ್ಲವೇ ಲೋಕಾಯುಕ್ತಕ್ಕಾದರೂ ದೂರು ಕೊಡಲಿ' ಎಂದು ಬೊಮ್ಮಾಯಿ ಸವಾಲು ಹಾಕಿದರು.

'ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ನಡೆದ ಹಲವು ಹಗರಣಗಳ ಬಗ್ಗೆ ಶಾಸಕ ಕೆ.ಆರ್.ರಮೇಶ್ ಕುಮಾರ್ ಸೇರಿದಂತೆ ಅವರದ್ದೇ ಪಕ್ಷದ ಹಲವರು ಮಾತನಾಡಿದ್ದಾರೆ. ಅವರ ಪಕ್ಷದ ಕಚೇರಿಯಲ್ಲಿ ಇಬ್ಬರು ಪದಾಧಿಕಾರಿಗಳು ಮಾತನಾಡಿದ್ದು, ಮಾಧ್ಯಮಗಳಲ್ಲಿ ಬಿತ್ತರವಾಗಿದೆ. ಮೂರು ತಲೆಮಾರಿಗಾಗುವಷ್ಟು ಆಸ್ತಿ ಮಾಡಿದ್ದೇವೆ, ಗಾಂಧಿ ಕುಟುಂಬದ ಋಣದಲ್ಲಿದ್ದೇವೆ ಎಂದು ರಮೇಶ್‌ಕುಮಾರ್ ಬಹಿರಂಗವಾಗಿಯೇ ಹೇಳಿದ್ದರು' ಎಂದು ಬೊಮ್ಮಾಯಿ ವಂಗ್ಯವಾಡಿದರು.

'ಶೇ 40 ಲಂಚ ಯಾರು ಯಾರಿಗೆ ಕೊಟ್ಟಿದ್ದಾರೆ ಎಂಬುದನ್ನು ಸಿದ್ದರಾಮಯ್ಯ ಹೇಳಬೇಕು. ವಿಧಾನಸಭೆಯಲ್ಲಿ ಈ ವಿಷಯವನ್ನು ಮೊದಲೇ ಪ್ರಸ್ತಾಪಿಸಬಹುದಿತ್ತು. ಕೊನೆಯಲ್ಲಿ ತಂದಿದ್ದು ಏಕೆ?' ಎಂದು ಪ್ರಶ್ನಿಸಿದರು.

ಬಿಎಸ್‌ವೈ ವಿರುದ್ಧ ತನಿಖೆ: ಸುಪ್ರೀಂ ಕೋರ್ಟ್ ತಡೆ

ಒಂದನೇ ಪುಟದಿಂದ

ಲಂಚ ಪಡೆದ ಆರೋಪದ ಮೇಲೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ ಸೇರಿದಂತೆ ಒಂಬತ್ತು ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲು ಹೈಕೋರ್ಟ್ ಸೂಚಿಸಿತ್ತು. ಲೋಕಾಯುಕ್ತ ಪೊಲೀಸರು ಕಳೆದ ಶುಕ್ರವಾರ ಎಫ್‌ಐಆರ್ ದಾಖಲಿಸಿದ್ದರು.

ಯಡಿಯೂರಪ್ಪ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ, ಅವರ ಮಗ ಶಶಿಧರ ಮರಡಿ, ವಿರುಪಾಕ್ಷಪ್ಪ ಅವರ ಅಳಿಯ ಸಂಜಯ್ ಶ್ರೀ, ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ, ಐಎಎಸ್ ಅಧಿಕಾರಿ ಜಿ.ಸಿ. ಪ್ರಕಾಶ್ ಮತ್ತು 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ.ರವಿ ಇತರ ಆರೋಪಿಗಳು. ಬಿಎಸ್‌ವೈ ವಿರುದ್ಧದ ತನಿಖೆಗೆ ನ್ಯಾಯಪೀಠ ತಡೆ ನೀಡಿದೆ. ಈ ತಡೆಯಾಜ್ಞೆ ಉಳಿದ ಆರೋಪಿಗಳ ತನಿಖೆಗೆ ಅಡ್ಡಿಯಾಗುವುದಿಲ್ಲ.

ಬೆಂಗಳೂರು ಪೂರ್ವ ತಾಲ್ಲೂಕಿನ ಕೋನದಾಸನಪುರದಲ್ಲಿ ಬಿಡಿಎ ನಿರ್ಮಿಸುತ್ತಿರುವ ಬಹುಮಹಡಿ ವಸತಿ ಸಮುಚ್ಚಯದ ಕಾಮಗಾರಿ ಗುತ್ತಿಗೆ ಸಂಬಂಧ ಚಂದ್ರಕಾಂತ್ ರಾಮಲಿಂಗಂ ಅವರಿಂದ ಇತರೆ ಆರೋಪಿಗಳು ಒಟ್ಟು ₹29.5 ಕೋಟಿ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಟಿ.ಜೆ. ಅಬ್ರಹಾಂ ದೂರು ಸಲ್ಲಿಸಿದ್ದರು.

ಸುರ್ಜೇವಾಲ, ಡಿಕೆಶಿ, ಸಿದ್ದರಾಮಯ್ಯ ಭಾಗಿ • ಚಿತ್ರ ಅಂಟಿಸಿದವರ ಬಂಧನ, ಬಿಡುಗಡೆ

'ಪೇಸಿಎಂ' ಭಿತ್ತಿಚಿತ್ರ ಅಂಟಿಸಿದ ಕಾಂಗ್ರೆಸ್ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ನಿರ್ಬಂಧ ಕ್ರಮಗಳ ಮಧ್ಯೆಯೂ 'ಪೇಸಿಎಂ' ಅಭಿಯಾನವನ್ನು ಕಾಂಗ್ರೆಸ್ ಮತ್ತಷ್ಟು ತೀವ್ರಗೊಳಿಸಿದೆ.

ಭಿತ್ತಿಚಿತ್ರ ಹಿಡಿದ ಶುಕ್ರವಾರ ಸಂಜೆ ಮೆರವಣಿಗೆ ನಡೆಸಿದ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರೇಸ್‌ಕೋರ್ಸ್ ರಸ್ತೆಯಲ್ಲಿನ ರೇಸ್‌ಕೋರ್ಸ್‌ನ ಗೋಡೆಗೆ ಭಿತ್ತಿಚಿತ್ರ ಅಂಟಿಸಿದರು.

ರಾಜ್ಯದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ 'ಶೇ 40ರ ಕಮಿಷನ್ ಸರ್ಕಾರ' ಎಂದು ಆರೋಪಿಸಿ ಅಭಿಯಾನ ನಡೆಸುತ್ತಿರುವ ಕಾಂಗ್ರೆಸ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವಚಿತ್ರ ಇರುವ ಕ್ಯೂಆರ್ ಕೋಡ್ ಸಿದ್ಧಪಡಿಸಿ 'ಪೇಸಿಎಂ– ಶೇ 40ರಷ್ಟು ಲಂಚ ಸ್ವೀಕರಿಸಲಾಗುವುದು' ಎಂದು ಭಿತ್ತಿಪತ್ರ ಅಂಟಿಸಿ ಅಭಿಯಾನ ನಡೆಸುತ್ತಿದೆ.

ಈ ರೀತಿ ಭಿತ್ತಿಪತ್ರ ಅಂಟಿಸಿದ ಆರೋಪದ ಮೇಲೆ ಕಾಂಗ್ರೆಸ್‌ನ ಮಾಹಿತಿ ತಂತ್ರಜ್ಞಾನ ಕೋಶದ ಬಿ.ಆರ್. ನಾಯ್ಡು ಸೇರಿದಂತೆ ಹಲವರನ್ನು ಬಂಧಿಸಲಾಗಿತ್ತು. 'ನಾಳೆ ನಾವೇ ಭಿತ್ತಿಚಿತ್ರ ಅಂಟಿಸುತ್ತೇವೆ, ತಾಕತ್ತಿದ್ದರೆ ಬಂಧಿಸಲಿ' ಎಂದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಸವಾಲು ಹಾಕಿದ್ದರು.

'ಭಿತ್ತಿಚಿತ್ರಗಳನ್ನು ಕಾಂಗ್ರೆಸ್ ಅಂಟಿಸದಂತೆ ತಡೆಯಬೇಕು. ಎಲ್ಲಿಯಾದರೂ ಕಂಡುಬಂದರೆ ತೆರವುಗೊಳಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದ್ದರು. ಹಾಗಾಗಿ, ನಗರದ ಎಲ್ಲೆಡೆ ಪೊಲೀಸ್ ಗಸ್ತು ವಾಹನಗಳನ್ನು ನಿಯೋಜಿಸಲಾಗಿತ್ತು. ಪೊಲೀಸರ ಕಣ್ಗಾವಲ ಮಧ್ಯೆಯೂ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಕೆಲವೆಡೆ ಭಿತ್ತಿಚಿತ್ರ ಅಂಟಿಸುವಲ್ಲಿ ಯಶಸ್ವಿಯಾದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ವಿಧಾನಸಭೆ ವಿರೋಧಪಕ್ಷದ ಮುಖ್ಯ ಸಚೇತಕ ಅಜಯ್ ಧರ್ಮಸಿಂಗ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಕೆಪಿಸಿಸಿ ಸಂವಹನ ವಿಭಾಗದ ಪ್ರಿಯಾಂಕ್ ಖರ್ಗೆ, ಶಾಸಕರಾದ ರಿಜ್ವಾನ್ ಅರ್ಷದ್, ಪ್ರಕಾಶ್ ರಾಥೋಡ್ ಮತ್ತಿತರರು ಇದ್ದರು. ರೇಸ್‌ಕೋರ್ಸ್ ರಸ್ತೆಯಲ್ಲಿ ಭಿತ್ತಿಚಿತ್ರ ಅಂಟಿಸಿದ ಎಲ್ಲರನ್ನೂ ಪೊಲೀಸರು ವಶಕ್ಕೆ ಪಡೆದ ಪೊಲೀಸರು, ನಂತರ ಬಿಡುಗಡೆ ಮಾಡಿದರು.

ನೆಲಮಂಗಲದ ಬಿಜೆಪಿ ಕಚೇರಿ ಗೋಡೆಯ ಮೇಲೆ ಪೇಸಿಎಂ ಭಿತ್ತಿಚಿತ್ರವನ್ನು ಕಾಂಗ್ರೆಸ್ ಕಾರ್ಯಕರ್ತರು ಅಂಟಿಸಿದ್ದರು. ಆಗ ಗುಂಪನ್ನು ಅಟ್ಟಿಸಿಕೊಂಡು ಹೋದ ಪೊಲೀಸರು, ಮೂವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು. ಭಿತ್ತಿಚಿತ್ರ ತೆರವುಗೊಳಿಸಿದರು.



ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿ 'ಪೇಸಿಎಂ' ಭಿತ್ತಿಚಿತ್ರ ಅಂಟಿಸಿದ ಡಿ.ಕೆ. ಶಿವಕುಮಾರ್. ಸಿದ್ದರಾಮಯ್ಯ, ರಣದೀಪ್‌ಸಿಂಗ್ ಸುರ್ಜೇವಾಲ ಇದ್ದಾರೆ –ಪಿಟಿಐ ಚಿತ್ರ

ಕೆಟ್ಟು ನಿಂತ ಬಸ್; ಕಾಂಗ್ರೆಸ್ ಟ್ವೀಟ್

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ ಪೇಸಿಎಂ ಅಭಿಯಾನದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರು, ಕಾರ್ಯಕರ್ತರನ್ನು ಹತ್ತಿಸಿಕೊಂಡ ಬಸ್‌ನ ಬ್ರೇಕ್ ವಿಫಲವಾಗಿ 20 ನಿಮಿಷ ರಸ್ತೆ ವಿಭಜಕಕ್ಕೆ ತಾಗಿಕೊಂಡು ನಿಂತಿತ್ತು. ನಂತರ ನಿಧಾನವಾಗಿ ಮುಂದೆ ಸಾಗಿತು.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಬಂಧಿಸಲು ನೀವು ಕಳುಹಿಸಿದ ಬಸ್ ಥೇಟ್ ನಿಮ್ಮ 40 ಪರ್ಸೆಂಟ್ ಸರ್ಕಾರವನ್ನೇ ಪ್ರತಿನಿಧಿಸುತ್ತಿತ್ತು. ಮುಂದೆ ಚಲಿಸದ ಬಸ್– ಮುನ್ನಡೆಯದ ಸರ್ಕಾರ, ಬ್ರೇಕ್ ಇಲ್ಲದ ಬಸ್– ಬ್ರೇಕ್ ಇಲ್ಲದ ಭ್ರಷ್ಟಾಚಾರ, ಕೆಟ್ಟುಹೋದ ಬಸ್– ಕೆಟ್ಟುಹೋದ ಆಡಳಿತ, ಡಬಲ್ ಎಂಜಿನ್ ಅಲ್ಲ–ಡಕೋಟಾ ಎಂಜಿನ್ ಎಂದು ಛೇಡಿಸಲಾಗಿದೆ.

ಜಾಲತಾಣಕ್ಕೂ ಹಬ್ಬಿದ ಅಭಿಯಾನ

ಸಾಮಾಜಿಕ ಜಾಲತಾಣಗಳಲ್ಲೂ ಪೇಸಿಎಂ ಅಭಿಯಾನ ತೀವ್ರಗೊಳಿಸಲಾಗಿದೆ. ರಾಜ್ಯದ ಹಲವು ಸಚಿವರು, ಶಾಸಕರು, ಪ್ರಮುಖ ನಾಯಕರು ಕೈಯಲ್ಲಿ ಮೊಬೈಲ್ ಹಿಡಿದು, 'ಪೇಸಿಎಂ' ಪ್ರದರ್ಶಿಸುವ ಚಿತ್ರಗಳು ಸಾಕಷ್ಟು ಹರಿದಾಡಿವೆ.
ಚಿತ್ರದ ಮೇಲ್ಭಾಗದಲ್ಲಿ ಪಿಎಸ್‌ಐ ಹುದ್ದೆಗಳ ಅಕ್ರಮ, ಕೋವಿಡ್ ಸಾಮಗ್ರಿಗಳ ಖರೀದಿ ಸೇರಿದಂತೆ ವಿವಿಧ ಹಗರಣಗಳ ಹೆಸರು, ದರ ನಮೂದಿಸಲಾಗಿದೆ. ಕೆಳಭಾಗದಲ್ಲಿ 'ಡೀಲ್ ನಿಮ್ದು ಕಮಿಷನ್ ನಮ್ದು' ಎಂಬ ಬರಹ ಹಾಕಲಾಗಿದೆ.



ಕಾಂಗ್ರೆಸ್ ಚಾಟಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ಆರಂಭಿಸಿರುವ ಅಭಿಯಾನದಲ್ಲಿ ಮೊಬೈಲ್ ಫೋನ್ ಹಿಡಿದು ಪೇಸಿಎಂ ಪ್ರದರ್ಶಿಸುತ್ತಿರುವಂತೆ ಚಿತ್ರಿಸಿರುವ ಬಿಜೆಪಿ ನಾಯಕರ ಚಿತ್ರಗಳು



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 233

ಪರೀಕ್ಷೆ ಗೆದ್ದ ಪಾರ್ವತಿ

ಸಪ್ತರ್ಷಿಗಳು 'ನಾರದ ಯಾರನ್ನು ಬೇಕಾದರೂ ಮರಳು ಮಾಡಿ ಸನ್ಯಾಸಿಯಾಗಿಸಬಲ್ಲ ನಿಸ್ಸೀಮ. ಅಂತಹ ಕಪಟಿಯ ಉಪದೇಶವನ್ನು ನಂಬಿ ವೃಥಾ ಘೋರ ತಪಸ್ಸನ್ನು ಮಾಡುತ್ತಲಿರುವೆ. ಯಾವನಿಗಾಗಿ ನೀನು ಇಂತಹ ಘೋರ ತಪಸ್ಸನ್ನು ಮಾಡುತ್ತಲಿರುವೆಯೋ ಆ ಶಿವನು ಸದಾ ಉದಾಸಿ; ಅವನಿಗೆ ಯಾವ ವಿಕಾರಗಳೂ ಇಲ್ಲ. ಅವನು ಮನ್ಮಥನ ಶತ್ರು. ಶಿವನ ಶರೀರವು ಅಮಂಗಳವಾದುದು. ಅವನಿಗೆ ಮನೆಯಿಲ್ಲ, ಕುಲವಿಲ್ಲ, ನೀಚವೇಷವುಳ್ಳವನು. ಸದಾ ಪ್ರೇತಭೂತಗಳೊಡನೆ ಇರುವವನು. ದಿಗಂಬರನಾದರೂ ಅವನಿಗೆ ಲಜ್ಜೆಯೇ ಇಲ್ಲ. ಇಂತಹವನನ್ನು ಪಡೆದು ನಿನಗೇನು ಸುಖವು ಲಭಿಸುವುದು? ಮಹಾಸಾಧ್ವಿಯಾದ ದಕ್ಷಸುತೆ ಸತೀದೇವಿಯನ್ನು ಮದುವೆಯಾಗಿದ್ದ, ಕೆಲವು ದಿನಗಳವರೆಗಾದರೂ ಸರಿಯಾಗಿ ಸಂಸಾರ ಮಾಡಲಿಲ್ಲ. ಮಹಾವಿರಕ್ತನಾದ ಶಿವನಿಗೆ ಯಾರ ಸಹವಾಸವೂ ಸೇರದು. ಈಗಲಾದರೂ ನಮ್ಮ ಮಾತನ್ನು ಕೇಳು. ವಿಷ್ಣುವು ನಿನಗೆ ಯೋಗ್ಯವಾದ ವರ. ಹರಿಯೊಡನೆ ನಿನಗೆ ಮದುವೆಯನ್ನು ಮಾಡಿಸುವೆವು. ನಿನ್ನ ಜೀವನ ಸುಖವಾಗುವುದು' ಎಂದರು.

ಗಿರಿಜೆ ಹೇಳಿದಳು, 'ಓ ಮುನಿಗಳೇ, ನನ್ನ ಶರೀರವು ಪರ್ವತದಿಂದ ಜನಿಸಿದುದು. ಆದಕಾರಣ ಅದು ಸ್ವಭಾವತಃ ಕಠಿಣವಾದುದು. ಅದು ತನ್ನ ಹಠವನ್ನು ಎಂದಿಗೂ ಬಿಡಲಾರದು. ನೀವು ನನ್ನನ್ನು ತಡೆಯುವ ಕೆಟ್ಟ ಪ್ರಯತ್ನ ಮಾಡಬೇಡಿ. ನಾರದಮುನಿಯ ಮಾತು ನನಗೆ ಹಿತವಾಗಿದೆ. ಮನೆಯಲ್ಲಿರಲಿ ಅಥವಾ ಇಲ್ಲದಿರಲಿ, ಅದರಿಂದ ನನಗೆ ಸುಖವಾಗಲಿ ಅಥವಾ ಆಗದಿರಲಿ, ನನ್ನ ಹಠವನ್ನು ಮಾತ್ರ ಬಿಡಲಾರೆ. ನೀವೀಗ ನನಗೆ ಹೇಳಿದ ಮಾತುಗಳು ಸರಿಯಾದುದಲ್ಲ. ವಿಷ್ಣು ಗುಣಗಳುಳ್ಳವನು; ಅದರಿಂದ ಅವನು ವಿಹಾರ ಮಾಡುವನು. ಆದರೆ ಶಿವನು ನಿರ್ಗುಣ; ಪರಬ್ರಹ್ಮಸ್ವರೂಪ. ಅವನಿಗೆ ವಿಕಾರಗಳಿಲ್ಲ. ಭಕ್ತರಿಗಾಗಿ ಅವನು ಸಗುಣರೂಪವನ್ನು ಕೈಗೊಳ್ಳುವವನಾದರೂ, ಅವನು ತನ್ನ ನಿಜವಾದ ಪ್ರಭುತ್ವವನ್ನು ತೋರಿಸಲು ಇಚ್ಛಿಸುವುದಿಲ್ಲ. ಶಿವನು ಅವಧೂತ(ದಿಗಂಬರ)ರ ಸ್ವರೂಪವನ್ನು ಧರಿಸಿ, ಆತ್ಮಾನಂದವನ್ನು ಅನುಭವಿಸುತ್ತಾ, ಪರಮಹಂಸರ ಮಾರ್ಗವನ್ನು ಅನುಸರಿಸುವವನು. ಅಜ್ಞಾನಿಗಳಿಗೆ ಮಾತ್ರ ವೇಷಭೂಷಣ ಮೊದಲಾದ ಅಲಂಕಾರಗಳಲ್ಲಿ ಪ್ರೀತಿಯುಂಟಾಗುವುದು. ಆದರೆ ಜ್ಞಾನರೂಪನಾದ ಪರಮೇಶ್ವರನಿಗೆ ಆ ರೀತಿ ಇಲ್ಲ. ಅವನ ಗತಿಯನ್ನು ತಿಳಿಯುವುದು ಅಸಾಧ್ಯ. ಅವನು ವಿರಾಟ್ಪುರುಷ. ಇಂಥ ಶಿವನು ನನ್ನನ್ನು ಮದುವೆಯಾಗಲು ಇಚ್ಛಿಸದಿದ್ದರೆ ನಾನು ಸದಾ ವಿವಾಹವಿಲ್ಲದೇ ಬ್ರಹ್ಮಚಾರಿಣಿಯಾಗಿಯೇ ಇರುವೆ. ಸೂರ್ಯನು ಪಶ್ಚಿಮ-ದಿಕ್ಕಿನಲ್ಲಿ ಉದಯಿಸಬಹುದು. ಆದರೆ ನನ್ನ ಪ್ರತಿಜ್ಞೆಯ ಪಥ ಬದಲಾಗದು. ಮೇರುಪರ್ವತವು ಚಲಿಸಬಹುದು, ಅಗ್ನಿಯು ಶೀತಸ್ವಭಾವ ರೂಢಿಸಿಕೊಳ್ಳಬಹುದು, ಕಮಲವು ಬೆಟ್ಟದ ಶಿಖರದ ಕಲ್ಲಿನ ಮೇಲೆ ಹುಟ್ಟಲೂ ಬಹುದು. ಆದರೆ ನನ್ನ ಹಠ ಮಾತ್ರ ಎಂದಿಗೂ ವಿಚಲಿತವಾಗುವುದಿಲ್ಲ' ಎಂದಳು ದೃಢ ದನಿಯಲ್ಲಿ.

ಗಿರಿಜೆಯ ನಿರ್ಧಾರ ಕೇಳಿದ ಸಪ್ತರ್ಷಿಗಳಿಗೆ ಬಹಳ ಸಂತೋಷವಾಯಿತು. ಅವರು ಜಯಧ್ವನಿ ಮಾಡುತ್ತಾ, ಗಿರಿಜೆಗೆ ಅವಳ ಇಷ್ಟ ಸಿದ್ಧಿಸಲೆಂಬ ಆಶೀರ್ವಾದ ಮಾಡಿದರು. ಬಳಿಕ ಮುನಿಗಳು ಶಿವನ ಬಳಿಗೆ ಬಂದು ನಡೆದ ಸಮಾಚಾರವನ್ನೆಲ್ಲಾ ತಿಳಿಸಿದರು. ಪಾರ್ವತಿಯ ತಪಸ್ಸು ಪವಿತ್ರವಾದುದು. ಇದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಶಿವನಿಗೆ ಹೇಳಿ, ಅವನ ಅಪ್ಪಣೆಯನ್ನು ಸ್ವರ್ಗಲೋಕಕ್ಕೆ ತೆರಳಿದರು.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

ಕೇರಳದಲ್ಲಿ ಹಲವೆಡೆ ದಾಂದಲೆ, ವಾಹನ, ಅಂಗಡಿಗಳು ಧ್ವಂಸ

ಪಿಎಫ್‌ಐ ಬಂದ್ ವೇಳೆ ಹಿಂಸೆ

ತಿರುವನಂತಪುರ/ಕೊಯಮತ್ತೂರು (ಪಿಟಿಐ): ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ವಿರುದ್ಧದ ಕ್ರಮವನ್ನು ಖಂಡಿಸಿ ಕರೆ ನೀಡಿದ್ದ ಕೇರಳ ಬಂದ್ ಹಿಂಸಾಚಾರಕ್ಕೆ ತಿರುಗಿದೆ. ಕೆಲವೆಡೆ ದಾಂದಲೆ ನಡೆಸಲಾಗಿದೆ. ಕೇರಳ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು, ಆಂಬುಲೆನ್ಸ್‌ಗಳಿಗೆ ಹಾನಿ ಮಾಡಲಾಗಿದೆ. ಪೊಲೀಸರು ಮತ್ತು ಸಾಮಾನ್ಯ ಜನರೂ ಗಾಯಗೊಂಡಿದ್ದಾರೆ. ಅಂಗಡಿಗಳನ್ನು ಧ್ವಂಸ ಮಾಡಲಾಗಿದೆ.

ದೇಶದ 15 ರಾಜ್ಯಗಳ ವಿವಿಧ ಸ್ಥಳಗಳಲ್ಲಿ ಶೋಧ ನಡೆಸಿ ಪಿಎಫ್‌ಐಯ ಸುಮಾರು 100 ಜನರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಗುರುವಾರ ಬಂಧಿಸಿದೆ. ಅದನ್ನು ಖಂಡಿಸಿ ವಿವಿಧ ರಾಜ್ಯಗಳಲ್ಲಿ ಶುಕ್ರವಾರ ಪ್ರತಿಭಟನೆ ನಡೆದಿದೆ.

ಬಿಜೆಪಿ ಮತ್ತು 'ಹಿಂದೂ ಮುನ್ನಣಿ'ಯ ಮುಖಂಡರಿಗೆ ಸೇರಿದ ಎರಡು ಕಾರುಗಳು ಮತ್ತು ಎರಡು ಆಟೊರಿಕ್ಷಾಗಳಿಗೆ ತಮಿಳುನಾಡಿನ ಪೊಲ್ಲಾಚಿಯಲ್ಲಿ ಹಾನಿ ಮಾಡಲಾಗಿದೆ. ಹಾನಿ ಮಾಡಿದವರು ಯಾರು ಎಂಬುದು ಗೊತ್ತಾಗಿಲ್ಲ. ಬಿಜೆಪಿ ಕಚೇರಿ ಮತ್ತು ಬಟ್ಟೆ ಅಂಗಡಿಯೊಂದಕ್ಕೆ ಗುರುವಾರ ರಾತ್ರಿ ಪೆಟ್ರೋಲ್ ಬಾಂಬ್ ಎಸೆಯಲಾಗಿದೆ.

ಬಿಜೆಪಿ ಕಾರ್ಯಕರ್ತ ಕುಮಾರನ್ ನಗರ್ ಎಂಬವರ ಮನೆಯ ಆವರಣದಲ್ಲಿ ನಿಲ್ಲಿಸಿದ್ದ ಕಾರ್‌ಗೆ ಪ್ಲಾಸ್ಟಿಕ್‌ನಲ್ಲಿ ಡೀಸೆಲ್ ತುಂಬಿ ಎಸೆದು ಬೆಂಕಿ ಹಚ್ಚಲು ದುಷ್ಕರ್ಮಿಗಳು ಯತ್ನಿಸಿದ್ದಾರೆ. ಆದರೆ ಬೆಂಕಿ ಹತ್ತಿಕೊಂಡಿಲ್ಲ. ಹಾಗಾಗಿ ಕಾರಿನ ಗಾಜುಗಳನ್ನು ಒಡೆದು ಹಾಕಿದ್ದಾರೆ.

ಹಿಂದೂ ಮುನ್ನಣಿಯ ಸದಸ್ಯರಾದ ಇಬ್ಬರ ಮನೆಯ ಮುಂದೆ ನಿಲ್ಲಿಸಲಾಗಿದ್ದ ಆಟೊರಿಕ್ಷಾಗಳಿಗೂ ಹಾನಿ ಮಾಡಲಾಗಿದೆ. ಪರಿಸ್ಥಿತಿ ಪ್ರಕ್ಷುಬ್ಧವಾಗಿರುವ ಕಾರಣ ಕ್ಷಿಪ್ರ ಕಾರ್ಯಪಡೆಯು ಕೊಯಮತ್ತೂರಿನಲ್ಲಿ ಪಥ ಸಂಚಲನ ನಡೆಸಿದೆ.

ಬಂದ್ ಬೆಂಬಲಿಗರು ಕೇರಳದ ಕೋಯಿಕ್ಕೋಡ್, ಕೋಟಯಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಅಂಗಡಿಗಳ ಮೇಲೆ ದಾಳಿ ನಡೆಸಿದ್ದಾರೆ. ಕೇರಳದ ವಿವಿಧ ನಗರಗಳಲ್ಲಿ ರಸ್ತೆಯಲ್ಲಿ ಟೈರ್‌ಗಳನ್ನು ಹೊತ್ತಿಸಿ, ರಸ್ತೆ ತಡೆ ನಡೆಸಲಾಗಿದೆ. ಕೇರಳ ಸಾರಿಗೆ ಸಂಸ್ಥೆಯ 50ಕ್ಕೂ ಹೆಚ್ಚು ಬಸ್‌ಗಳು ಹಾನಿಗೊಂಡಿವೆ. ಹತ್ತಕ್ಕೂ ಹೆಚ್ಚು ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಾರಿಗೆ ಸಂಸ್ಥೆ ಬಸ್‌ಗಳ ಚಾಲಕರು ಹೆಲ್ಮೆಟ್ ಧರಿಸಿ ಬಸ್ ಚಲಾಯಿಸುತ್ತಿದ್ದುದು ಕಂಡು ಬಂತು.

ಕಣ್ಣೂರು ಜಿಲ್ಲೆಯ ಮಟ್ಟನ್ನೂರ್ ಎಂಬಲ್ಲಿ ಬಿಜೆಪಿ ಕಚೇರಿಗೆ ಪೆಟ್ರೋಲ್ ಬಾಂಬ್ ಎಸೆಯಲಾಗಿದೆ, ಪತ್ರಿಕೆ ಸಾಗಾಟದ ವಾಹನಗಳ ಮೇಲೆಯೂ ಪೆಟ್ರೋಲ್ ಬಾಂಬ್ ಎಸೆಯಲಾಗಿದೆ. ಕೋಯಿಕ್ಕೋಡ್ ಮತ್ತು ಕಣ್ಣೂರ್‌ನಲ್ಲಿ ನಡೆದ ಕಲ್ಲುತೂರಾಟದಲ್ಲಿ ಕ್ರಮವಾಗಿ 15 ವರ್ಷದ ಬಾಲಕಿ ಮತ್ತು ಆಟೊ ಚಾಲಕರೊಬ್ಬರು ಗಾಯಗೊಂಡಿದ್ದಾರೆ.

ಪುಣೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಪಿಎಫ್‌ಐನ 35ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ತಿರುವನಂತಪುರದಲ್ಲಿ ಕೇರಳ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದರ ಗಾಜನ್ನು ಒಡೆಯಲಾಗಿದೆ —ಪಿಟಿಐ ಚಿತ್ರ

> ಪಿಎಫ್‌ಐ ಮತ್ತು ಜಿಹಾದಿ ಸಂಘಟನೆಗಳು ಬಂದ್‌ಗೆ ಕರೆ ನೀಡಿವೆ. ಕಾಂಗ್ರೆಸ್ ತನ್ನ ಪಾದಯಾತ್ರೆ ನಿಲ್ಲಿಸಿದೆ. ಇದರಷ್ಟು ಸಣ್ಣತನ ಮತ್ತು ನಾಚಿಕೆಗೇಡು ಬೇರೆ ಏನಿಲ್ಲ
> **ಕಪಿಲ್ ಮಿಶ್ರಾ,** ಬಿಜೆಪಿ ಮುಖಂಡ

> ಯಾತ್ರೆಗೆ ಪ್ರತಿವಾರವೂ ಒಂದು ದಿನದ ವಿರಾಮ ಇದೆ. ಈಗ ಮೋಹನ್ ಭಾಗವತ್ ಅವರು ಪಿಎಫ್‌ಐ ಕ್ಷಮೆ ಯಾಚನೆ ಯಾತ್ರೆ ಕೈಗೊಳ್ಳಲಿದ್ದಾರೆಯೇ?
> **ಪವನ್ ಖೇರಾ,** ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ

ಪಿಎಫ್‌ಐ ಕಾರ್ಯಕರ್ತರ ಮೇಲೆ ಹಲ್ಲೆ

ಪಿಎಫ್‌ಐನ ಕಾರ್ಯಕರ್ತರ ಗುಂಪಿನ ಮೇಲೆ ಕಣ್ಣೂರಿನಲ್ಲಿ ಸ್ಥಳೀಯರು ದಾಳಿ ನಡೆಸಿದ್ದಾರೆ. ಅಂಗಡಿಗಳನ್ನು ಬಲವಂತವಾಗಿ ಮುಚ್ಚಿಸಲು ಯತ್ನಿಸಿದವರನ್ನು ಸ್ಥಳೀಯರು ಥಳಿಸಿದರು. ಅವರಲ್ಲಿ ಒಬ್ಬನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು.

ಕ್ರಮ ಸಮಂಜಸ: ಆರ್‌ಎಸ್‌ಎಸ್‌ನ ಇಂದ್ರೇಶ್

ಪಿಎಫ್‌ಐ ವಿರುದ್ಧ ಎನ್‌ಐಎ ಕೈಗೊಂಡಿರುವ ಕ್ರಮಗಳು 'ಸಮಂಜಸ' ಎಂದು ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್ ಹೇಳಿದ್ದಾರೆ.

'1948, 1975 ಮತ್ತು 1992ರಲ್ಲಿ ಸರ್ಕಾರಗಳು ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ್ದವು. ಆದರೆ, ಸಂಘವು ಹಿಂಸೆಯ ಮಾರ್ಗ ಹಿಡಿಯಲಿಲ್ಲ. ಸಂಘವು ಶಾಂತಿಯುತವಾಗಿ, ಸಾಂವಿಧಾನಿಕವಾಗಿ ಮತ್ತು ನ್ಯಾಯಬದ್ಧವಾಗಿ ಸುಳ್ಳನ್ನು ಪ್ರತಿರೋಧಿಸಿ, ಗೆದ್ದಿದೆ' ಎಂದು ಕುಮಾರ್ ಹೇಳಿದ್ದಾರೆ.

ಪಿಎಫ್‌ಐ, ಕಾಶ್ಮೀರದಲ್ಲಿರುವ ಭಯೋತ್ಪಾದಕರು, ಛತ್ತೀಸಗಡದಲ್ಲಿರುವ ನಕ್ಸಲರ ವಿರುದ್ಧ ಕ್ರಮ ಕೈಗೊಳ್ಳುವುದು ಸಮಂಜಸವೇ ಆಗಿದೆ. ಹಿಂಸಾತ್ಮಕ ಮತ್ತು ದೇಶವಿರೋಧಿ ಶಕ್ತಿಗಳ ವಿರುದ್ಧ ಎಲ್ಲರೂ ಸರ್ಕಾರವನ್ನು ಬೆಂಬಲಿಸಬೇಕು ಎಂದು ಅವರು ಹೇಳಿದ್ದಾರೆ.

ಬಂದ್ ನ್ಯಾಯಾಂಗ ನಿಂದನೆ: ಹೈಕೋರ್ಟ್

ಪಿಎಫ್‌ಐ ನಡೆಸಿದ ಕೇರಳ ಬಂದ್ ನ್ಯಾಯಾಂಗ ನಿಂದನೆಯಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಇಂತಹ ಬಂದ್‌ಗಳ ಮೇಲೆ 2019ರಲ್ಲಿಯೇ ನಿಷೇಧ ಹೇರಲಾಗಿದೆ ಎಂದು ಕೋರ್ಟ್ ಹೇಳಿದೆ. ನ್ಯಾಯಾಲಯವು ಸ್ವಯಂಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದೆ.

'ಬಂದ್ ನಡೆಸಲು ಯಾವ ಪ್ರಕ್ರಿಯೆ ಅನುಸರಿಸಬೇಕು ಎಂದು ಈ ಹಿಂದೆ ನೀಡಿದ್ದ ಆದೇಶದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಶುಕ್ರವಾರದ ಬಂದ್‌ಗೆ ಸಂಬಂಧಿಸಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಹಾಗಾಗಿ ಇದು ನ್ಯಾಯಾಂಗ ನಿಂದನೆ ಎಂದು ಮೇಲ್ನೋಟಕ್ಕೆ ಕಾಣಿಸುತ್ತದೆ' ಎಂದು ನ್ಯಾಯಮೂರ್ತಿ ಎ.ಕೆ. ಜಯಶಂಕರನ್ ನಂಬಿಯಾರ್ ಹೇಳಿದ್ದಾರೆ.

ಗೆಹಲೋತ್ ಅಧ್ಯಕ್ಷರಾದರೆ, ಸಿ.ಎಂ ಯಾರು?

ಪ್ರಜಾವಾಣಿ ವಾರ್ತೆ

ನವದೆಹಲಿ/ಕೊಚ್ಚಿ: ತಾವು ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದರೆ, ರಾಜಸ್ಥಾನದ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದನ್ನು ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಮತ್ತು ರಾಜ್ಯ ಘಟಕದ ಅಧ್ಯಕ್ಷರು ಕೂತು ನಿರ್ಧರಿಸಲಿದ್ದಾರೆ ಎಂದು ಅಶೋಕ್ ಗೆಹಲೋತ್ ಹೇಳಿದ್ದಾರೆ. ರಾಜಸ್ಥಾನದ ಮುಖ್ಯಮಂತ್ರಿಯಾಗಿ ಸಚಿನ್ ಪೈಲಟ್ ಅವರನ್ನು ಆಯ್ಕೆ ಮಾಡಲು ರಾಹುಲ್ ಗಾಂಧಿ ಉತ್ಸುಕರಾಗಿದ್ದಾರೆ. ಆದರೆ, ತಮಗೆ ನಿಷ್ಠರಾದವರನ್ನು ಅಲ್ಲಿ ಕೂರಿಸಲು ಗೆಹಲೋತ್ ಯತ್ನಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವ ಸವಾಲು ಕಾಂಗ್ರೆಸ್ ಮುಂದೆ ಇದೆ. ಇದರ ಮಧ್ಯೆ ರಾಜಸ್ಥಾನದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ನಿರ್ಧರಿಸುವ ಹೊಸ ಸವಾಲು ಈಗ ಪಕ್ಷಕ್ಕೆ ಎದುರಾಗಿದೆ. ಅಧ್ಯಕ್ಷರ ಚುನಾವಣೆಗೆ ಅಶೋಕ್ ಗೆಹಲೋತ್ ಸ್ಪರ್ಧಿಸಲಿದ್ದಾರೆ ಎಂಬುದು ಖಚಿತವಾದ ನಂತರ, ಮುಖ್ಯಮಂತ್ರಿ ಹುದ್ದೆಯನ್ನೂ ಉಳಿಸಿಕೊಳ್ಳಲು ಅವರು ಬಯಸಿದ್ದರು. ಆದರೆ, ರಾಹುಲ್ ಗಾಂಧಿ ಅವರು ಒಬ್ಬರಿಗೆ ಒಂದೇ ಹುದ್ದೆ ಎಂದು ಹೇಳಿದ್ದರು. ಇದರಿಂದ ಗೆಹಲೋತ್ ತಮ್ಮ ನಿಲುವು ಬದಲಿಸಿದರು.

ಈ ಬಗ್ಗೆ ಇಬ್ಬರು ನಾಯಕರೂ ಸಾಕಷ್ಟು ಚರ್ಚಿಸಿದ್ದಾರೆ. ಭಾರತ್ ಜೋಡೊ ಯಾತ್ರೆಯ ಭಾಗವಾಗಿ ಕೇರಳದಲ್ಲಿರುವ ರಾಹುಲ್ ಗಾಂಧಿ ಅವರನ್ನು ಗೆಹಲೋತ್ ಕೊಚ್ಚಿಯಲ್ಲಿ ಗುರುವಾರ ಭೇಟಿ ಮಾಡಿದ್ದರು. ಭೇಟಿಯ ವೇಳೆ ನಡೆದ ಚರ್ಚೆಯ ಬಗ್ಗೆ ಅಧಿಕೃತ ಮಾಹಿತಿಗಳು ಬಹಿರಂಗವಾಗಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ ಗೆಹಲೋತ್ ಅವರು, 'ಅಧ್ಯಕ್ಷ ಸ್ಥಾನಕ್ಕೆ ನೀವೇ ಸ್ಪರ್ಧಿಸಿ ಎಂದು ರಾಹುಲ್ ಗಾಂಧಿ ಅವರನ್ನು ಮನವೊಲಿಸಲು ಬಂದಿದ್ದೆ. ಆದರೆ ಅವರು, ಗಾಂಧಿ ಕುಟುಂಬದ ಯಾರೂ ಅಧ್ಯಕ್ಷರಾಗಬಾರದು ಎಂದು ಈಗಾಗಲೇ ನಿರ್ಧರಿಸಲಾಗಿದೆ. ನಿರ್ಧಾರವನ್ನು ಬದಲಿಸುವುದಿಲ್ಲ ಎಂದು ಹೇಳಿದರು' ಎಂದಿದ್ದಾರೆ.

ಆದರೆ ಮಾತುಕತೆಯ ವೇಳೆ, ಮುಖ್ಯಮಂತ್ರಿ ಹುದ್ದೆಗೆ ಸಚಿನ್ ಪೈಲಟ್ ಅವರನ್ನು ಆಯ್ಕೆ ಮಾಡುವುದರ ಬಗ್ಗೆ ರಾಹುಲ್ ಗಾಂಧಿ ಒಲವು ತೋರಿದ್ದಾರೆ ಎಂದು ಮೂಲಗಳು ಹೇಳಿವೆ. ಸಚಿನ್ ಪೈಲಟ್ ಅವರನ್ನು ಮುಂದಿನ ಮುಖ್ಯ-ಮಂತ್ರಿಯಾಗಿಸುವುದಕ್ಕೆ ಗೆಹಲೋತ್ ಅವರ ಸಹಮತವಿಲ್ಲ. ಅವರು ತಮಗೆ ನಿಷ್ಠರಾದ ಬಿ.ಡಿ.ಕಲ್ಲಾ ಅಥವಾ ಶಾಂತಿ ಕುಮಾರ್ ಧರಿವಾಲ್ ಅವರ ಹೆಸರನ್ನು ಸೂಚಿಸಬಹುದು ಎಂದು ನಿರೀಕ್ಷಿಸಲಾಗಿದೆ. ಈ ಹಿಂದೆ ರಾಹುಲ್ ಅವರ ಆಪ್ತ ವಲಯದಲ್ಲಿದ್ದ ಮತ್ತು ರಾಜಸ್ಥಾನ ವಿಧಾನಸಭೆಯ ಈಗಿನ ಸ್ಪೀಕರ್ ಸಿ.ಪಿ. ಜೋಶಿ ಅವರ ಹೆಸರನ್ನೂ ಗೆಹಲೋತ್ ಪ್ರಸ್ತಾಪಿಸಬಹುದು ಎಂದು ಮೂಲಗಳು ಹೇಳಿವೆ.

'ಹೇಳಿಕೆ ನೀಡಬೇಡಿ'

ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ಸಂಬಂಧಿಸಿದಂತೆ ಯಾರೂ ಹೇಳಿಕೆ ನೀಡಬಾರದು ಎಂದು ಕಾಂಗ್ರೆಸ್ ತನ್ನ ಎಲ್ಲಾ ವಕ್ತಾರರು ಮತ್ತು ಸಂವಹನ ವಿಭಾಗದ ಮುಖ್ಯಸ್ಥರಿಗೆ ಸೂಚನೆ ನೀಡಿದೆ.

ಪಕ್ಷದ ವಕ್ತಾರ ಗೌರವ್ ವಲ್ಲಭ್ ಅವರು ಅಧ್ಯಕ್ಷ ಚುನಾವಣೆಯ ಅಭ್ಯರ್ಥಿ ಮತ್ತು ಪಕ್ಷದ ಸಂಸದ ಶಶಿ ತರೂರ್ ವಿರುದ್ಧ ಹೇಳಿಕೆ ನೀಡಿದ ಮರುದಿನವೇ ಪಕ್ಷವು ಈ ಕ್ರಮ ತೆಗೆದುಕೊಂಡಿದೆ.

ಪಕ್ಷದ ಮುಖಂಡ ಜೈರಾಂ ರಮೇಶ್ ಅವರು, 'ಪ್ರಜಾಸತ್ತಾತ್ಮಕವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡುವ ವ್ಯವಸ್ಥೆ ಇರುವ ಏಕೈಕ ಪಕ್ಷ ನಮ್ಮದು. ಅಧ್ಯಕ್ಷ ಹುದ್ದೆಯ ಚುನಾವಣೆಯಲ್ಲಿ ಸ್ಪರ್ಧಿಸಲು ಎಲ್ಲರಿಗೂ ಅವಕಾಶವಿದೆ. ಯಾವುದೇ ಅಭ್ಯರ್ಥಿಯ ವಿರುದ್ಧ ಮತ್ತು ನಮ್ಮ ಸಹೋದ್ಯೋಗಿಗಳ ವಿರುದ್ಧ ಹೇಳಿಕೆ ನೀಡಬಾರದು' ಎಂದು ಸೂಚನೆ ನೀಡಿದ್ದಾರೆ.

ಭಾರತ್ ಜೋಡೊ ಯಾತ್ರೆಗೆ ದಿನದ ವಿರಾಮ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಗೆ ಶುಕ್ರವಾರ ವಿರಾಮ ನೀಡಲಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಕೇರಳದ ಚಾಲಕ್ಕುಡಿಯಲ್ಲಿ ಭಾರತ ಜೋಡೊ ಯಾತ್ರಿಗಳು ಬೀಡುಬಿಟ್ಟಿದ್ದಾರೆ. ರಾಹುಲ್ ಗಾಂಧಿ ಸಹ ಅಲ್ಲೇ ತಮ್ಮ ಕ್ಯಾಂಪರ್ ವಾಹನದಲ್ಲಿ ಉಳಿದುಕೊಂಡಿದ್ದಾರೆ. ಉಳಿದ ಯಾತ್ರಾರ್ಥಿಗಳಿಗೆ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ರಾಹುಲ್ ದೆಹಲಿಗೆ ತೆರಳಿದ್ದಾರೆ ಎಂದು ಕೆಲವು ಪಕ್ಷಗಳು ಆರೋಪಿಸಿವೆ. ಅದರಲ್ಲಿ ಹುರುಳಿಲ್ಲ. ರಾಹುಲ್ ಸಹ ಶಿಬಿರದಲ್ಲೇ ಇದ್ದು, ವಿಶ್ರಾಂತಿ ಪಡೆದಿದ್ದಾರೆ ಎಂದು ಅವರು ಹೇಳಿದ್ದಾರೆ.

ಹೈಕೋರ್ಟ್ ಕಿಡಿ: 'ಕೇರಳದಾದ್ಯಂತ ಯಾತ್ರೆ ನಡೆಸುತ್ತಿರುವ ರಾಜಕೀಯ ಪಕ್ಷವೊಂದು ಹೆದ್ದಾರಿಯುದ್ದಕ್ಕೂ ಕಾನೂನುಬಾಹಿರವಾಗಿ ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಹಾಕಿದೆ. ಇದನ್ನು ನೋಡಿಯೂ ಸಂಬಂಧಿತ ಇಲಾಖೆಗಳು, ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರೆ' ಎಂದು ಕೇರಳ ಹೈಕೋರ್ಟ್ ಕಿಡಿಕಾರಿದೆ.

ಹೆದ್ದಾರಿಗಳಲ್ಲಿ ಬ್ಯಾನರ್ ಹಾಕಿರುವ ಬಗ್ಗೆ ನ್ಯಾಯಾಲಯದ ಸಹಾಯಕ (ಅಮಿಕಸ್ ಕ್ಯೂರಿ) ಹರೀಶ್ ವಾಸುದೇವನ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯಲ್ಲಿ ಅವರು ಕಾಂಗ್ರೆಸ್ ಹೆಸರನ್ನು ಉಲ್ಲೇಖಿಸಿಲ್ಲ. ನ್ಯಾಯಮೂರ್ತಿ ದೇವನ್ ರಾಮಚಂದ್ರನ್ ಅವರಿದ್ದ ಏಕಸದಸ್ಯ ಪೀಠವು ಅರ್ಜಿಯ ವಿಚಾರಣೆ ನಡೆಸಿದೆ.

ಕಾನೂನುಬಾಹಿರವಾಗಿ ಹಾಕಿರುವ ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಏಕೆ ತೆರವು ಮಾಡಿಲ್ಲ ಎಂಬುದರ ಬಗ್ಗೆ ಸರ್ಕಾರ ಮತ್ತು ಪೊಲೀಸರು ಮಾಹಿತಿ ನೀಡಬೇಕು ಎಂದು ಪೀಠವು ಹೇಳಿದೆ.



ಭಾರತ್ ಜೋಡೊ ಯಾತ್ರಾರ್ಥಿಗಳಿಗಾಗಿ ತ್ರಿಶೂರಿನ ಚಾಲಕ್ಕುಡಿಯಲ್ಲಿ ಶುಕ್ರವಾರ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು –ಪಿಟಿಐ ಚಿತ್ರ

ಉಕ್ರೇನ್‌ನಿಂದ ಮರಳಿದ ವೈದ್ಯ ವಿದ್ಯಾರ್ಥಿಗಳಿಗೆ ನೆರವು

'ಸುಪ್ರೀಂ'ಗೆ ಕೇಂದ್ರ ಮಾಹಿತಿ



ನವದೆಹಲಿ(ಪಿಟಿಐ): ಯುದ್ಧಪೀಡಿತ ಉಕ್ರೇನ್‌ನಿಂದ ಭಾರತಕ್ಕೆ ಮರಳಿರುವ ವೈದ್ಯ ವಿದ್ಯಾರ್ಥಿಗಳಿಗೆ ನೆರವಾಗಲು ನ್ಯಾಯಾಲಯವು ನೀಡಿದ ಸಲಹೆಗಳಂತೆ ಕಾರ್ಯೋನ್ಮುಖವಾಗಿದ್ದೇವೆ ಎಂದು ಕೇಂದ್ರ ಸರ್ಕಾರವು ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಹೇಳಿದೆ.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಮತ್ತು ಸುಧಾಂಶು ಧುಲಿಯಾ ಅವರಿದ್ದ ದ್ವಿಸದಸ್ಯ ಪೀಠಕ್ಕೆ 'ಈ ಹಿಂದಿನ ಆದೇಶದಲ್ಲಿ ಪೀಠವು ನೀಡಿರುವ ಸಲಹೆಗಳ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಆರೋಗ್ಯ ಸಚಿವಾಲಯದ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ. ಕೇಂದ್ರದ ನಿರ್ದೇಶನದಂತೆ ಅವರು ಕಾರ್ಯೋನ್ಮುಖವಾಗಿದ್ದಾರೆ. ಇದನ್ನು ನಾವು ಅತ್ಯಂತ ಆದ್ಯತೆಯ ವಿಷಯವಾಗಿ ತೆಗೆದುಕೊಂಡಿದ್ದೇವೆ' ಎಂದು ಕೇಂದ್ರದ ಪರ ಹಾಜರಾಗಿದ್ದ ವಕೀಲರು ತಿಳಿಸಿದರು.

ಮುಂದಿನ ವಿಚಾರಣೆಯನ್ನು ಅ.11ಕ್ಕೆ ಮುಂದೂಡಿತು.

ಮತಾಂತರ ತಡೆ: ನೋಟಿಸ್

ನವದೆಹಲಿ (ಪಿಟಿಐ): ಉಡುಗೊರೆ ಮತ್ತು ಹಣಕಾಸು ಸೌಲಭ್ಯಗಳ ಆಮಿಷವೊಡ್ಡಿ ಮೋಸದಿಂದ ಮಾಡುವ ಮತಾಂತರ ನಿಯಂತ್ರಣಕ್ಕೆ ಕಠಿಣ ಕಾನೂನು ಜಾರಿಗೊಳಿಸಲು ಕೋರಿರುವ ಅರ್ಜಿ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರ ಮತ್ತು ಇತರರಿಗೆ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಕೃಷ್ಣ ಮುರಾರಿ ಅವರಿದ್ದ ಪೀಠವು, ನ.14ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಗೃಹ ಸಚಿವಾಲಯ ಹಾಗೂ ಕಾನೂನು ಮತ್ತು ನ್ಯಾಯ ಸಚಿವಾಲಯಗಳಿಗೆ ನೋಟಿಸ್ ಜಾರಿ ಮಾಡಿತು.

ವಕೀಲರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಉಡುಗೊರೆ, ಆರ್ಥಿಕ ನೆರವಿನ ಆಮಿಷ ತೋರಿಸಿ ಅಥವಾ ಬೆದರಿಸಿ ಮೋಸದಿಂದ ಮಾಡುವ ಮತಾಂತರ ತಡೆಗೆ ಕಠಿಣ ಕಾನೂನು ಜಾರಿಗೆ ತರಲು ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೋರಿರುವ ಅರ್ಜಿಯ ವಿಚಾರಣೆಯನ್ನು ದ್ವಿಸದಸ್ಯ ಪೀಠ ನಡೆಸಿತು.

370ನೇ ವಿಧಿ ರದ್ದತಿ ಪ್ರಶ್ನಿಸಿ ಅರ್ಜಿ: ವಿಚಾರಣೆಗೆ ಸಮ್ಮತಿ

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ಸಂವಿಧಾನದ 370ನೇ ವಿಧಿ ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ದಸರಾ ರಜೆಯ ಬಳಿಕ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ಸಂಕ್ಷಿಪ್ತ ಸುದ್ದಿ

ಐಎನ್‌ಎಸ್ ಅಧ್ಯಕ್ಷರಾಗಿ ರಾಜಪ್ರಸಾದ್ ರೆಡ್ಡಿ ಆಯ್ಕೆ



ಕೆ.ರಾಜಪ್ರಸಾದ್

ನವದೆಹಲಿ (ಪಿಟಿಐ): ತೆಲುಗು ದಿನಪತ್ರಿಕೆ 'ಸಾಕ್ಷಿ'ಯ ಕೆ.ರಾಜಪ್ರಸಾದ್ ರೆಡ್ಡಿ ಅವರು ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿಯ (ಐಎನ್‌ಎಸ್) 2022–23ನೇ ಸಾಲಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಸಂಸ್ಥೆಯ 83ನೇ ವಾರ್ಷಿಕ ಸಾಮಾನ್ಯಸಭೆಯಲ್ಲಿ ಈ ಆಯ್ಕೆ ನಡೆಯಿತು ಎಂದು ಐಎನ್‌ಎಸ್ ಪ್ರಕಟಣೆ ತಿಳಿಸಿದೆ.

ಹಿಂದಿ ದೈನಿಕ 'ಆಜ್ ಸಮಾಜ್'ದ ರಾಕೇಶ್ ಶರ್ಮಾ ಅವರು ಡೆಪ್ಯುಟಿ ಪ್ರೆಸಿಡೆಂಟ್, 'ಮಾತೃಭೂಮಿ ಆರೋಗ್ಯ ಮಾಸಿಕ'ದ ಎಂ.ವಿ.ಶ್ರೇಯಾಂಶ್ ಕುಮಾರ್ ಉಪಾಧ್ಯಕ್ಷರಾಗಿ ಹಾಗೂ ತನ್ಮಯ್ ಮಾಹೇಶ್ವರಿ (ಹಿಂದಿ ದೈನಿಕ ಅಮರ್ ಉಜಾಲ) ಅವರು ಖಜಾಂಚಿಯಾಗಿ ಆಯ್ಕೆಯಾದರು.

ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್.ತಿಲಕ್ ಕುಮಾರ್ ಅವರು ಸೇರಿದಂತೆ 41 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.

ಏಮ್ಸ್ ನಿರ್ದೇಶಕರಾಗಿ ಎಂ.ಶ್ರೀನಿವಾಸ್ ನೇಮಕ

ನವದೆಹಲಿ (ಪಿಟಿಐ): ಹೈದರಾಬಾದ್‌ನ ಇಎಸ್‌ಐಸಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ಡೀನ್ ಎಂ.ಶ್ರೀನಿವಾಸ್ ಅವರನ್ನು ದೆಹಲಿಯ ಏಮ್ಸ್ ನಿರ್ದೇಶಕರನ್ನಾಗಿ ನೇಮಕಗೊಳಿಸಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

2017ರಿಂದ ಏಮ್ಸ್ ನಿರ್ದೇಶಕರಾಗಿದ್ದ ರಣದೀಪ್ ಗುಲೇರಿಯಾ ಅವರ ಸ್ಥಾನಕ್ಕೆ ಡಾ.ಶ್ರೀನಿವಾಸ್ ಅವರನ್ನು ನೇಮಕ ಮಾಡಲಾಗಿದೆ.

ಐಸಿಎಂಆರ್‌ಗೆ ಹೊಸ ಮುಖ್ಯಸ್ಥರ ನೇಮಕ

ನವದೆಹಲಿ: ವಿಶ್ವ ಆರೋಗ್ಯ ಸಂಸ್ಥೆ ಹಿರಿಯ ವಿಜ್ಞಾನಿ ರಾಜೀವ್ ಬಹ್ಲ್ ಅವರನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ನೂತನ ಮಹಾನಿರ್ದೇಶಕರನ್ನಾಗಿ ಸರ್ಕಾರ ಶುಕ್ರವಾರ ನೇಮಿಸಿದೆ.

ಬಹ್ಲ್ ಅವರು ಪ್ರಸ್ತುತ ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ತಾಯಿ, ನವಜಾತ ಶಿಶು, ಮಗು ಮತ್ತು ಹದಿಹರೆಯದವರ ಆರೋಗ್ಯ ಕುರಿತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿದ್ದಾರೆ.

'ಪ್ರಧಾನಿಯಾಗಲು ಬಿಜೆಪಿ ಬೆನ್ನಿಗೆ ಚೂರಿ ಹಾಕಿದ ನಿತೀಶ್'

ಪೂರ್ನಿಯಾ, ಬಿಹಾರ: 'ದೇಶದ ಪ್ರಧಾನಿಯಾಗಬೇಕು ಎಂಬ ಮಹತ್ವಾಕಾಂಕ್ಷೆ ಈಡೇರಿಕೆಗಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಬಿಜೆಪಿ ಬೆನ್ನಿಗೆ ಚೂರಿ ಹಾಕಿದ್ದಲ್ಲದೇ, ಕಾಂಗ್ರೆಸ್, ಆರ್‌ಜೆಡಿಯೊಂದಿಗೆ ಕೈಜೋಡಿಸಿದರು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದರು.

'ಜನ ಭಾವನಾ' ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಿತೀಶ್ ಕುಮಾರ್ ಅವರಿಗೆ ಯಾವುದೇ ಸೈದ್ಧಾಂತಿಕ ಬದ್ಧತೆ ಇಲ್ಲ. ಜಾತಿ ಆಧಾರಿತ ರಾಜಕಾರಣಕ್ಕಾಗಿ ಅವರು ಸಮಾಜವಾದದಿಂದ ದೂರವಾಗಿದ್ದಾರೆ' ಎಂದರು.

ಪಂಜಾಬ್‌ಗೆ ₹2,000 ಕೋಟಿ ದಂಡ ವಿಧಿಸಿದ ಎನ್‌ಜಿಟಿ

ನವದೆಹಲಿ (ಪಿಟಿಐ): ಘನ ಮತ್ತು ದ್ರವ ತ್ಯಾಜ್ಯವನ್ನು ಸಂಸ್ಕರಿಸುವಲ್ಲಿ ವಿಫಲವಾದ ಕಾರಣಕ್ಕೆ ಪಂಜಾಬ್ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ₹2,000 ಕೋಟಿ ರೂಪಾಯಿ ದಂಡ ವಿಧಿಸಿದೆ. ಘನ ಮತ್ತು ದ್ರವ ತಾಜ್ಯಗಳ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ಭಾರಿ ಅಂತರವಾಗಿದ್ದರಿಂದ ಈ ದಂಡ ಹಾಕಲಾಗಿದೆ.

ಜಾಗರೂಕರಾಗಿರಿ: ಕೆನಡಾದಲ್ಲಿನ ಭಾರತೀಯರಿಗೆ ಸಲಹೆ


ನವದೆಹಲಿ (ಪಿಟಿಐ): ಕೆನಡಾದಲ್ಲಿ ದ್ವೇಷಪೂರಿತ ಅಪರಾಧಗಳು, ಮತೀಯ ಹಿಂಸಾಚಾರ ಮತ್ತು ಭಾರತ ವಿರೋಧಿ ಚಟುವಟಿಕೆಗಳು ಹೆಚ್ಚುತ್ತಿವೆ. ಹೀಗಾಗಿ, ಕೆನಡಾದಲ್ಲಿರುವ ಭಾರತೀಯ ಪ್ರಜೆಗಳು ಹಾಗೂ ಆ ದೇಶಕ್ಕೆ ಪ್ರಯಾಣಿಸುವವರು ಹೆಚ್ಚು ಜಾಗರೂಕರಾಗಿ ಇರುವಂತೆ ಕೇಂದ್ರ ಸರ್ಕಾರ ಶುಕ್ರವಾರ ಸಲಹೆ ನೀಡಿದೆ.

'ಖಾಲಿಸ್ತಾನ್ ಪರ ಕೆನಡಾದಲ್ಲಿ ಜನಾಭಿಪ್ರಾಯ ಸಂಗ್ರಹಿಸಲಾಗುತ್ತಿದೆ' ಎಂಬ ವರದಿಗಳ ಹಿನ್ನೆಲೆಯಲ್ಲಿ ವಿದೇಶಾಂಗ ಸಚಿವಾಲಯ ಈ ಸಲಹೆಗಳನ್ನು ನೀಡಿದೆ.

'ಭಾರತ ವಿರೋಧಿ ಕೃತ್ಯಗಳನ್ನು ಕೆನಡಾದ ಅಧಿಕಾರಿಗಳ ಗಮನಕ್ಕೆ ತರಬೇಕು. ಇಂಥ ಘಟನೆಗಳ ಕುರಿತು ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಬೇಕು' ಎಂದು ಕೆನಡಾದಲ್ಲಿರುವ ಭಾರತದ ಹೈಕಮಿಷನ್ ಹಾಗೂ ಕಾನ್ಸುಲೇಟ್ ಕಚೇರಿಗೆ ಸಚಿವಾಲಯ ಸೂಚಿಸಿದೆ.

'ಕೆನಡಾದಲ್ಲಿರುವ ಭಾರತೀಯ ಪ್ರಜೆಗಳು, ವಿದ್ಯಾರ್ಥಿಗಳು, ಪ್ರವಾಸ ಕೈಗೊಂಡಿರುವವರು ಒಟ್ಟಾವದಲ್ಲಿರುವ ಭಾರತೀಯ ಹೈಕಮಿಷನ್ ಕಚೇರಿ ಅಥವಾ ಟೊರಂಟೊ ಹಾಗೂ ವ್ಯಾಂಕೂವರ್‌ನಲ್ಲಿರುವ ಕಾನ್ಸುಲ್ ಕಚೇರಿಗಳ ವೆಬ್‌ಸೈಟ್‌ಗಳಲ್ಲಿ ತಮ್ಮ ಹೆಸರು ನೋಂದಣಿ ಮಾಡಿಸಬೇಕು. madad.gov.in ವೆಬ್‌ಸೈಟ್‌ನಲ್ಲೂ ಹೆಸರು ನೋಂದಾಯಿಸಬೇಕು' ಎಂದಿದೆ.

ಷೇರುಪೇಟೆ ವಹಿವಾಟು 1020



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,629
ಇಂದಿನ ಅಂತ್ಯ	17,327
▼	302
ದಿನದ ಕನಿಷ್ಠ	17,291

ವಿನಿಮಯ ದರ

$ ಡಾಲರ್	81.09
£ ಪೌಂಡ್	90.15
€ ಯುರೊ	79.06
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹440
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹442

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1660)
ಸೋಯಾ (ರಿಫೈನ್ಡ್)	₹1170 (1172)
ಸೂರ್ಯಕಾಂತಿ (ರಿಫೈನ್ಡ್)	₹1330 (1340)
ಪಾಮೋಲಿನ್	₹919 (920)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹145.50
ಆರ್‌ಎಸ್‌ಎಸ್-5 ₹135.50
ಗುಡ್ ಲಾಟ್ ₹131.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-1000
ಸಣ್ಣ	₹200-600

ಭಾರತದಲ್ಲಿ ₹ 5 ಸಾವಿರ ಕೋಟಿ ಹೂಡಿಕೆ: ನೆಸ್ಲೆ

ನವದೆಹಲಿ (ಪಿಟಿಐ): ನೆಸ್ಲೆ ಕಂಪನಿಯು 2025ರ ಒಳಗಾಗಿ ಭಾರತದಲ್ಲಿ ₹ 5 ಸಾವಿರ ಕೋಟಿ ಹೂಡಿಕೆ ಮಾಡುವ ಯೋಜನೆ ಹೊಂದಿದೆ ಎಂದು ಸಿಇಒ ಮಾರ್ಕ್ ಶ್ನೇಯ್ಡರ್ ಶುಕ್ರವಾರ ತಿಳಿಸಿದ್ದಾರೆ.

ಹೊಸ ಘಟಕಗಳ ಸ್ಥಾಪನೆ, ಸ್ವಾಧೀನ ಮತ್ತು ವಿಸ್ತರಣೆಯ ಉದ್ದೇಶದಿಂದ ಬಂಡವಾಳ ಹೂಡಿಕೆ ಮಾಡಲಾಗುತ್ತಿದೆ. ಕಂಪನಿಯು ಸದ್ಯ ದೇಶದಾದ್ಯಂತ 9 ಘಟಕಗಳನ್ನು ಹೊಂದಿದ್ದು, ತಯಾರಿಕಾ ಘಟಕ ಸ್ಥಾಪನೆಗಾಗಿ ಜಾಗದ ಹುಡುಕಾಟದಲ್ಲಿದೆ.

1960ರಲ್ಲಿ ಭಾರತದಲ್ಲಿ ತಯಾರಿಕೆ ಆರಂಭಿಸಿದಾಗಿನಿಂದ ₹ 8 ಸಾವಿರ ಕೋಟಿ ಹೂಡಿಕೆ ಮಾಡಲಾಗಿದೆ. ಇದಲ್ಲದೆ, 2025ರ ಒಳಗಾಗಿ ₹ 5 ಸಾವಿರ ಕೋಟಿ ಹೂಡಿಕೆ ಮಾಡುವ ಯೋಜನೆ ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ.

ಬಡ್ಡಿದರ ಹೆಚ್ಚಳ ಪರಿಣಾಮ, ಜಾಗತಿಕ ಆರ್ಥಿಕ ಹಿಂಜರಿತದ ಭೀತಿ

ಸೆನ್ಸೆಕ್ಸ್, ನಿಫ್ಟಿಯಲ್ಲಿ ನಿಲ್ಲದ ಕುಸಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು. ಎರಡೂ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರ ಶೇಕಡ 2ರವರೆಗೂ ಇಳಿಕೆ ಕಂಡವು.

ವಿವಿಧ ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳ ಮತ್ತು ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡವು ಭಾರತದ ಮೇಲೆ ಪರಿಣಾಮ ಬೀರಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1020 ಅಂಶ ಕುಸಿದು 58,099 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 302 ಅಂಶ ಇಳಿಕೆ ಕಂಡು 17,327 ಅಂಶಗಳಿಗೆ ತಲುಪಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 1.87ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 88.77 ಡಾಲರ್‌ಗೆ ತಲುಪಿತು.

'ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆ ಮತ್ತು ಡಾಲರ್ ಮೌಲ್ಯ ವೃದ್ಧಿ ಆಗಿರುವುದರಿಂದ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಹೊರಹರಿವಿಗೆ ಕಾರಣವಾಯಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಖ್ಯಾಂಶಗಳು

- ಬಿಎಸ್‌ಇನಲ್ಲಿ ಪವರ್ ಗ್ರಿಡ್ ಷೇರು ಮೌಲ್ಯ ಶೇ 7.93ರಷ್ಟು ಗರಿಷ್ಠ ಇಳಿಕೆ
- ಬಿಎಸ್‌ಇ ಮಿಡ್‌ಕ್ಯಾಪ್ ಶೇ 2.28ರಷ್ಟು ಇಳಿಕೆ

ವಲಯವಾರು ನಷ್ಟ (%)

ಯುಟಿಲಿಟಿ	3.48
ವಿದ್ಯುತ್	3.40
ರಿಯಾಲ್ಟಿ	2.97
ಹಣಕಾಸು ಸೇವೆಗಳು	2.56
ಟೆಲಿಕಮ್ಯುನಿಕೇಷನ್ಸ್	2.17
ಬಂಡವಾಳ ಸರಕುಗಳು	2.06

ಕರಗಿದ ಸಂಪತ್ತು: ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 4.90 ಲಕ್ಷ ಕೋಟಿಯಷ್ಟು ಕರಗಿತು. ಇದರಿಂದಾಗಿ ಷೇರುಪೇಟೆ ಒಟ್ಟಾರೆ ಬಂಡವಾಳ ಮೌಲ್ಯ ₹ 276.64 ಲಕ್ಷ ಕೋಟಿಗೆ ಇಳಿಕೆ ಕಂಡಿತು. ಮೂರು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ಒಟ್ಟಾರೆ ₹ 6.77 ಲಕ್ಷ ಕೋಟಿಯಷ್ಟು ಕರಗಿದೆ.

ಜಾಗತಿಕ ಮಟ್ಟದಲ್ಲಿ ಕುಸಿತ: ಹಣದುಬ್ಬರವನ್ನು ನಿಯಂತ್ರಿಸಲು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಏರಿಕೆ ಮಾಡುತ್ತಿವೆ. ಇದರ ಜೊತೆಗೆ ಆರ್ಥಿಕ ಹಿಂಜರಿತದ ಭೀತಿಯೂ ಸೇರಿ ಜಾಗತಿಕ ಷೇರುಪೇಟೆಗಳಲ್ಲಿ ಕುಸಿತ ಕಂಡುಬಂತು. ದೇಶದ ಷೇರುಪೇಟೆಗಳ ಮೇಲೆಯೂ ಅದರ ಪ್ರತಿಕೂಲ ಪರಿಣಾಮ ಆಯಿತು.

ಜಾಗತಿಕ ಮಾರುಕಟ್ಟೆಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಅಮೆರಿಕದ ಮಾರುಕಟ್ಟೆಯಲ್ಲಿ ಕಂಡ ಇಳಿಕೆಯ ಪ್ರಭಾವಕ್ಕೆ ದೇಶದ ಮಾರುಕಟ್ಟೆ ಒಳಗಾಯಿತು ಎಂದು ಎಮ್‌ಕೆ ವೆಲ್ತ್ ಮ್ಯಾನೇಜ್‌ಮೆಂಟ್‌ನ ಸಂಶೋಧನಾ ಮುಖ್ಯಸ್ಥ ಜೋಸೆಫ್ ಥಾಮಸ್ ಹೇಳಿದ್ದಾರೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿದರವನ್ನು ಶೇ 0.75ರಷ್ಟು ಹೆಚ್ಚಿಸಿದೆ. ಅಲ್ಲದೆ, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡಬೇಕಾಗಬಹುದು ಎಂಬ ಎಚ್ಚರಿಕೆ ನೀಡಿದೆ. ಇದು ಹೂಡಿಕೆದಾರರ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ.

₹81.09ಕ್ಕೆ ಕುಸಿದ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 30 ಪೈಸೆ ಇಳಿಕೆ ಕಂಡಿತು. ಇದರಿಂದಾಗಿ ಒಂದು ಡಾಲರ್‌ಗೆ ₹81.09ಕ್ಕೆ ತಲುಪುವ ಮೂಲಕ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಇಳಿಯಿತು.

ವಹಿವಾಟಿನ ಒಂದು ಹಂತದಲ್ಲಿ ಡಾಲರ್‌ಗೆ ₹81.23ಕ್ಕೆ ಕುಸಿತ ಕಂಡಿತ್ತು. ಸತತ ಮೂರನೇ ದಿನವೂ ರೂಪಾಯಿ ಮೌಲ್ಯ ಕುಸಿತ ಕಂಡಂತಾಗಿದೆ. ಈ ಅವಧಿಯಲ್ಲಿ ಒಟ್ಟಾರೆ 124 ಪೈಸೆಯಷ್ಟು ಇಳಿಕೆ ಕಂಡಿದೆ.

ಉಕ್ರೇನ್ ಬಿಕ್ಕಟ್ಟು ಹಾಗೂ ಅಮೆರಿಕ ಮತ್ತು ಇಂಗ್ಲೆಂಡ್ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳದ ಕಾರಣಗಳಿಂದಾಗಿ ರೂಪಾಯಿ ಮೌಲ್ಯ ಒತ್ತಡಕ್ಕೆ ಒಳಗಾಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

23–9-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1655 (1665)
ಸೋಯಾ ಕಚ್ಚಾ	1125 (1127)
ಪಾಮ್ ವಾರದ ಡೆಲಿವರಿ	917 (918)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,350 (49,650)
ಬೆಳ್ಳಿ ಕೆ.ಜಿ 56,200 (56,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಸ್ಪರ್ಧಾತ್ಮಕ ಆಗಬೇಕಿವೆ ಬ್ಯಾಂಕ್‌ಗಳು'

ಮುಂಬೈ (ರಾಯಿಟರ್ಸ್): ದೇಶದ ಬ್ಯಾಂಕ್‌ಗಳು ತಮ್ಮಲ್ಲಿ ಠೇವಣಿ ಪ್ರಮಾಣ ಹೆಚ್ಚಿಸಲು ಇನ್ನಷ್ಟು ಸ್ಪರ್ಧಾತ್ಮಕ ಆಗಬೇಕಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಹಬ್ಬಗಳ ಋತು ಆರಂಭವಾಗಿದ್ದು, ಸಾಲಕ್ಕೆ ಬೇಡಿಕೆ ಜಾಸ್ತಿಯಾಗುತ್ತಿದೆ. ಆದರೆ, ಇದೇ ಹೊತ್ತಿನಲ್ಲಿ ನಗದು ಲಭ್ಯತೆ ಕಡಿಮೆ ಆಗಿದೆ.

ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ನಗದು ಲಭ್ಯತೆಯು ಈ ವಾರದ ಆರಂಭದಲ್ಲಿ 40 ತಿಂಗಳ ಕನಿಷ್ಠ ಮಟ್ಟ ತಲುಪಿದೆ. ಇದಾದ ನಂತರ ಆರ್‌ಬಿಐ, ಬ್ಯಾಂಕಿಂಗ್ ವ್ಯವಸ್ಥೆಗೆ ಹಣ ಬಿಡುಗಡೆ ಮಾಡುವಂತಾಗಿದೆ.

ಆಗಸ್ಟ್ 26ಕ್ಕೆ ಕೊನೆಗೊಂಡ ಎರಡು ವಾರಗಳ ಅವಧಿಯಲ್ಲಿ ಬ್ಯಾಂಕ್‌ಗಳು ಸಾಲ ನೀಡುವ ಪ್ರಮಾಣ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 15.5ರಷ್ಟು ಹೆಚ್ಚಾಗಿದೆ. ಆದರೆ ಅದೇ ಹೊತ್ತಿನಲ್ಲಿ ಠೇವಣಿ ಸ್ವೀಕರಿಸುವ ಪ್ರಮಾಣವು ಶೇ 9.5ರಷ್ಟು ಮಾತ್ರ ಜಾಸ್ತಿ ಆಗಿದೆ.



'ಸಾಲ ನೀಡಿಕೆ ಪ್ರಮಾಣ ಹಾಗೂ ಠೇವಣಿ ಸ್ವೀಕಾರ ಪ್ರಮಾಣದ ನಡುವಿನ ವ್ಯತ್ಯಾಸವು ಒಂದು ಸವಾಲು' ಎಂದು ಮಕ್ವೇರಿ ಹಣಕಾಸು ಸಂಸ್ಥೆಯ ವಿಶ್ಲೇಷಕ ಸುರೇಶ್ ಗಣಪತಿ ಹೇಳಿದ್ದಾರೆ.

'ಬ್ಯಾಂಕ್‌ಗಳು ಠೇವಣಿ ಮೇಲಿನ ಬಡ್ಡಿ ಹೆಚ್ಚಿಸಲು ಹಿಂದೇಟು ಹಾಕುತ್ತಿವೆ. ಆದರೆ ಸಾಲದ ಮೇಲಿನ ಬಡ್ಡಿಯನ್ನು ತಕ್ಷಣಕ್ಕೆ ಹೆಚ್ಚಿಸುತ್ತವೆ. ಇದಕ್ಕೆ ಕಾರಣ ಹಣಕಾಸು ವ್ಯವಸ್ಥೆಯಲ್ಲಿದ್ದ ಹೆಚ್ಚಿನ ನಗದು ಲಭ್ಯತೆ. ಈಗ ಪರಿಸ್ಥಿತಿ ಬದಲಾಗಬೇಕಿದೆ. ಇಲ್ಲವಾದರೆ ಆರ್‌ಬಿಐ ಬ್ಯಾಂಕ್‌ಗಳನ್ನು ತರಾಟೆಗೆ ತೆಗೆದುಕೊಳ್ಳುತ್ತದೆ' ಎಂದು ಎಲ್‌ಆ್ಯಂಡ್‌ಟಿ ಫೈನಾನ್ಶಿಯಲ್ ಹೋಲ್ಡಿಂಗ್ಸ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ರೂಪಾ ನಿತ್ಸುರೆ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಚಿತ್ರದುರ್ಗ	
ಆಪಿ	48600-49000
ಬೆಟ್ಟೆ	38139-38569
ಕೆಂಪುಗೋಟು	29629-30059
ರಾಶಿ	48100-48500
ಹೊಸನಗರ	
ಬಿಳಿಗೋಟು	27000-28599
ಚಾಲಿ	37299-38000
ಕೆಂಪುಗೋಟು	35819-38061
ರಾಶಿ	48109-51221
ಕುಮಟ	
ಚಿಪ್ಪು	29509-34019
ಕೋಕ	21089-32999
ಫ್ಯಾಕ್ಟರಿ	11099-20970
ಹೊಸಚಾಲಿ	38899-42809
ಹಳೆಚಾಲಿ	45599-46299
ಪುತ್ತೂರು	
ಕೋಕ	11000-26000
ಹೊಸತು	34500-47500
ಶಿವಮೊಗ್ಗ	
ಬೆಟ್ಟೆ	51090-54120
ಗೊಬರಲು	17005-38599
ರಾಶಿ	47099-51099
ಸರಕು	60069-79100
ಸಿದ್ದಾಪುರ	
ಬಿಳಿಗೋಟು	28399-36399
ಚಾಲಿ	38609-42699
ಕೋಕ	27469-34811
ಕೆಂಪುಗೋಟು	32111-36089
ರಾಶಿ	48899-50809
ತಟ್ಟಿಬೆಟ್ಟೆ	40109-48609
ಶಿರಸಿ	
ಬೆಟ್ಟೆ	29649-47699
ಬಿಳಿಗೋಟು	25219-37499
ಚಾಲಿ	39069-43799
ಕೆಂಪುಗೋಟು	30911-35531
ರಾಶಿ	44899-50599
ಯಲ್ಲಾಪುರ	
ಬಿಳಿಗೋಟು	26899-36699
ಚಾಲಿ	37899-43509
ಕೋಕ	18312-32899
ಕೆಂಪುಗೋಟು	27099-36899
ರಾಶಿ	48919-56400
ತಟ್ಟಿಬೆಟ್ಟೆ	38969-47210

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	16150	221.30 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9800	ಲಂಡನ್
ಆರ್‌ಸಿ	4800	4500	4750	2226 ಡಾಲರ್

ನವೋದ್ಯಮ ಉತ್ತೇಜನಕ್ಕೆ ಎಫ್‌ಕೆಸಿಸಿಐ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ರಫ್ತು ಉತ್ತೇಜನಾ ಮಂಡಳಿ (ಇಎಸ್‌ಸಿ), ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ (ಎಸ್‌ಟಿಪಿಐ) ಹಾಗೂ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಜೊತೆಯಾಗಿ 'ನವೋದ್ಯಮ ಶೃಂಗ – ಮುಂದಿನ ಯೂನಿಕಾರ್ನ್ ನಿರ್ಮಾಣ' ಕಾರ್ಯಕ್ರಮ ಆಯೋಜಿಸಲಿವೆ.

ದೇಶದಲ್ಲಿ ನವೋದ್ಯಮ ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಆಯ್ದ ರಾಜ್ಯಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಆಂಧ್ರಪ್ರದೇಶ, ರಾಜಸ್ಥಾನ, ಗುಜರಾತ್, ಕರ್ನಾಟಕ ಮತ್ತು ನವದೆಹಲಿ ಈ ಕಾರ್ಯಕ್ರಮ ಆಯೋಜಿಸಲು ಮುಂದೆ ಬಂದಿವೆ. ಈ ರಾಜ್ಯಗಳಲ್ಲಿ ಶೃಂಗ ನಡೆದ ನಂತರದಲ್ಲಿ, ಬೇರೆ ರಾಜ್ಯಗಳ ನವೋದ್ಯಮಗಳಿಗೂ ಭಾಗವಹಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ವರ್ಚುವಲ್ ಆಗಿ ನವೋದ್ಯಮಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್ ತಿಳಿಸಿದ್ದಾರೆ.

ರಾಜ್ಯಗಳ ಮಟ್ಟದಲ್ಲಿ ಆಯ್ಕೆಯಾದ ನವೋದ್ಯಮಗಳನ್ನು ರಾಷ್ಟ್ರಮಟ್ಟದ ಸಮಾವೇಶಕ್ಕೆ ಆಹ್ವಾನಿಸಲಾಗುತ್ತದೆ. ಅಲ್ಲಿ ಅಂತಿಮ ಸುತ್ತಿನ ಆಯ್ಕೆ ನಡೆಯಲಿದೆ. ಆಯ್ಕೆಯಾಗುವ ನವೋದ್ಯಮಗಳಿಗೆ ಅಮೆರಿಕ ಪ್ರವಾಸಕ್ಕೆ ನೆರವು ನೀಡಲಾಗುತ್ತದೆ. ಅಲ್ಲಿ ಅವು, ಅಮೆರಿಕದ ಹೂಡಿಕೆದಾರರು ಹಾಗೂ ವೆಂಚರ್ ಕ್ಯಾಪಿಟಲಿಸ್ಟ್‌ಗಳನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ.

ಈ ಕಾರ್ಯಕ್ರಮಕ್ಕೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಬೆಂಬಲ ಇದೆ ಎಂದು ಪ್ರಸಾದ್ ಅವರು ತಿಳಿಸಿದ್ದಾರೆ.

ಇರಾನ್: ಪತ್ರಿಕಾ ಛಾಯಾಗ್ರಾಹಕ ಯಲ್ದಾ ಮೊಯಿರಿ ಬಂಧನ

ಹಿಜಾಬ್: ಹೋರಾಟ ದಮನಕ್ಕೆ ತಂತ್ರ

ಪ್ಯಾರಿಸ್/ದುಬೈ/ಟೆಹರಾನ್ (ಎಎಫ್‌ಪಿ, ಎಪಿ): ಇರಾನ್‌ನಲ್ಲಿ ನಡೆಯುತ್ತಿರುವ ಹಿಜಾಬ್ ವಿರೋಧಿ ಹೋರಾಟವನ್ನು ದಮನಿಸಲು ಸರ್ಕಾರವು ಹಲವು ತಂತ್ರಗಳನ್ನು ಹೂಡಿದೆ. ಮಹಸಾ ಅಮೀನಿ ಹತ್ಯೆಯನ್ನು ಬೆಳಕಿಗೆ ತಂದ ಪತ್ರಕರ್ತರನ್ನು ಬಂಧಿಸಲಾಗುತ್ತಿದೆ. ಹಿಜಾಬ್ ಪರವಾದ ಸರ್ಕಾರಿ ಪ್ರಾಯೋಜಿತ ಮೆರವಣಿಗೆಗಳನ್ನೂ ಆಯೋಜಿಸಲಾಗುತ್ತಿದೆ. ಈ ಮಧ್ಯೆ, ಹಿಜಾಬ್ ವಿರೋಧಿ ಪ್ರತಿಭಟನೆ ಇನ್ನಷ್ಟು ತೀವ್ರಗೊಂಡಿದೆ.

ಅಮೀನಿ ಅವರು ಆಸ್ಪತ್ರೆಯಲ್ಲಿ ಕೋಮಾ ಸ್ಥಿತಿಯಲ್ಲಿ ಮಲಗಿದ್ದ ವೇಳೆ ಆಸ್ಪತ್ರೆಗೆ ಭೇಟಿ ನೀಡಿ ವರದಿ ಮಾಡಿದ ಟೆಹರಾನ್‌ನ ಪತ್ರಕರ್ತೆ ನಿಲುಫರ್ ಹಮೀದಿ ಅವರನ್ನು ಬಂಧಿಸಲಾಗಿದೆ. ಟೆಹರಾನ್‌ನ ಬೀದಿ ಬೀದಿಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ವರದಿ ಮಾಡುತ್ತಿರುವ, ಪತ್ರಿಕಾ ಛಾಯಾಗ್ರಾಹಕ ಯಲ್ದಾ ಮೊಯಿರಿ ಅವರನ್ನು ಬಂಧಿಸಲಾಗಿದೆ. ಇರಾನ್‌ನ ಪ್ರಮುಖ ಸಾಮಾಜಿಕ ಕಾರ್ಯಕರ್ತರಾದ ಮಾಜಿದ್ ತವಕೋಲಿ, ಹೊಸ್ಸೀನ್ ರೊನಗಿ ಅವರನ್ನು ಬಂಧಿಸಲಾಗಿದೆ.

ಮೃತರ ಸಂಖ್ಯೆಯಲ್ಲಿ ಗೊಂದಲ: ಇರಾನ್‌ನ ಹಲವೆಡೆ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಮೃತಪಟ್ಟವರ ಸಂಖ್ಯೆ ಕುರಿತು ಗೊಂದಲ ಸೃಷ್ಟಿಯಾಗಿದೆ. ಸರ್ಕಾರ ಒಂದು ಲೆಕ್ಕ ನೀಡಿದರೆ, ಸರ್ಕಾರಿ ಸುದ್ದಿವಾಹಿನಿ ಮತ್ತೊಂದು ಸಂಖ್ಯೆ ಹೇಳುತ್ತಿದೆ. ಸರ್ಕಾರಿ ಸುದ್ದಿವಾಹಿನಿಯೊಂದು ಶುಕ್ರವಾರದವರೆಗೆ ಪ್ರತಿಭಟನೆಯಲ್ಲಿ ಮೃತಪಟ್ಟವರ ಸಂಖ್ಯೆ 26 ಎಂದು ಹೇಳಿದರೆ, ಗುರುವಾರದವರೆಗೆ 5 ಭದ್ರತಾ ಸಿಬ್ಬಂದಿ ಸೇರಿ ಒಟ್ಟು 17 ಮಂದಿ ಮೃತಪಟ್ಟಿದ್ದಾರೆ ಎಂದು ಸರ್ಕಾರ ಹೇಳಿದೆ. ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಷಿಯೇಟಿವ್ ಸಂಸ್ಥೆ 36 ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಿದೆ.

ಇರಾನ್ ಪ್ರಧಾನಿ ಅಲಿ ಕಮೇನಿ ಅವರ ಪ್ರತಿಕೃತಿಯನ್ನು ಪ್ರತಿಭಟನಕಾರರು ದಹಿಸುತ್ತಿರುವ ಮತ್ತು ವಿರೂಪಗೊಳಿಸುತ್ತಿರುವ ವಿಡಿಯೊಗಳು ಎಲ್ಲೆಡೆ ಹರಿದಾಡುತ್ತಿವೆ. ಜೊತೆಗೆ, ಭದ್ರತಾ ಪಡೆಗಳು ಪ್ರತಿಭಟನಕಾರರ ಮೇಲೆ ಅರೆ ಸ್ವಯಂಚಾಲಿತ ಶಸ್ತ್ರಗಳನ್ನು ಪ್ರಯೋಗಿಸುತ್ತಿರುವ ವಿಡಿಯೊಗಳು ವೈರಲ್ ಆಗಿವೆ.

ಸಂದರ್ಶನ ರದ್ದು: ಹಿಜಾಬ್ ಧರಿಸಲು ನಿರಾಕರಿಸಿದ ಸಿಎನ್‌ಎನ್‌ನ ಪತ್ರಕರ್ತೆ ನಡೆಸಬೇಕಿದ್ದ ಸಂದರ್ಶನವನ್ನು ಇರಾನ್ ಅಧ್ಯಕ್ಷ ಇಬ್ರಾಹಿಂ ರಯೀಸ್ ಅವರು ರದ್ದು ಮಾಡಿದ್ದಾರೆ. ಈ ಕುರಿತು ಪತ್ರಕರ್ತೆ ಕ್ರಿಸ್ಟಿಯಾನ್ ಅಮನ್‌ಪೋರ್ ಸರಣಿ ಟ್ವೀಟ್‌ಗಳನ್ನು ಮಾಡಿದ್ದಾರೆ.

'ರಷ್ಯಾ ಅಣ್ವಸ್ತ್ರ ಬೆದರಿಕೆ, ಯುದ್ಧ ನಿಲ್ಲಿಸಲಿ'

ವಿಶ್ವಸಂಸ್ಥೆ/ನವದೆಹಲಿ (ಎಪಿ/ಪಿಟಿಐ): ಅಣ್ವಸ್ತ್ರ ಬಳಕೆಯ ಬೆದರಿಕೆ ಮತ್ತು ಉಕ್ರೇನ್ ಮೇಲಿನ ಭೀಕರ ಯುದ್ಧ ಕೊನೆಗೊಳಿಸಲು ರಷ್ಯಾಗೆ ಸೂಚಿಸುವಂತೆ ವಿಶ್ವದ ಎಲ್ಲ ರಾಷ್ಟ್ರಗಳನ್ನು ಅಮೆರಿಕ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಒತ್ತಾಯಿಸಿದೆ.

ಗುರುವಾರ ಮಾತನಾಡಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟೊನಿ ಬ್ಲಿಂಕನ್ ಅವರು 'ಅಣ್ವಸ್ತ್ರ ಬೆದರಿಕೆಗಳು ತಕ್ಷಣವೇ ನಿಲ್ಲಬೇಕು' ಎಂಬ ಸ್ಪಷ್ಟ ಸಂದೇಶವನ್ನು ಮಂಡಳಿಯ ಎಲ್ಲ ಸದಸ್ಯರು ರಷ್ಯಾಕ್ಕೆ ರವಾನಿಸಬೇಕು ಎಂದು ಮನವಿ ಮಾಡಿದರು.

ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್, ಉಕ್ರೇನ್ ತನ್ನ ಪೂರ್ವದ ಭಾಗದಲ್ಲಿ ದೀರ್ಘ ಕಾಲ ನಡೆಸಿರುವ ದಬ್ಬಾಳಿಕೆ ಬಗ್ಗೆ ಪ್ರಸ್ತಾಪಿಸಿದರು.

ರಷ್ಯಾ ಉಪ ವಿದೇಶಾಂಗ ಸಚಿವ ಸೆರ್ಗಿ ರಿಯಾಬ್‌ಕೊವ್ 'ನಾವು ಯಾವುದೇ ದೇಶಕ್ಕೆ ಅಣ್ವಸ್ತ್ರ ಬೆದರಿಕೆಯೊಡ್ಡಿಲ್ಲ. ಅಮೆರಿಕ ಮತ್ತು ನ್ಯಾಟೊ ಜೊತೆ ಮುಕ್ತ ಮುಖಾಮುಖಿ ರಷ್ಯಾದ ಹಿತಾಸಕ್ತಿಯಾಗಿಲ್ಲ ಎಂದಿದ್ದಾರೆ.

ಮೋದಿ ನೇತೃತ್ವದ ಸಮಿತಿಗೆ ಮೆಕ್ಸಿಕೊ ಸಲಹೆ: ರಷ್ಯಾ ಮತ್ತು ಉಕ್ರೇನ್ ನಡುವೆ ಶಾಶ್ವತ ಶಾಂತಿ ಸ್ಥಾಪಿಸಲು ಮಧ್ಯಸ್ಥಿಕೆಗಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಪೋಪ್ ಫ್ರಾನ್ಸಿಸ್ ಮತ್ತು ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರನ್ನು ಒಳಗೊಂಡ ಸಮಿತಿ ರಚಿಸಲು ಮೆಕ್ಸಿಕೊ ವಿದೇಶಾಂಗ ಸಚಿವ ಮಾರ್ಸೆಲೊ ಲೂಯಿಸ್ ಎಬ್ರಾಡ್ ಕ್ಯಾಸೌಬಾನ್ ವಿಶ್ವಸಂಸ್ಥೆಗೆ ಪ್ರಸ್ತಾವ ಸಲ್ಲಿಸಿದರು.

ಭಾರತಕ್ಕೆ ರಷ್ಯಾ ಎಚ್ಚರಿಕೆ: ರಷ್ಯಾದ ತೈಲ ಬೆಲೆ ಮಿತಿಗೆ ಪಶ್ಚಿಮದ ರಾಷ್ಟ್ರಗಳ ಜತೆ ಸೇರದಂತೆ ಭಾರತಕ್ಕೆ ರಷ್ಯಾ ಶುಕ್ರವಾರ ಸೂಕ್ಷ್ಮವಾಗಿ ಎಚ್ಚರಿಕೆ ನೀಡಿದೆ.

ಭಾರತದಲ್ಲಿನ ರಷ್ಯಾ ರಾಯಭಾರಿ ಡೆನಿಸ್ ಅಲಿಪೋವ್, ಅಮೆರಿಕ ಮತ್ತು ಜಿ7 ರಾಷ್ಟ್ರಗಳ 'ಪ್ರೈಜ್ ಕ್ಯಾಪ್' ಬೆಂಬಲಿಸುವ ಯಾವುದೇ ದೇಶಕ್ಕೆ ರಷ್ಯಾದ ಇಂಧನ ಸಿಗದು ಎಂದಿದ್ದಾರೆ.

ಮೋದಿ ನೇತೃತ್ವದ ಸಮಿತಿ ರಚನೆಗೆ ಮೆಕ್ಸಿಕೊ ವಿದೇಶಾಂಗ ಸಚಿವರು ಇಟ್ಟಿರುವ ಪ್ರಸ್ತಾವಕ್ಕೆ, 'ಇದು ಭಾರತಕ್ಕೆ ಬಿಟ್ಟ ವಿಚಾರ' ಎಂದರು.

ಬಿಜೆಪಿ ನಾಯಕನ ಮಗ ಬಂಧನ

ಪೌಡೀ (ಉತ್ತರಾಖಂಡ): ಸ್ವಾಗತಕಾರಿಣಿಯ ಹತ್ಯೆ ಆರೋಪದಲ್ಲಿ ಹರಿದ್ವಾರ ಬಿಜೆಪಿ ನಾಯಕ ವಿನೋದ್ ಆರ್ಯ ಅವರ ಮಗ ಪುಳಕಿತ್ ಆರ್ಯ ಸೇರಿದಂತೆ ಮೂವರನ್ನು ಉತ್ತರಾಖಂಡ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಪುಳಕಿತ್ ಆರ್ಯ ಮಾಲೀಕತ್ವದ ರೆಸಾರ್ಟ್‌ನಲ್ಲಿ ಸ್ವಾಗತಕಾರಿಣಿಯಾಗಿ ಕೆಲಸ ಮಾಡುತ್ತಿದ್ದ 19 ವರ್ಷದ ಯುವತಿ ಕೆಲವು ದಿನಗಳಿಂದ ನಾಪತ್ತೆಯಾಗಿದ್ದರು. ಮೃತದೇಹ ಕಾಲುವೆಯೊಂದರಲ್ಲಿ ಪತ್ತೆಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ರೆಸಾರ್ಟ್ ವ್ಯವಸ್ಥಾಪಕ ಸೌರಭ್ ಭಾಸ್ಕರ್ ಮತ್ತು ಸಹಾಯಕ ವ್ಯವಸ್ಥಾಪಕ ಅಂಕಿತ್ ಗುಪ್ತಾ ಬಂಧಿತರಲ್ಲಿ ಇನ್ನಿಬ್ಬರಾಗಿದ್ದಾರೆ.

ಎರಡನೇ ಟಿ20: ಭಾರತಕ್ಕೆ 6 ವಿಕೆಟ್ ಜಯ; ಸರಣಿ ಸಮಬಲ

ರೋಹಿತ್ ಶರ್ಮಾ ಮಿಂಚು


ರೋಹಿತ್ ಶರ್ಮಾ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ನಾಗಪುರ (ಪಿಟಿಐ): ರೋಹಿತ್ ಶರ್ಮಾ ಅವರ ಬಿರುಸಿನ ಆಟದ ಬಲದಿಂದ ಭಾರತ ತಂಡವು ಶುಕ್ರವಾರ ಇಲ್ಲಿ ನಡೆದ ಆಸ್ಟ್ರೇಲಿಯಾ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಆರು ವಿಕೆಟ್‌ಗಳ ಜಯ ಸಾಧಿಸಿತು.

ವಿಸಿಎ ಕ್ರೀಡಾಂಗಣದಲ್ಲಿ ಮಳೆಯಿಂದಾಗಿ ವಿಳಂಬವಾಗಿ ಆರಂಭವಾದ ಪಂದ್ಯದಲ್ಲಿ ಇನಿಂಗ್ಸ್‌ಗೆ 8 ಓವರ್‌ಗಳನ್ನು ನಿಗದಿಪಡಿಸಲಾಯಿತು. ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 8 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 90 ರನ್ ಗಳಿಸಿದರೆ, ಭಾರತ 7.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 92 ರನ್ ಗಳಿಸಿ ಗೆದ್ದಿತು. ಮೂರು ಪಂದ್ಯಗಳ ಸರಣಿ ಇದೀಗ 1-1 ರಲ್ಲಿ ಸಮಬಲದಲ್ಲಿದೆ.

ಮಿಂಚಿನ ಆಟವಾಡಿದ ರೋಹಿತ್ (ಔಟಾಗದೆ 46, 20 ಎ., 4X4, 6X4) ಅವರು ಆತಿಥೇಯ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ರೋಹಿತ್ ಮತ್ತು ರಾಹುಲ್ (10 ರನ್, 6ಎ) ಮೊದಲ ವಿಕೆಟ್‌ಗೆ 2.5 ಓವರ್‌ಗಳಲ್ಲಿ 39 ರನ್ ಸೇರಿಸಿದರು. ವಿರಾಟ್ ಕೊಹ್ಲಿ (11 ರನ್, 6 ಎ) ಉತ್ತಮ ಆರಂಭ ಪಡೆದರೂ ಬೇಗನೇ ಔಟಾದರು.

ಭಾರತದ ಗೆಲುವಿಗೆ ಕೊನೆಯ ಎರಡು ಓವರ್‌ಗಳಲ್ಲಿ 22 ರನ್‌ಗಳು ಬೇಕಿದ್ದವು. ಪ್ಯಾಟ್ ಕಮಿನ್ಸ್ ಬೌಲ್ ಮಾಡಿದ ಏಳನೇ ಓವರ್‌ನಲ್ಲಿ 13 ರನ್‌ಗಳು ಬಂದವು. ಕೊನೆಯ ಓವರ್‌ನಲ್ಲಿ 9 ರನ್‌ಗಳ ಅವಶ್ಯಕತೆಯಿತ್ತು. ಡೇನಿಯಲ್ ಸ್ಯಾಮ್ಸ್ ಬೌಲ್ ಮಾಡಿದ ಓವರ್‌ನ ಮೊದಲ ಎರಡು ಎಸೆತಗಳನ್ನು ಕ್ರಮವಾಗಿ ಸಿಕ್ಸರ್ ಹಾಗೂ ಬೌಂಡರಿಗೆ ಅಟ್ಟಿದ ದಿನೇಶ್ ಕಾರ್ತಿಕ್, ತಂಡಕ್ಕೆ ಗೆಲುವು ತಂದುಕೊಟ್ಟರು.

ವೇಡ್ ಅಬ್ಬರ: ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ ತಂಡ, ನಾಯಕ ಆ್ಯರನ್ ಫಿಂಚ್ (31) ಹಾಗೂ ಮ್ಯಾಥ್ಯೂ ವೇಡ್ (ಔಟಾಗದೆ 43; 20ಎ, 4X4, 6X3) ಅಬ್ಬರದ ಆಟದಿಂದಾಗಿ 90 ರನ್ ಗಳಿಸಿತು.

ಅಕ್ಷರ್ ಪಟೇಲ್ ಹಾಗೂ ಜಸ್‌ಪ್ರೀತ್ ಬೂಮ್ರಾ ಉತ್ತಮ ದಾಳಿಯಿಂದಾಗಿ ತಂಡವು ಐದು ಓವರ್‌ಗಳಲ್ಲಿ 46 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಆದರೆ ಕ್ರೀಸ್‌ಗೆ ಬಂದ ಮ್ಯಾಥ್ಯೂ ವೇಡ್ ಆಟ ರಂಗೇರಿತು. ಇದರಿಂದಾಗಿ ಉಳಿದ ಮೂರು ಓವರ್‌ಗಳಲ್ಲಿ ಒಟ್ಟು 44 ರನ್‌ಗಳು ಸೇರಿದವು.

ಪಂದ್ಯ ವಿಳಂಬ: ವಿಸಿಎ ಕ್ರೀಡಾಂಗಣ ಇರುವ ಜಮ್ತಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಳೆದ ಕೆಲವು ದಿನಗಳಿಂದ ಮಳೆ ಸುರಿದಿದೆ. ಬುಧವಾರ ರಾತ್ರಿ ಹಾಗೂ ಗುರುವಾರ ಮಧ್ಯರಾತ್ರಿಯೂ ಮಳೆ ಬಂದಿದ್ದ ಕಾರಣ ಮೈದಾನದ ಬೌಂಡರಿ ಬಳಿಯ ಸ್ಥಳವು ಒದ್ದೆಯಾಗಿತ್ತು. ಇದರಿಂದ 7 ಗಂಟೆಗೆ ಆರಂಭವಾಗಬೇಕಿದ್ದ ಪಂದ್ಯ ರಾತ್ರಿ 9.30ಕ್ಕೆ ಶುರುವಾಯಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 8 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 90 (ಆ್ಯರನ್ ಫಿಂಚ್ 31, ಮ್ಯಾಥ್ಯೂ ವೇಡ್ ಔಟಾಗದೆ 43, ಅಕ್ಷರ್ ಪಟೇಲ್ 13ಕ್ಕೆ2, ಜಸ್‌ಪ್ರೀತ್ ಬೂಮ್ರಾ 23ಕ್ಕೆ1) **ಭಾರತ:** 7.2 ಓವರ್‌ಗಳಲ್ಲಿ 4 ವಿಕೆಟ್‌ಗೆ 92 (ಕೆ.ಎಲ್.ರಾಹುಲ್ 10, ರೋಹಿತ್ ಶರ್ಮಾ ಔಟಾಗದೆ 46, ವಿರಾಟ್ ಕೊಹ್ಲಿ 11, ಹಾರ್ದಿಕ್ ಪಾಂಡ್ಯ 9, ದಿನೇಶ್ ಕಾರ್ತಿಕ್ ಔಟಾಗದೆ 10, ಆ್ಯಡಂ ಜಂಪಾ 16ಕ್ಕೆ 3) ಫಲಿತಾಂಶ: ಭಾರತಕ್ಕೆ 6 ವಿಕೆಟ್ ಗೆಲುವು

ಹಾಕಿ ಇಂಡಿಯಾ: ದಿಲೀಪ್ ಟರ್ಕಿ ಅಧ್ಯಕ್ಷ

ಅವಿರೋಧ ಆಯ್ಕೆ: ಹಾಕಿ ಕರ್ನಾಟಕದ ಸುಬ್ರಮಣ್ಯ ಗುಪ್ತಾ ಉಪಾಧ್ಯಕ್ಷ


ದಿಲೀಪ್ ಟರ್ಕಿ

ಮುಖ್ಯಾಂಶಗಳು
- ಅಕ್ಟೋಬರ್ 1ರಂದು ಚುನಾವಣೆ ನಿಗದಿಯಾಗಿತ್ತು
- ಟರ್ಕಿ ನೇತೃತ್ವದ ತಂಡಕ್ಕೆ ಎಫ್‌ಐಎಚ್ ಅನುಮೋದನೆ
- ಭೋಲಾ ನಾಥ್ ಪ್ರಧಾನ ಕಾರ್ಯದರ್ಶಿ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಮಾಜಿ ನಾಯಕ, ಒಲಿಂಪಿಯನ್ ದಿಲೀಪ್ ಟರ್ಕಿ ಅವರು ಹಾಕಿ ಇಂಡಿಯಾ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಇದರೊಂದಿಗೆ ಸಂಸ್ಥೆಗೆ ಮುಖ್ಯಸ್ಥರಾದ ಮೊದಲ ಆಟಗಾರ ಎನಿಸಿಕೊಂಡರು.

ಹಾಕಿ ಇಂಡಿಯಾಗೆ ಅಕ್ಟೋಬರ್ 1ರಂದು ಚುನಾವಣೆ ನಿಗದಿಯಾಗಿತ್ತು. ಆದರೆ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ ಯಾವುದೇ ಸ್ಪರ್ಧಿಗಳಿರದ ಕಾರಣ ಮುಂಚಿತವಾಗಿಯೇ ಫಲಿತಾಂಶ ಪ್ರಕಟಿಸಲಾಗಿದೆ. ಫೆಡರೇಷನ್‌ನ ನಿಯಮಾವಳಿಗಳ ಪ್ರಕಾರ ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದಾರೆಂದು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) ಪತ್ರದಲ್ಲಿ ತಿಳಿಸಲಾಗಿದೆ.

ಅಧ್ಯಕ್ಷ ಹುದ್ದೆಗೆ ನಾಮಪತ್ರ ಸಲ್ಲಿಸಿದ್ದ ಉತ್ತರ ಪ್ರದೇಶ ಹಾಕಿ ಫೆಡರೇಷನ್ ಅಧ್ಯಕ್ಷ ರಾಕೇಶ್ ಕತ್ಯಾಲ್ ಮತ್ತು ಹಾಕಿ ಜಾರ್ಖಂಡ್ ಅಧ್ಯಕ್ಷ ಭೋಲಾ ನಾಥ್ ಸಿಂಗ್ ಶುಕ್ರವಾರ ನಾಮಪತ್ರ ಹಿಂಪಡೆದಿದ್ದರಿಂದ ಟರ್ಕಿ ಹಾದಿ ಸುಗಮವಾಯಿತು. ಭೋಲಾ ನಾಥ್ ಅವರು ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆಯಾದರು.

ಟರ್ಕಿ ನೇತೃತ್ವದ ತಂಡದ ಆಯ್ಕೆಯನ್ನು ಎಫ್‌ಐಎಚ್ ಅನುಮೋದಿಸಿದೆ.

ಚುನಾವಣಾ ಪ್ರಕ್ರಿಯೆಗಳನ್ನು ಸುಗಮವಾಗಿ ನಡೆಸಿಕೊಟ್ಟ ಆಡಳಿತಗಾರರ ಸಮಿತಿಯ (ಸಿಒಎ) ಸದಸ್ಯರಾದ ನ್ಯಾಯಮೂರ್ತಿ ಅನಿಲ್ ದವೆ, ಎಸ್.ವೈ. ಖುರೇಷಿ ಮತ್ತು ಜಾಫರ್ ಇಕ್ಬಾಲ್ ಅವರ ಕಾರ್ಯವನ್ನು ಎಫ್‌ಐಎಚ್ ಶ್ಲಾಘಿಸಿದೆ.

‘ಭಾರತದ ಹಾಕಿಯನ್ನು ಉನ್ನತ ಹಂತಕ್ಕೆ ಕೊಂಡೊಯ್ಯುವ ವಿಶ್ವಾಸವಿದೆ. ಸಿಒಎ ಮತ್ತು ಎಫ್‌ಐಎಚ್‌ಗೆ ಧನ್ಯವಾದಗಳು’ ಎಂದು ಟರ್ಕಿ ಟ್ವೀಟ್ ಮಾಡಿದ್ದಾರೆ.

‘ದಿಲೀಪ್ ಟರ್ಕಿ ಹಾಕಿಯ ದಂತಕತೆ. ಅವರೊಂದಿಗೆ ಚರ್ಚಿಸಿ ನಾಮಪತ್ರ ಹಿಂಪಡೆದಿದ್ದೇನೆ. ಹಾಕಿ ಇಂಡಿಯಾದ ಬೆಳವಣಿಗೆಗೆ ಜೊತೆಗೂಡಿ ಕೆಲಸ ಮಾಡುವೆವು’ ಎಂದು ಭೋಲಾ ನಾಥ್ ಹೇಳಿದ್ದಾರೆ.

44 ವರ್ಷದ ಟರ್ಕಿ ಅವರು 1998ರ ಬ್ಯಾಂಕಾಕ್ ಮತ್ತು 2012ರ ಬೂಸಾನ್ ಏಷ್ಯನ್ ಗೇಮ್ಸ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದ್ದ ಭಾರತ ತಂಡದ ಸದಸ್ಯರಾಗಿದ್ದರು.

ಅವಿರೋಧ ಆಯ್ಕೆಯಾದ ಇತರರು: ಅಸೀಮ್ ಅಲಿ (ಜಮ್ಮು ಮತ್ತು ಕಾಶ್ಮೀರ), ಕರ್ನಾಟಕದ ಎಸ್‌ವಿಎಸ್ ಸುಬ್ರಮಣ್ಯ ಗುಪ್ತಾ (ಇಬ್ಬರೂ ಉಪಾಧ್ಯಕ್ಷರು), ಶೇಖರ್ ಜೆ. ಮನೋಹರನ್ (ತಮಿಳುನಾಡು, ಖಜಾಂಚಿ), ಆರತಿ ಸಿಂಗ್, ಸುನಿಲ್ ಮಲಿಕ್ (ರಾಜಸ್ಥಾನ ಮತ್ತು ಹರಿಯಾಣ, ಜಂಟಿ ಕಾರ್ಯದರ್ಶಿಗಳು).

ಕಾರ್ಯಕಾರಿ ಮಂಡಳಿ ಸದಸ್ಯರು: ಅರುಣ್ ಕುಮಾರ್ ಸಾರಸ್ವತ್ (ರಾಜಸ್ಥಾನ), ಅಸ್ರಿತಾ ಲಾಕ್ರಾ (ಜಾರ್ಖಂಡ್), ಗುರುಪ್ರೀತ್ ಕೌರ್ (ದೆಹಲಿ), ವಿ.ಸುನಿಲ್ ಕುಮಾರ್ (ಕೇರಳ) ಮತ್ತು ತಪನ್ ಕುಮಾರ್ ದಾಸ್ (ಅಸ್ಸಾಂ).

ಭಾರತ–ಇಂಗ್ಲೆಂಡ್ 3ನೇ ಏಕದಿನ ಪಂದ್ಯ ಇಂದು; ಕ್ಲೀನ್‌ಸ್ವೀಪ್ ಮೇಲೆ ಕಣ್ಣು

ಜೂಲನ್ ‘ಬೀಳ್ಕೊಡುಗೆಗೆ’ ಲಾರ್ಡ್ಸ್ ಸಜ್ಜು



ಜೂಲನ್ ಸಾಧನೆಯ ಹಾದಿ

ಮಾದರಿ	ಪಂದ್ಯ	ವಿಕೆಟ್	ಶ್ರೇಷ್ಠ	ಗಳಿಸಿದ ರನ್	ಶ್ರೇಷ್ಠ
ಟೆಸ್ಟ್	12	44	25ಕ್ಕೆ5	291	69
ಏಕದಿನ	203	253	31ಕ್ಕೆ6	1228	57
ಟಿ20	68	56	11ಕ್ಕೆ5	405	37*

ದಾಖಲೆಗಳು

2 ದೀರ್ಘ ಕಾಲದವರೆಗೆ ಅಂತರರಾಷ್ಟ್ರೀಯ ಕ್ರಿಕೆಟ್ ಆಡಿದ ಎರಡನೇ ಆಟಗಾರ್ತಿ. ಒಟ್ಟು 19 ವರ್ಷ 262 ದಿನಗಳವರೆಗೆ ಅವರು ಆಡಿದ್ದಾರೆ. ನ್ಯೂಜಿಲೆಂಡ್‌ನ ವೆರಾ ಎಸ್ತರ್ ಬರ್ಟ್ (20 ವರ್ಷ;335ದಿನ) ಮೊದಲ ಸ್ಥಾನದಲ್ಲಿದ್ದಾರೆ.

9,945 ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಎಸೆತಗಳನ್ನು ಬೌಲಿಂಗ್ ಮಾಡಿದವರಲ್ಲಿ ಮೊದಲಿಗರು

253 ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿರುವ ಬೌಲರ್

18 ಟೆಸ್ಟ್‌ನಲ್ಲಿ ಅತಿಹೆಚ್ಚು ಎಲ್‌ಬಿಡಬ್ಲ್ಯು ಮೂಲಕ ಪಡೆದ ವಿಕೆಟ್‌ಗಳು

68 ಏಕದಿನ ಕ್ರಿಕೆಟ್‌ನಲ್ಲಿ ಹಿಡಿತಕ್ಕೆ ಪಡೆದ ಕ್ಯಾಚ್‌ಗಳು

1 ಏಕದಿನ ಕ್ರಿಕೆಟ್‌ನಲ್ಲಿ ಒಂದು ಸಾವಿರಕ್ಕೂ ಹೆಚ್ಚು ರನ್, 50ಕ್ಕೂ ಹೆಚ್ಚು ವಿಕೆಟ್ ಹಾಗೂ 50ಕ್ಕೂ ಹೆಚ್ಚು ಕ್ಯಾಚ್ ಪಡೆದ ದಾಖಲೆ

ಲಂಡನ್(ಪಿಟಿಐ): ಮಹಿಳಾ ಕ್ರಿಕೆಟ್ ಅಂಗಳದಲ್ಲಿ ‘ವೇಗದ ಬೌಲರ್’ ಎಂಬ ಪದಕ್ಕೆ ಮತ್ತೊಂದು ಹೆಸರೆಂದರೆ ಜೂಲನ್ ಗೋಸ್ವಾಮಿ. ಪಶ್ಚಿಮ ಬಂಗಾಳದ ಚಕ್ದಾ ಗ್ರಾಮದ ಪ್ರತಿಭೆ ಕ್ರಿಕೆಟ್ ರಂಗದಲ್ಲಿ ದಂತಕಥೆಯಾಗಿ ಬೆಳೆದ ಕತೆಯೇ ರೋಮಾಂಚನ ಮೂಡಿಸುತ್ತದೆ.

ಇದೀಗ ಜೂಲನ್ ತಮ್ಮ ವೃತ್ತಿ ಜೀವನದ ಕೊನೆಯ ಹಂತಕ್ಕೆ ಬಂದು ನಿಂತಿದ್ದಾರೆ. ಶನಿವಾರ ‘ಕ್ರಿಕೆಟ್ ಕಾಶಿ’ ಲಾರ್ಡ್ಸ್‌ನಲ್ಲಿ ತಮ್ಮ ಕೊನೆಯ ಅಂತರರಾಷ್ಟ್ರೀಯ ಏಕದಿನ ಪಂದ್ಯದಲ್ಲಿ ಅವರು ಬೌಲಿಂಗ್ ಮಾಡಲಿದ್ದಾರೆ. ಮೂರು ಪಂದ್ಯಗಳ ಸರಣಿಯಲ್ಲಿ 2–0ಯಿಂದ ಜಯಿಸಿರುವ ಭಾರತ ತಂಡವು ಇನ್ನೊಂದು ಪಂದ್ಯ ಗೆದ್ದು ಕ್ಲೀನ್‌ಸ್ವೀಪ್ ಸಾಧನೆಯೊಂದಿಗೆ ಜೂಲನ್‌ಗೆ ಬೀಳ್ಕೊಡುಗೆ ನೀಡುವ ಛಲದಲ್ಲಿದೆ.

5.11 ಅಡಿ ಎತ್ತರದ ಜೂಲನ್ ಅವರ ಸಾಧನೆಗಳು ಮುಗಿಲೆತ್ತರ. 39 ವರ್ಷದ ಬಲಗೈ ಮಧ್ಯಮವೇಗಿ ಜೂಲನ್ ಖಾತೆಯಲ್ಲಿ ವಿಶ್ವದಾಖಲೆಗಳು ತುಂಬಿವೆ. ಎರಡು ದಶಕಗಳ ಅವರ ವೃತ್ತಿಜೀವನದಲ್ಲಿ ಮಹಿಳಾ ಕ್ರಿಕೆಟ್‌ನ ಎಲ್ಲ ದೇಶಗಳ ತಂಡದ ಶ್ರೇಷ್ಠ ಬ್ಯಾಟರ್‌ಗಳ ವಿಕೆಟ್‌ಗಳನ್ನು ಗಳಿಸಿದ ಶ್ರೇಯ ಅವರದ್ದು. 2002ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಜೂಲನ್ 200ಕ್ಕೂ ಹೆಚ್ಚು ಏಕದಿನ ಪಂದ್ಯಗಳನ್ನು ಆಡಿರುವ ಆಟಗಾರ್ತಿ.

ಅವರ ಸಾಧನೆಗೆ ತಕ್ಕಂತೆ ಗೌರವಯುತ ವಿದಾಯವೂ ಲಭಿಸಲಿದೆ. ಲಾರ್ಡ್ಸ್ ಕ್ರೀಡಾಂಗಣದಲ್ಲಿ ತಮ್ಮ ಕೊನೆಯ ಪಂದ್ಯವನ್ನು ಆಡಿ ನಿರ್ಗಮಿಸುವ ಅಪೂರ್ವ ಅವಕಾಶ ಅವರದ್ದಾಗಿದೆ. ಕ್ರಿಕೆಟ್ ದಿಗ್ಗಜರಾದ ಸುನೀಲ್ ಗಾವಸ್ಕರ್, ಬ್ರಯನ್ ಲಾರಾ, ಮಿಥಾಲಿ ರಾಜ್ ಅವರಿಗೂ ಲಾರ್ಡ್ಸ್‌ನಲ್ಲಿ ತಮ್ಮ ಕೊನೆಯ ಪಂದ್ಯ ಆಡುವ ಅವಕಾಶ ಲಭಿಸಿರಲಿಲ್ಲ.

ಅಲ್ಲದೇ ಎರಡು ದಶಕಗಳ ನಂತರ ಇಂಗ್ಲೆಂಡ್‌ನಲ್ಲಿ ಏಕದಿನ ಸರಣಿ ಜಯಿಸಿದ ಶ್ರೇಯವೂ ಭಾರತಕ್ಕೆ ಒಲಿದಿದೆ. ಜೂಲನ್ ಅವರ ಸಾಧನೆಯಿಂದಾಗಿ ಹತ್ತಾರು ಆಟಗಾರ್ತಿಯರು ವೇಗದ ಬೌಲಿಂಗ್ ಮಾಡುವ ಆಸಕ್ತಿ ತಳೆದಿದ್ದು ಸುಳ್ಳಲ್ಲ.

ಸದ್ಯ ತಂಡದಲ್ಲಿರುವ ಮೇಘನಾ ಸಿಂಗ್, ರೇಣುಕಾ ಠಾಕೂರ್ ಮತ್ತು ಪೂಜಾ ವಸ್ತ್ರಕರ್ ಅವರು ತಲುಪಬೇಕಾದ ‘ಮೈಲುಗಲ್ಲು’ ಜೂಲನ್ ಅವರೇ ಆಗಿದ್ದಾರೆ.

ಅವರಿಗೆ ಶನಿವಾರ ತಂಡದ ಆಟಗಾರ್ತಿಯರು ‘ಗಾರ್ಡ್ ಆಫ್ ಆನರ್’ ನೀಡಲಿದ್ದಾರೆ. ಕೊನೆಯ ಬಾರಿಗೆ ಜೂಲನ್ ಅವರ ಸ್ವಿಂಗ್ ಎಸೆತಗಳ ಲಾಸ್ಯವನ್ನು ಅಭಿಮಾನಿಗಳು ಕಣ್ತುಂಬಿಕೊಳ್ಳಲಿದ್ದಾರೆ.

ತಂಡಗಳು: ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ, ಶಫಾಲಿ ವರ್ಮಾ, ಸಬಿನೇನಿ ಮೇಘನಾ, ದೀಪ್ತಿ ಶರ್ಮಾ, ಯಷ್ಟಿಕಾ ಭಾಟಿಯಾ (ವಿಕೆಟ್‌ಕೀಪರ್), ಪೂಜಾ ವಸ್ತ್ರಕರ್, ಸ್ನೇಹಾ ರಾಣಾ, ರೇಣುಕಾ ಠಾಕೂರ್, ಮೇಘನಾ ಸಿಂಗ್, ರಾಜೇಶ್ವರಿ ಗಾಯಕವಾಡ, ಹರ್ಲೀನ್ ಡಿಯೊಲ್, ದಯಾಳನ್ ಹೇಮಲತಾ, ಸಿಮ್ರನ್ ದಿಲ್ ಬಹದ್ದೂರ್, ಜೂಲನ್ ಗೋಸ್ವಾಮಿ, ತಾನಿಯಾ ಭಾಟಿಯಾ, ಜೆಮಿಮಾ ರಾಡ್ರಿಗಸ್

ಇಂಗ್ಲೆಂಡ್: ಎಮಿ ಜೋನ್ಸ್ (ನಾಯಕಿ/ವಿಕೆಟ್‌ಕೀಪರ್), ಟ್ಯಾಮಿ ಬೆಮೌಂಟ್, ಲಾರೆನ್ ಬೆಲ್, ಮೇಯಾ ಬೌಷಿರ್, ಅಲೈಸ್ ಕ್ಯಾಪ್ಸಿ, ಕೇಟ್ ಕ್ರಾಸ್, ಫ್ರೇಯಾ ಡೇವಿಸ್, ಅಲೈಸ್ ಡೇವಿಡ್ಸನ್ – ರಿಚರ್ಡ್ಸ್, ಚಾರ್ಲಿ ಡೀನ್, ಸೋಫಿಯಾ ಡಂಕ್ಲಿ, ಸೋಫಿ ಎಕ್ಲೆಸ್ಟೋನ್, ಫ್ರೇಯಾ ಕೆಂಪ್, ಐಸಿ ವಾಂಗ್, ಡ್ಯಾನಿಲ್ ವೈಟ್.

ಪಂದ್ಯ ಆರಂಭ: ಮಧ್ಯಾಹ್ನ 3.30

ದುಲೀಪ್ ಟ್ರೋಫಿ: ಪಶ್ಚಿಮ ವಲಯ ಮರುಹೋರಾಟ

ಯಶಸ್ವಿ ಜೈಸ್ವಾಲ್ ದ್ವಿಶತಕದಾಟ


ದ್ವಿಶತಕ ಗಳಿಸಿದ ಯಶಸ್ವಿ ಜೈಸ್ವಾಲ್ –ಸಂಗ್ರಹ ಚಿತ್ರ

ಕೊಯಮತ್ತೂರು (ಪಿಟಿಐ): ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 209) ಅವರ ಅಜೇಯ ದ್ವಿಶತಕದ ನೆರವಿನಿಂದ ಪಶ್ಚಿಮ ವಲಯ ತಂಡ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ವಲಯಕ್ಕೆ ದಿಟ್ಟ ಉತ್ತರ ನೀಡಿದೆ.

ಕೊಯಮತ್ತೂರಿನಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಶುಕ್ರವಾರ 20 ವರ್ಷದ ಯುವ ಬ್ಯಾಟರ್ ಜೈಸ್ವಾಲ್ ಮೆರೆದಾಡಿದರು. ಇದರಿಂದ ಪಶ್ಚಿಮ ವಲಯ ದಿನದಾಟದ ಅಂತ್ಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ 85 ಓವರ್‌ಗಳಲ್ಲಿ 3 ವಿಕೆಟ್‌ಗೆ 376 ರನ್ ಗಳಿಸಿದೆ.

ಅಜಿಂಕ್ಯ ರಹಾನೆ ನೇತೃತ್ವದ ತಂಡ ಮೊದಲ ಇನಿಂಗ್ಸ್‌ನಲ್ಲಿ 57 ರನ್‌ಗಳ ಹಿನ್ನಡೆ ಅನುಭವಿಸಿತ್ತು. ಆದರೆ ಎರಡನೇ ಇನಿಂಗ್ಸ್‌ನಲ್ಲಿ ಭರ್ಜರಿ ಆಟವಾಡಿ ಇದೀಗ 319 ರನ್‌ಗಳ ಮುನ್ನಡೆಯಲ್ಲಿದೆ.

ಇನ್ನೂ ಎರಡು ದಿನಗಳ ಆಟ ಬಾಕಿಯಿದ್ದು, ಶನಿವಾರವೂ ಬ್ಯಾಟಿಂಗ್ ಮುಂದುವರಿಸಿ ಎದುರಾಳಿ ತಂಡಕ್ಕೆ ಕಠಿಣ ಗುರಿ ನೀಡುವ ಲೆಕ್ಕಾಚಾರವನ್ನು ರಹಾನೆ ಬಳಗ ಹಾಕಿಕೊಂಡಿದೆ.

244 ಎಸೆತಗಳನ್ನು ಎದುರಿಸಿದ ಜೈಸ್ವಾಲ್ 23 ಬೌಂಡರಿ ಹಾಗೂ 3 ಸಿಕ್ಸರ್ ಹೊಡೆದರು. ಅವರೊಂದಿಗೆ ಸರ್ಫರಾಜ್ ಖಾನ್ (ಬ್ಯಾಟಿಂಗ್ 30) ಅವರು ಶನಿವಾರ ಬ್ಯಾಟಿಂಗ್ ಮುಂದುವರಿಸಲಿದ್ದಾರೆ.

ಜೈಸ್ವಾಲ್ ಮತ್ತು ಪ್ರಿಯಾಂಕ್ ಪಾಂಚಾಲ್ (40 ರನ್, 64 ಎ.) ಮೊದಲ ವಿಕೆಟ್‌ಗೆ 110 ರನ್ ಸೇರಿಸಿದರು. ಪಾಂಚಾಲ್ ವಿಕೆಟ್ ಪಡೆದ ಸಾಯಿ ಕಿಶೋರ್ ಈ ಜತೆಯಾಟ ಮುರಿದರು. ರಹಾನೆ (15) ಅವರು ಕೆ.ಗೌತಮ್‌ಗೆ ಬೇಗನೇ ವಿಕೆಟ್ ಒಪ್ಪಿಸಿದರು.

ಆದರೆ ಜೈಸ್ವಾಲ್ ಅವರನ್ನು ಕೂಡಿಕೊಂಡ ಶ್ರೇಯಸ್ ಅಯ್ಯರ್ (71 ರನ್, 113 ಎ.) ಮೂರನೇ ವಿಕೆಟ್‌ಗೆ 169 ರನ್ ಸೇರಿಸಿ ಎದುರಾಳಿ ತಂಡವನ್ನು ಕಾಡಿದರು. ದಕ್ಷಿಣ ವಲಯ ತಂಡದ ಸ್ಪಿನ್ ಮತ್ತು ವೇಗದ ಬೌಲಿಂಗ್ ದಾಳಿಯನ್ನು ಈ ಜೋಡಿ ಸಮರ್ಥವಾಗಿ ಎದುರಿಸಿತು.

ಮೊದಲ ಇನಿಂಗ್ಸ್‌ನಲ್ಲಿ ಕೇವಲ ಒಂದು ರನ್ ಗಳಿಸಿ ಔಟಾಗಿದ್ದ ಜೈಸ್ವಾಲ್, ಸೊಗಸಾದ ಬ್ಯಾಟಿಂಗ್ ಪ್ರದರ್ಶಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 96.3 ಓವರ್‌ಗಳಲ್ಲಿ 270. ದಕ್ಷಿಣ ವಲಯ: 83.1 ಓವರ್‌ಗಳಲ್ಲಿ 327. ಎರಡನೇ ಇನಿಂಗ್ಸ್: ಪಶ್ಚಿಮ ವಲಯ: 85 ಓವರ್‌ಗಳಲ್ಲಿ 3 ವಿಕೆಟ್‌ಗೆ 376 (ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ 209, ಪ್ರಿಯಾಂಕ್ ಪಾಂಚಾಲ್ 40, ರಹಾನೆ 15, ಶ್ರೇಯಸ್ ಅಯ್ಯರ್ 71, ಸರ್ಫರಾಜ್ ಖಾನ್ ಬ್ಯಾಟಿಂಗ್ 30, ಆರ್.ಸಾಯಿ ಕಿಶೋರ್ 100ಕ್ಕೆ 2, ಕೆ.ಗೌತಮ್ 139ಕ್ಕೆ 1)


ಸ್ಕ್ವಾಷ್: ಅಭಯ್ ಚಾಂಪಿಯನ್

ಚೆನ್ನೈ (ಪಿಟಿಐ): ಭಾರತದ ಅಭಯ್ ಸಿಂಗ್ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಎಚ್‌ಸಿಎಲ್–ಎಸ್‌ಆರ್‌ಎಫ್‌ಐ ಇಂಡಿಯನ್ ಟೂರ್ ಸ್ಕ್ವಾಷ್‌ನ ಚೆನ್ನೈ ಲೆಗ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರು. ಆದರೆ ಸುನಯನಾ ಕುರುವಿಲ ಫೈನಲ್‌ನಲ್ಲಿ ಎಡವಿದರು.

ಇಲ್ಲಿ ನಾಲ್ಕನೇ ಶ್ರೇಯಾಂಕ ಪಡೆದಿದ್ದ ಅಭಯ್, ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ 11-4, 11-3, 11-4 ರಲ್ಲಿ ಈಜಿಪ್ಟ್‌ನ ಖಾಲೆದ್ ಲಬೀಬ್ ಎದುರು ಜಯಿಸಿದರು. ಈ ಪಂದ್ಯ 22 ನಿಮಿಷಗಳಲ್ಲಿ ಕೊನೆಗೊಂಡಿತು. ಅಭಯ್ ಅವರು ಸೆಮಿಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರ ಈಜಿಪ್ಟ್‌ನ ಯಾಸಿನ್ ಎಲ್‌ಶಫೆಯಿಗೆ ಆಘಾತ ನೀಡಿದ್ದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಈಜಿಪ್ಟ್‌ನ ಕೆನ್ಜಿ ಐಮನ್ 11-7, 11-2, 11-6 ರಲ್ಲಿ ಸುನಯನಾ ಅವರನ್ನು ಮಣಿಸಿ ಚಾಂಪಿಯನ್ ಆದರು. ಈ ಟೂರ್ನಿಯಲ್ಲಿ ಆತಿಥೇಯ ಭಾರತ ಅಲ್ಲದೆ ಈಜಿಪ್ಟ್, ಕೆನಡಾ, ಫ್ರಾನ್ಸ್, ಜಪಾನ್, ರಷ್ಯಾ ಮತ್ತು ಸ್ಪೇನ್ ಒಳಗೊಂಡಂತೆ 10 ದೇಶಗಳ 48 ಸ್ಪರ್ಧಿಗಳು ಪಾಲ್ಗೊಂಡಿದ್ದರು.

ಫೆಡರರ್ ವಿದಾಯ ಟೂರ್ನಿ ಯುರೋಪ್‌ಗೆ 2–0 ಮುನ್ನಡೆ


ರೋಜರ್ ಫೆಡರರ್ ಪ್ರೇಕ್ಷಕರತ್ತ ಕೈಬೀಸಿದರು –ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ರೋಜರ್ ಫೆಡರರ್ ಅವರ ವಿದಾಯ ಟೂರ್ನಿ ಎಂಬ ಕಾರಣ ಸಾಕಷ್ಟು ಸುದ್ದಿ ಮಾಡಿರುವ ಲೇವರ್ ಕಪ್ ಟೆನಿಸ್‌ನಲ್ಲಿ ‘ಟೀಮ್ ಯುರೋಪ್’ ತಂಡ 2–0 ರಲ್ಲಿ ಮುನ್ನಡೆ ಸಾಧಿಸಿತು.

ಶುಕ್ರವಾರ ನಡೆದ ಮೊದಲ ಸಿಂಗಲ್ಸ್‌ನಲ್ಲಿ ಕ್ಯಾಸ್ಪರ್ ರೂಡ್ ಅವರು 6-4, 5-7, 10-7 ರಲ್ಲಿ ‘ಟೀಮ್ ವರ್ಲ್ಡ್’ ತಂಡದ ಜಾಕ್ ಸಾಕ್ ಅವರನ್ನು ಮಣಿಸಿ 1–0 ಮುನ್ನಡೆ ತಂದಿತ್ತರು. ಎರಡನೇ ಸಿಂಗಲ್ಸ್‌ನಲ್ಲಿ ಸ್ಟೆಫಾನೊಸ್ ಸಿಟ್ಸಿಪಾಸ್ 6-2, 6-1 ರಲ್ಲಿ ಡಿಯಾಗೊ ಶ್ವಾರ್ಟ್ಸ್‌ಮನ್ ವಿರುದ್ಧ ಗೆದ್ದರು.

ಮೂರನೇ ಸಿಂಗಲ್ಸ್‌ನಲ್ಲಿ ಆ್ಯಂಡಿ ಮರೆ ಮತ್ತು ಅಲೆಕ್ಸ್ ಡಿ ಮಿನೌರ್ ಎದುರಾಗುವರು. ಡಬಲ್ಸ್‌ನಲ್ಲಿ ಫೆಡರರ್– ರಫೆಲ್ ನಡಾಲ್ ಜೋಡಿ, ಜಾಕ್ ಸಾಕ್ ಮತ್ತು ಫ್ರಾನ್ಸೆಸ್ ಟೈಫೊ ಅವರನ್ನು ಎದುರಿಸಲಿದೆ.

ದಿನದ ಎರಡನೇ ಅವಧಿಯಲ್ಲಿ ಆಡಲು ಫೆಡರರ್, ತಂಡದ ಸಹ ಆಟಗಾರರ ಜತೆ ಕೋರ್ಟ್‌ಗೆ ಬಂದಾಗ ಭಾವುಕ ಸನ್ನಿವೇಶಗಳು ಸೃಷ್ಟಿಯಾದವು. ಸ್ವಿಸ್ ದಿಗ್ಗಜನ ಆಟವನ್ನು ಕೊನೆಯ ಬಾರಿ ಕಣ್ತುಂಬಿಕೊಳ್ಳಲು ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು.

ಅಂಕಣಕ್ಕೆ ನುಗ್ಗಿದ ಪ್ರತಿಭಟನಕಾರ: ಸಿಟ್ಸಿಪಾಸ್–ಶ್ವಾರ್ಟ್ಸ್‌ಮನ್ ನಡುವಿನ ಪಂದ್ಯದ ವೇಳೆ ಪ್ರತಿಭಟನಕಾರನೊಬ್ಬ ಅಂಕಣಕ್ಕೆ ನುಗ್ಗಿದ ಕಾರಣ ಕೆಲಕಾಲ ಆಟ ಸ್ಥಗಿತಗೊಳಿಸಲಾಯಿತು.

ಬ್ರಿಟನ್‌ನಲ್ಲಿ ಖಾಸಗಿ ಜೆಟ್‌ಗಳ ಬಳಕೆ ನಿಲ್ಲಿಸಬೇಕು ಎಂಬ ಬೇಡಿಕೆ ಮುಂದಿಟ್ಟು ಆತ ಪ್ರತಿಭಟನೆ ನಡೆಸಿದ್ದಾನೆ. ಏಕಾಏಕಿ ಅಂಕಣಕ್ಕೆ ನುಗ್ಗಿದನಲ್ಲದೆ ತನ್ನ ಕೈಯನ್ನು ಬೆಂಕಿಯಿಂದ ಸುಟ್ಟುಕೊಳ್ಳಲು ಪ್ರಯತ್ನಿಸಿದ್ದಾನೆ. ಭದ್ರತಾ ಸಿಬ್ಬಂದಿ ಆತನನ್ನು ಕೂಡಲೇ ವಶಕ್ಕೆ ಪಡೆದರು.

ಫುಟ್‌ಬಾಲ್: ಬಿಎಫ್‌ಸಿಗೆ ಜಯ

ಬೆಂಗಳೂರು: ಥಾಯ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಬಿಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆದ್ದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 4–0 ಗೋಲುಗಳಿಂದ ಎಂಇಜಿ ಮತ್ತು ಸೆಂಟರ್ ತಂಡವನ್ನು ಮಣಿಸಿತು.

ಸುಧೀರ್ ಅವರು 36ನೇ ನಿಮಿಷದಲ್ಲಿ ಬಿಎಫ್‌ಸಿ ತಂಡದ ಗೋಲಿನ ಖಾತೆ ತೆರೆದರು. ಥಾಯ್ ಸಿಂಗ್ 61ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ದಮೈತ್‌ಫಾಂಗ್ ಲಿಂಗ್ಡೊ 67ನೇ ನಿಮಿಷದಲ್ಲಿ ತಂಡದ ಮೂರನೇ ಗೋಲು ಗಳಿಸಿದರೆ, ಥಾಯ್ ಸಿಂಗ್ 69ನೇ ನಿಮಿಷದಲ್ಲಿ ಇನ್ನೊಂದು ಗೋಲು ಗಳಿಸಿ ತಂಡದ ಭರ್ಜರಿ ಗೆಲುವಿಗೆ ಕಾರಣರಾದರು.

ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು 3–0 ಗೋಲುಗಳಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು. ಕೊಸಾಯ್ ಬರ್ನಾರ್ಡ್ ಯಾಸೊ (16ನೇ ನಿ.), ಅಲೆನ್ ಲಿಂಗ್ಡೊ (60 ನೇ ನಿ.) ಮತ್ತು ಶಾನಿದ್ ವಾಲನ್ (86) ಅವರು ವಿಜಯಿ ತಂಡದ ಪರ ಚೆಂಡನ್ನು ಗುರಿ ಸೇರಿಸಿದರು.


ಪ್ರಶಸ್ತಿಯೊಂದಿಗೆ ಕಾಜಲ್ ರಾಮಿಸೆಟ್ಟಿ ಮತ್ತು ಚಂದನ್ ಶಿವರಾಜ್

ಚಂದನ್, ಕಾಜಲ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಚಂದನ್ ಶಿವರಾಜ್ ಮತ್ತು ಕಾಜಲ್ ರಾಮಿಸೆಟ್ಟಿ ಅವರು ಎಐಟಿಎ ಸಿಎಸ್7 18 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಟೆನಿಸ್360 ಅಕಾಡೆಮಿ ಅಂಗಣದಲ್ಲಿ ನಡೆದ ಟೂರ್ನಿಯ ಬಾಲಕರ ಫೈನಲ್ ಹಣಾಹಣಿಯಲ್ಲಿ ಮೂರನೇ ಶ್ರೇಯಾಂಕದ ಚಂದನ್ 7-5, 6-0ರಿಂದ ಕರ್ನಾಟಕದ ಮನದೀಪ್ ರೆಡ್ಡಿ ಕುದುಮಲ ಅವರನ್ನು ಪರಾಭವಗೊಳಿಸಿದರು. ಮೊದಲ ಸೆಟ್‌ನಲ್ಲಿ ಸ್ವಲ್ಪ ಹೋರಾಟ ತೋರಿದ ಮನದೀಪ್, ಎರಡನೇ ಸೆಟ್‌ಅನ್ನು ಸುಲಭವಾಗಿ ಕೈಚೆಲ್ಲಿದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಕಾಜಲ್ 6-4, 4-6, 6-2ರಿಂದ ಕರ್ನಾಟಕದವರೇ ಆದ ಹೃದಯೇಶಿ ಪೈ ಅವರನ್ನು ಸೋಲಿಸಿದರು.

ಬಾಲಕರ ಡಬಲ್ಸ್‌ನಲ್ಲಿ ಅರ್ಜುನ್ ಪ್ರೇಮಕುಮಾರ್– ಅರ್ಜುನ್ ಜೀತೇಂದ್ರ 6-2, 2-6, 10-8ರಿಂದ ಅನೂಪ್ ಕೇಶವಮೂರ್ತಿ–ತಿರುಮುರುಗನ್ ಅವರನ್ನು ಸೋಲಿಸಿ ಪ್ರಶಸ್ತಿ ಜಯಿಸಿದರು. ಬಾಲಕಿಯರ ಡಬಲ್ಸ್ ಕಿರೀಟವು ಕಾಜಲ್–ಹೃದಯೇಶಿ ಪಾಲಾಯಿತು. ಫೈನಲ್‌ನಲ್ಲಿ ಈ ಜೋಡಿಯು 6-2, 6-3ರಿಂದ ಮಧ್ಯಪ್ರದೇಶದ ಅಫ್ಸಾ ಅಹಮದ್ ಮತ್ತು ಮಹಾರಾಷ್ಟ್ರದ ಶ್ರೇಯಾ ಸಾಯಿ ಅವರನ್ನು ಮಣಿಸಿದರು.

ಟಿಟಿ: ಸೆಮಿಗೆ ಸತ್ಯನ್, ಮಣಿಕಾ


ಮಣಿಕಾ ಬಾತ್ರಾ– ಪಿಟಿಐ ಚಿತ್ರ

ಸೂರತ್ (ಪಿಟಿಐ): ಜಿ.ಸತ್ಯನ್ ಅವರು ರಾಷ್ಟ್ರೀಯ ಕ್ರೀಡಾಕೂಟದ ಟೇಬಲ್ ಟೆನಿಸ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಮಣಿಕಾ ಬಾತ್ರಾ ಕೂಡ ನಾಲ್ಕರ ಘಟ್ಟ ಪ್ರವೇಶಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಎಂಟರಘಟ್ಟದ ಪಂದ್ಯದಲ್ಲಿ ತಮಿಳುನಾಡಿನ ಸತ್ಯನ್ ಶುಕ್ರವಾರ 11-7, 11-8, 8-11, 14-12, 13-11ರಿಂದ ಗುಜರಾತ್‌ನ ಮಾನವ್ ಥಕ್ಕರ್ ಅವರನ್ನು ಸೋಲಿಸಿದರು.

16ರ ಘಟ್ಟದಲ್ಲಿ ಸತ್ಯನ್ 7-11, 11-8, 7-11, 11-6, 11-9, 11-6ರಿಂದ ಪಶ್ಚಿಮ ಬಂಗಾಳದ ರೋನಿತ್ ಭಾಂಜಾ ಅವರನ್ನು ಮಣಿಸಿದ್ದರು.

ದೆಹಲಿ ತಂಡಕ್ಕಾಗಿ ಆಡುತ್ತಿರುವ ಮಣಿಕಾ, ನಾಲ್ಕರ ಘಟ್ಟದಲ್ಲಿ ಕೃತ್ತಿಕಾ ಸಿನ್ಹಾ ರಾಯ್ ಅವರನ್ನು ಸೋಲಿಸಿದರು. ಕ್ವಾರ್ಟರ್‌ಫೈನಲ್‌ನಲ್ಲಿ ಮಣಿಕಾ 4-11, 11-8, 12-10, 4-11, 11-5, 8-11, 11-7ರಿಂದ ಕರ್ನಾಟಕದ ಖುಷಿ ವಿ. ಅವರನ್ನು ಪರಾಭವಗೊಳಿಸಿದ್ದರು. ಪಂದ್ಯ ಕೈಚೆಲ್ಲಿದರೂ ಖುಷಿಯ ಹೋರಾಟ ಗಮನಸೆಳೆಯಿತು.

ಶರತ್ ಕಮಲ್ ನಿವೃತ್ತಿ: ತಮಿಳುನಾಡಿನ ಶರತ್ ಕ್ವಾರ್ಟರ್‌ಫೈನಲ್ ಪಂದ್ಯದ ನಡುವೆಯೇ ಬೆನ್ನುನೋವಿನ ಕಾರಣ ಹಿಂದೆ ಸರಿದರು. ಹರಿಯಾಣದ ಸೌಮ್ಯಜೀತ್ ಘೋಷ್ ಎದುರು ಸ್ಪರ್ಧಿಸಿದ್ದ ಅವರು ಪಂದ್ಯದಿಂದ ನಿವೃತ್ತರಾದಾಗ ಎರಡು ಸೆಟ್‌ಗಳ ಮುನ್ನಡೆ ಸಾಧಿಸಿದ್ದರು.

16ರ ಘಟ್ಟದಲ್ಲಿ ಶರತ್ 7-11, 11-6, 8-11,11-7, 11-6, 11-6 ರಿಂದ ಪಶ್ಚಿಮ ಬಂಗಾಳದ ಜೀತ್ ಎದುರು ಗೆದ್ದಿದ್ದರು.


ಪ್ರಶಸ್ತಿಯೊಂದಿಗೆ ಮಾಧ್ವಿನ್ ಮತ್ತು ನಿಕ್ಷೇಪ್

ನಿಕ್ಷೇಪ್ ಜೋಡಿಗೆ ಕಿರೀಟ

ಬೆಂಗಳೂರು: ಕರ್ನಾಟಕದ ಬಿ.ಆರ್. ನಿಕ್ಷೇಪ್ ಅವರು ಗುಜರಾತ್‌ನ ಮಾಧ್ವಿನ್ ಕಾಮತ್ ಜೊತೆಗೂಡಿ ಎಐಟಿಎ ಪುರುಷರ ರಾಷ್ಟ್ರೀಯ ರ‍್ಯಾಂಕಿಂಗ್ ಟೆನಿಸ್ ಟೂರ್ನಿ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಹೈದರಾಬಾದ್‌ನ ಸಾನಿಯಾ ಮಿರ್ಜಾ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ನಿಕ್ಷೇಪ್– ಮಾಧ್ವಿನ್ 4-6,6-3,10-5ರಿಂದ ತಮಿಳುನಾಡಿನ ಪೃಥ್ವಿ ಶೇಖರ್ ಮತ್ತು ಕರ್ನಾಟಕದ ರಶೇನ್ ಸ್ಯಾಮ್ಯುಯಲ್ ಅವರನ್ನು ಪರಾಭವಗೊಳಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯು ಮಾಧ್ವಿನ್ ಪಾಲಾಯಿತು. ಫೈನಲ್‌ನಲ್ಲಿ ಅವರು 7-5,7-5ರಿಂದ ರಶೇನ್ ಅವರನ್ನು ಸೋಲಿಸಿದರು.

ಜೂಲಿಯಸ್ ಬಾರ್ ಕಪ್ ಚೆಸ್: ಪ್ರಗ್ನಾನಂದಗೆ ಸೋಲು

ಸೆಮಿಫೈನಲ್‌ಗೆ ಅರ್ಜುನ್ ಎರಿಗೈಸಿ


ಅರ್ಜುನ್ ಎರಿಗೈಸಿ– ಟ್ವಿಟರ್ ಚಿತ್ರ

ನ್ಯೂಯಾರ್ಕ್ (ಪಿಟಿಐ): ಜಯದ ಓಟ ಮುಂದುವರಿಸಿದ ಭಾರತದ ಅರ್ಜುನ್ ಎರಿಗೈಸಿ ಅವರು ಜೂಲಿಯಸ್ ಬಾರ್ ಜೆನರೇಷನ್ ಕಪ್ ಆನ್‌ಲೈನ್ ಚೆಸ್ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು. ಆದರೆ ಪ್ರಗ್ನಾನಂದ ಟೂರ್ನಿಯಿಂದ ಹೊರಬಿದ್ದರು.

ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಅರ್ಜುನ್ ಶುಕ್ರವಾರ ಟೈಬ್ರೇಕ್ ಮೂಲಕ ಅಮೆರಿಕದ ಕ್ರಿಸ್ಟೋಫರ್ ಯೋ ಅವರನ್ನು ಮಣಿಸಿದರು.

19 ವರ್ಷದ ಅರ್ಜುನ್ ಮತ್ತು 15ರ ಪ್ರಾಯದ ಯೋ ಮೊದಲ ನಾಲ್ಕು ರ‍್ಯಾಪಿಡ್ ಗೇಮ್‌ಗಳಲ್ಲಿ 2–2ರ ಸಮಬಲ ಸಾಧಿಸಿದರು. ಬ್ಲಿಟ್ಜ್ ಟೈಬ್ರೇಕರ್‌ನ ಎರಡು ಗೇಮ್‌ಗಳ ಪೈಕಿ ಮೊದಲನೆಯದ್ದರಲ್ಲಿ ಅರ್ಜುನ್ ಗೆಲುವು ಸಾಧಿಸಿದರೆ ಎರಡನೇ ಗೇಮ್‌ಅನ್ನು ಡ್ರಾ ಮಾಡಿಕೊಂಡು ಸೆಮಿಗೆ ಅರ್ಹತೆ ಗಳಿಸಿದರು.

ಪ್ರಗ್ನಾನಂದ ಎಂಟರಘಟ್ಟದ ಪಂದ್ಯದಲ್ಲಿ 1–3ರಿಂದ ಜರ್ಮನಿಯ ವಿನ್ಸೆಂಟ್ ಕೇಮರ್ ಎದುರು ಸೋತರು.

ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಕೂಡ ನಾಲ್ಕರ ಘಟ್ಟ ಪ್ರವೇಶಿಸಿದ್ದಾರೆ. ಸೆಮಿಫೈನಲ್‌ನಲ್ಲಿ ಅವರು ವಿನ್ಸೆಂಟ್ ಅವರಿಗೆ ಮುಖಾಮುಖಿಯಾಗುವರು.


ಸೆಮಿಫೈನಲ್‌ನ ಮತ್ತೊಂದು ಹಣಾಹಣಿಯಲ್ಲಿ ಅರ್ಜುನ್, ವಿಯೆಟ್ನಾಂನ ಲಿಯೆಮ್ ಕ್ವಾಂಗ್ ಲೀ ಅವರನ್ನು ಎದುರಿಸುವರು.

ಎಂಟರಘಟ್ಟದ ಪಂದ್ಯಗಳಲ್ಲಿ ಕಾರ್ಲ್‌ಸನ್ ಅವರು 3–1ರಿಂದ ಅಮೆರಿಕದ ಲೆವನ್ ಅರೋನಿಯನ್ ಎದುರು, ಕ್ವಾಂಗ್ ಲೀ 2.5–1.5ರಿಂದ ಅಮೆರಿಕದ ಇನ್ನೋರ್ವ ಆಟಗಾರ ಹಾನ್ಸ್ ನೀಮನ್ ವಿರುದ್ಧ ಗೆದ್ದರು.

ಸೆಮಿಫೈನಲ್‌ಗಳಲ್ಲಿ ಆಟಗಾರರ ನಾಲ್ಕು ಗೇಮ್‌ಗಳ ಎರಡು ಸೆಟ್‌ಗಳನ್ನು ಆಡಲಿದ್ದಾರೆ.

ಕಾರ್ಲ್‌ಸನ್ ಅವರು ಪ್ರಿಲಿಮನರಿ ಹಂತದಲ್ಲಿ 34 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದರು. ಅರ್ಜುನ್ ಎರಡನೇ ಮತ್ತು ಪ್ರಗ್ನಾನಂದ ನಾಲ್ಕನೇ ಸ್ಥಾನ ಗಳಿಸಿದರು.

ಫೆರಾರಿ: ಆಯ್ಕೆ ಟ್ರಯಲ್ಸ್‌ಗೆ ರುಹಾನ್ ಆಳ್ವಾ


ರುಹಾನ್ ಆಳ್ವಾ

ಬೆಂಗಳೂರು: ಉದ್ಯಾನನಗರಿಯ ರುಹಾನ್ ಆಳ್ವಾ ಅವರು 2022ರ ಫೆರಾರಿ ಡ್ರೈವರ್ಸ್ ಅಕಾಡೆಮಿ (ಎಫ್‌ಡಿಎ) ಆಯ್ಕೆ ಟ್ರಯಲ್ಸ್‌ಗೆ ಅರ್ಹತೆ ಗಳಿಸಿದ್ದಾರೆ. ಆಯ್ಕೆ ಟ್ರಯಲ್ಸ್ ಇದೇ 26ರಿಂದ 28ರವರೆಗೆ ಮಲೇಷ್ಯಾದ ಸೆಪಾಂಗ್ ಅಂತರರಾಷ್ಟ್ರೀಯ ಸರ್ಕೀಟ್‌ನಲ್ಲಿ ನಡೆಯಲಿದೆ.

ಜೆಕೆ ಟೈರ್ ಕಂಪನಿಯ ಬೆಂಬಲ ಪಡೆದಿರುವ ರುಹಾನ್ ಅವರು ಏಷ್ಯಾ ಪೆಸಿಫಿಕ್ ಮತ್ತು ಓಷಾನಿಯಾ ವಲಯದ ಟ್ರಯಲ್ಸ್‌ಗೆ ಆಯ್ಕೆಯಾದ ದೇಶದ ಏಕೈಕ ರೇಸರ್ ಎನಿಸಿಕೊಂಡಿದ್ದಾರೆ. ಏಳು ದೇಶಗಳ 24 ರೇಸರ್‌ಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ.

ಪ್ರಜಾ ಪ್ಲಸ್

ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಪ್ರಜಾವಾಣಿ ಯೂಟ್ಯೂಬ್ ಚಾನೆಲ್‌ನಲ್ಲಿ ಸೆ.26 ರಿಂದ ಅ 4ರವರೆಗೆ ಸಾಂಸ್ಕೃತಿಕ ಉತ್ಸವ ವೀಕ್ಷಿಸಬಹುದು



1

ಸೆ.26 ರಿಂದ ಅ 4ರವರೆಗೆ

ಪ್ರಜಾವಾಣಿ ಫೇಸ್‌ಬುಕ್, ಯೂಟ್ಯೂಬ್ ತಾಣಗಳಲ್ಲಿ

ನವರಾತ್ರಿ ಸಾಂಸ್ಕೃತಿಕ ಉತ್ಸವ

ದಸರಾ - ನವರಾತ್ರಿ ಸಡಗರಕ್ಕೆ ನಾಡು ಸಜ್ಜಾಗಿರುವಂತೆಯೇ ಈ ನವ ದಿನಗಳ ಕಾಲ ಓದುಗರ ಮನವನ್ನು ರಂಜಿಸಲು 'ಪ್ರಜಾವಾಣಿ' ಸಿದ್ಧವಾಗಿದೆ. ಸೆ.26ರ ಸೋಮವಾರದಿಂದ ಪ್ರತಿ ರಾತ್ರಿ 9.30ರಿಂದ 11ರವರೆಗೆ ಪ್ರಜಾವಾಣಿ ಯೂಟ್ಯೂಬ್ ಹಾಗೂ ಫೇಸ್‌ಬುಕ್ ತಾಣಗಳಲ್ಲಿ ನಗೆ ಹಬ್ಬ, ಗಾಯನ, ನರ್ತನ, ಯಕ್ಷಗಾನ, ಸಾಹಿತ್ಯ, ಗೋಷ್ಠಿ ವೈವಿಧ್ಯಗಳ ಸಮಾರಾಧನೆ ನಡೆಯಲಿದೆ. ಓದುಗರು ಪ್ರಜಾವಾಣಿಯ ಯೂಟ್ಯೂಬ್ ತಾಣದಲ್ಲಿ (youtube.com/prajavani) ಹಾಗೂ fb.com/prajavani.net ಮೂಲಕ ಈ ಕಾರ್ಯಕ್ರಮಗಳ ಪ್ರಸಾರ ವೀಕ್ಷಿಸಬಹುದು.



ಪ್ರಜಾವಾಣಿ ಅರ್ಪಿಸುವ ನವರಾತ್ರಿ ಸಾಂಸ್ಕೃತಿಕ ಉತ್ಸವ- 2022, ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು

ಸೆಪ್ಟೆಂಬರ್ 26 ಸೋಮವಾರ
ಮಹಾ ನಗೆ ಹಬ್ಬ . ಕಾಮಿಡಿ ಕಿಂಗ್ ಗಂಗಾವತಿ ಪ್ರಾಣೇಶ್, ನರಸಿಂಹ ಜೋಶಿ, ಬಸವರಾಜ ಮಹಾಮನಿ ನಿರ್ವಹಣೆ: ನಾಗರಾಜ್ ಶೆಟ್ಟಿ



ಸೆಪ್ಟೆಂಬರ್ 27 ಮಂಗಳವಾರ
ನವರಾತ್ರಿ ವರ್ಣ ವೈಭವ: ಗರ್ಬಾ ನೃತ್ಯ ನಂದಿನಿ ಕೆ. ಮೆಹ್ತಾ ಮತ್ತು ಕೆ.ಮುರಳಿ ಮೋಹನ್ ನಿರ್ದೇಶನದ ಸಮೂಹ ನೃತ್ಯ. ನಾದಂ ತಂಡ ಮತ್ತು ಕ್ಲಬ್ ಸದಸ್ಯರಿಂದ ನಿರ್ವಹಣೆ: ಮಮತಾ ಶ್ರೀನಿವಾಸ್



ಸೆಪ್ಟೆಂಬರ್ 30 ಶುಕ್ರವಾರ
ಮಹಿಷ ಮರ್ದಿನಿ ಯಕ್ಷಗಾನ ಪ್ರದರ್ಶನ ಶ್ರೀದೇವಿ ಯಕ್ಷ ಕಲಾ ಸಂಘ ವತಿಯಿಂದ ನಿರ್ವಹಣೆ: ಡಾ.ಅನುರಾಧಾ ರವಿಶಂಕರ್

ಸೆಪ್ಟೆಂಬರ್ 28 ಬುಧವಾರ
ದಾಂಡಿಯಾ - ಗರ್ಬಾ ನೃತ್ಯ ನರ್ತನ ಅಕಾಡೆಮಿ ಆಫ್ ಡ್ಯಾನ್ಸ್ ಆ್ಯಂಡ್ ಮ್ಯೂಸಿಕ್ ಮತ್ತು ಕ್ಲಬ್ ಸದಸ್ಯರಿಂದ ನಿರ್ವಹಣೆ: ಸೌಮ್ಯಾ ಪ್ರಭು

ಸೆಪ್ಟೆಂಬರ್ 29 ಗುರುವಾರ
ದಾಂಡಿಯಾ ಧಮಾಲ್ ನಾದಂ ಹಾಗೂ ಕಾಸ್ಮೋಪಾಲಿಟನ್ ಕ್ಲಬ್ ಯುವ ಸದಸ್ಯರಿಂದ ನಿರ್ವಹಣೆ: ಧರಣಿ ಕಾಂಗೋವಿ

ಅಕ್ಟೋಬರ್ 01 ಶನಿವಾರ
ನಾನೇ ಕರ್ನಾಟಕದ ಶಾಶ್ವತ ಮುಖ್ಯಮಂತ್ರಿ ಹಿರಿಯ ನಟ



'ಮುಖ್ಯಮಂತ್ರಿ' ಚಂದ್ರು ಅವರಿಂದ ಹಾಸ್ಯ ಸಂಜೆ ನಿರ್ವಹಣೆ: ಶ್ರೀನಿವಾಸ ಜಿ.ಕಪ್ಪಣ್ಣ

ಅಕ್ಟೋಬರ್ 02 ಭಾನುವಾರ
ನವರಾತ್ರಿ ನವರೂಪಿಣಿ ರಘು ಲೀಲಾ ಸಂಗೀತ ಶಾಲೆ, ಮೈಸೂರು ವತಿಯಿಂದ ಸಮೂಹ ಗಾಯನ ನಿರ್ದೇಶನ: ಸುನೀತಾ ಚಂದ್ರ ಕುಮಾರ್



ನಿರ್ವಹಣೆ: ನಾಗರಾಜ್ ಕಪನಿ

ಅಕ್ಟೋಬರ್ 03 ಸೋಮವಾರ
ಶ್ರೀ ಚಾಮುಂಡೇಶ್ವರಿ ಪಾಲಯಮಾಂ ಅಂತರರಾಷ್ಟ್ರೀಯ ಗಾಯಕಿಯರಾದ ಡಾ.ರಮಾ ಪುಸ್ತಕಂ, ದೀಪ್ತಿ ಶ್ರೀನಾಥ್, ಹರಿಣಿ ಶ್ರೀಧರ್, ಸಾಕ್ಷಿ ಜಗದೀಶ್ ನೇತೃತ್ವದ ಗೋಷ್ಠಿ ಗಾಯನ ವಯಲಿನ್: ಆರ್.ದಯಾಕರ್, ಮೃದಂಗಂ: ವಿದ್ವಾನ್ ಪಿ.ಜನಾ ರ್ದನ ರಾವ್, ರಿದಂ ಪ್ಯಾಡ್: ವಿದ್ವಾನ್ ಎಸ್.ಮಂಜುನಾಥ್ ನಿರ್ವಹಣೆ: ರವಿ ಕೋಮಿ ಶೆಟ್ಟಿ





ಅಕ್ಟೋಬರ್ 04 ಮಂಗಳವಾರ
ತ್ರಿಶಕ್ತಿ ವೈಭವ ಮೈಸೂರಿನ ನೃತ್ಯ ಗಿರಿ ತಂಡದಿಂದ ಸಾಹಿತ್ಯ- ಸಂಗೀತ -ನೃತ್ಯಗಳ ಸಂಗಮ ನಿರ್ದೇಶನ: ಡಾ.ಕೃಪಾ ಫಡ್ಕೆ ನಿರ್ವಹಣೆ: ಟಿ.ವಿ.ಶ್ರೀಧರ್

ಕಾರ್ಯಕ್ರಮ ಸಂಯೋಜನೆ: ಶ್ರೀನಿವಾಸ ಜಿ.ಕಪ್ಪಣ್ಣ, ನಿರ್ಮಾಣ: ಎ.ಎನ್. ಕೆ.ರಾಜು, ಕೆ.ಸಿ.ಕೇದಾರನಾಥ್



ನವರಾತ್ರಿಯ ನೆಪದಲ್ಲಿ ಒಂಬತ್ತು ಬಗೆಯ ವೃತ್ತಿಪರ ಹೆಣ್ಣುಮಕ್ಕಳು ತಮ್ಮ ವೃತ್ತಿಯನ್ನು ಬಿಂಬಿಸುವ ಫೋಟೋಶೂಟ್ ಮಾಡಿಸಿಕೊಂಡರು. ಅದರ ಝಲಕ್ ಇಲ್ಲಿದೆ...

ನವರಾತ್ರಿ ನೆಪದ ನವ 'ಅವತಾರ'

ಆಧುನಿಕ ಮಹಿಳೆ ನಿರ್ವಹಿಸುವ ವಿವಿಧ ಜವಾಬ್ದಾರಿಗಳನ್ನು ಪ್ರತಿನಿಧಿಸಿದ 'ಅವತಾರ'ವಿದು. ರೂಪದರ್ಶಿ: ಪ್ರಿಯಾ ಪ್ರಶಾಂತ್



ಫ್ಯಾಷನ್ ಪ್ರಪಂಚ

ನವರಾತ್ರಿ ನೆಪದಲ್ಲಿ ಸಂಭ್ರಮಿಸಿದ 'ಸ್ಟೈಲ್ ಸ್ಟ್ರಾಡಾ'ದ ರೂಪದರ್ಶಿಯರಾದ ಭಾರತಿ ಆನಂದ್, ಧನ್ಯಾ ರವೀಂದ್ರನ್, ಮೀನಾಕ್ಷಿ ಖನ್ನಾ, ನಂದಿನಿ ಕಲ್ಕೋಟೆ, ಪ್ರಿಯಾ ಪ್ರಶಾಂತ್, ಡಾ.ಅರ್ಚನಾ ದಿವಾನ್, ವಂದನಾ ಪ್ರಭು, ಸೌಮ್ಯಾ ಅಯ್ಯರ್, ಕೃಪಾ ಜಯಾ

ಸಂಭ್ರಮಿಸಲು ಹೆಣ್ಣುಮಕ್ಕಳಿಗೆ ಹೇಳಿಕೊಡಬೇಕಾ? ಅದಕ್ಕೊಂದು ನೆಪ ಬೇಕು ಅಷ್ಟೇ. ಈ ಬಾರಿ ನವರಾತ್ರಿಯ ಸಂಭ್ರಮದಲ್ಲಿ ಆಧುನಿಕ ಹೆಣ್ಣಿನ ಹತ್ತಾರು 'ಅವತಾರ'ಗಳನ್ನು ಕಟ್ಟಿಕೊಡಲು ಒಂದೆಡೆ ಸೇರಿದರು. ಹೌದಲ್ವಾ, ಹೆಣ್ಣು ಅದೆಷ್ಟು ಪಾತ್ರಗಳನ್ನು ನಿರ್ವಹಿಸುತ್ತಾಳೆ. ಆಯಾ ಪಾತ್ರ ನಿರ್ವಹಿಸುವವರನ್ನೇ ಕರೆತಂದು ಆಯಾ ಜವಾಬ್ದಾರಿಯನ್ನು ಪ್ರತಿನಿಧಿಸಿದರು.

ಇದು ರೂಪದರ್ಶಿ, ಉದ್ಯಮಿ ಪ್ರಿಯಾ ಪ್ರಶಾಂತ್ ಅವರ ತಂಡ 'ಸ್ಟೈಲ್ ಸ್ಟ್ರಾಡಾ' ಮಾಡೆಲ್ಸ್ ಗ್ರೂಪ್‌ನಿಂದ ನವರಾತ್ರಿಯ ನೆಪದಲ್ಲಿ ಇಂಥದ್ದೊಂದು ಪರಿಕಲ್ಪನೆಯನ್ನು ಹೊರ ತಂದರು. ಜೆ.ಪಿ.ನಗರದಲ್ಲಿ ಈ ತಂಡ ಇತ್ತೀಚೆಗೆ ಫೋಟೋ ಶೂಟ್ ಮಾಡಿಕೊಂಡು ಸಂಭ್ರಮಿಸಿತು.

ಈ ಕಲ್ಪನೆಯನ್ನು ಆಯಾ ವೃತ್ತಿಯ ಕ್ಷೇತ್ರದವರನ್ನೇ ಒಂದೆಡೆ ಸೇರಿಸಿ ನವ ಯುಗದ ನವ 'ಅವತಾರ'ಗಳನ್ನು ಇಲ್ಲಿ ತೋರಿಸಿದ್ದಾರೆ. ಶಿಕ್ಷಕಿ ವಂದನಾ ಮತ್ತು ಭಾರತಿ ಆನಂದ್ ಅವರು ಶಿಕ್ಷಕರು, ಸೌಮ್ಯಾ ಅಯ್ಯರ್ ಅವರು ಕಂಟೆಂಟ್ ರೈಟರ್ ಆಗಿದ್ದಾರೆ. ಮಾಡೆಲ್, ಉದ್ಯಮಿಯಾಗಿ, ದಂತ ವೈದ್ಯೆ ಅರ್ಚನಾ ದಿವಾನ್ ಅವರು ಆರೋಗ್ಯ ಸೇವೆಯನ್ನು ಪ್ರತಿನಿಧಿಸಿದರು. ನಂದಿನಿ ಕಲ್ಕೋಟೆ ಅವರು ಗೃಹಿಣಿಯ, ವ್ಯಾಪಾರಿಯಾಗಿ ಕಾಣಿಸಿಕೊಂಡರು.

ಮೀನಾಕ್ಷಿ ಅವರು ಫ್ಯಾಷನ್ ಡಿಸೈನರ್ ಆಗಿದ್ದಾರೆ. ಇಲ್ಲಿನ ಮಾಡೆಲ್‌ಗಳಿಗೆ ಬಣ್ಣ ಹಚ್ಚಿದರು. ತಾವೂ ಫೋಟೋಗೆ ಪೋಸು ಕೊಟ್ಟರು. ಧನ್ಯಾ ರವೀಂದ್ರನ್ ಶಿಕ್ಷಣ ಸಲಹೆಗಾರ್ತಿ. ಇಲ್ಲಿಯೂ ಅವರದ್ದು ಅದೇ ಪಾತ್ರ.

ಜೀವನೋತ್ಸಾಹವೇ ಗುರಿ

ಈ ತಂಡದಲ್ಲಿ ಕೆಲವರು ಯುವತಿಯರು. ಹಲವರು ಗೃಹಿಣಿಯರು. ತುಂಬು ಸಂಸಾರ ನಡೆಸುವವರೂ ಇದ್ದಾರೆ. ಇವರಿಗೇಕೆ ಬಣ್ಣದ ಗೀಳು ಎಂದು ಕೇಳಿದರೆ ಪ್ರಿಯಾ ಪ್ರಶಾಂತ್ ಹೇಳುವುದಿಷ್ಟು. ನಾವು ಇಲ್ಲಿ ವಿವಿಧ ವೃತ್ತಿಪರರ ವೇಷ ಧರಿಸಿಲ್ಲ. ನಾವೇನು ಮಾಡುತ್ತಿದ್ದೇವೋ ಅದನ್ನೇ ಮಾಡೆಲಿಂಗ್‌ನ ವಸ್ತುವನ್ನಾಗಿಸಿ ಚೆಂದದ ಕ್ಯಾನ್ವಾಸ್ ಮೂಡಿಸಿದ್ದೇವೆ. ಇದು ನವರಾತ್ರಿಯ ನೆಪದಲ್ಲಿ ನಮ್ಮದೊಂದು ಪುಟ್ಟ ಸಂಭ್ರಮ ಅಷ್ಟೇ ಎಂದರು.

ಗೃಹಿಣಿ ಆದ ಕೂಡಲೇ ನಮ್ಮ ಜೀವನೋತ್ಸಾಹ ಮುಗಿಯಬೇಕೆಂದಿಲ್ಲ. ಕುಟುಂಬ ನಮ್ಮ ಜೀವನಕ್ಕೊಂದು ಸೇರ್ಪಡೆಯಾಗುತ್ತದೆ. ಆ ಜೀವನಕ್ಕೊಂದು ಹೊಸ ಚೈತನ್ಯ ಕೊಡಬೇಕು. ಅಂಥದ್ದೊಂದು ಪ್ರಯತ್ನವಿದು. ಆಯಾ ವಯೋಮಾನ ಹಾಗೂ ನಮ್ಮ ವೃತ್ತಿ, ವೈಯಕ್ತಿಕ ಅಸ್ಮಿತೆಯನ್ನು ಗೌರವಯುತವಾಗಿ ಬಿಂಬಿಸುವ ವಸ್ತ್ರ ಪ್ರದರ್ಶನ ಮಾಡಿದ್ದೇವೆ. ಆಯಾ ವೃತ್ತಿಯವರೇ ಇರುವುದರಿಂದ ಇದಕ್ಕೇನೂ ವಿಶೇಷ ತಾಲೀಮೂ ಬೇಕಾಗಿಲ್ಲ. ಅಥವಾ ಆರ್ಥಿಕ ಪ್ರತಿಫಲದ ಅವಶ್ಯಕತೆಯೂ ಈ ತಂಡದವರಿಗಿಲ್ಲ ಎಂದರು ಅವರು.

ಮಾಡೆಲಿಂಗ್ ಹೆಸರಿನಲ್ಲಿ ಒಟ್ಟಾಗುವ ಈ ತಂಡದವರು ಪರಸ್ಪರರಿಗೆ ನೆರವಾಗುತ್ತಾರೆ. ಅವರವರ ಕೌಶಲಗಳನ್ನು ಆನ್‌ಲೈನ್/ ಆಫ್‌ಲೈನ್ ಮೂಲಕ ಇತರರಿಗೆ ಧಾರೆಯೆರೆಯುತ್ತಾರೆ. ಉದಾಹರಣೆಗೆ ನೃತ್ಯ ತರಬೇತಿ, ಸೌಂದರ್ಯ ವರ್ಧನೆ ತರಬೇತಿ, ಫ್ಯಾಷನ್ ಡಿಸೈನಿಂಗ್, ಆಪ್ತ ಸಮಾಲೋಚನೆ, ಉದ್ಯಮ ಮಾರ್ಗದರ್ಶನ ಹೀಗೆ ಹತ್ತಾರು ಚಟುವಟಿಕೆಗಳಲ್ಲಿ ಈ ತಂಡ ಸಕ್ರಿಯವಾಗಿದೆ.

ಕಳೆದ ದೀಪಾವಳಿಯ ಸಂದರ್ಭದಲ್ಲೂ ಈ ತಂಡ 'ದೀಪಾಂಬರ' ಎಂಬ ಪರಿಕಲ್ಪನೆಯಲ್ಲಿ ದೀಪಾವಳಿ ವಸ್ತ್ರಾಲಂಕಾರ ಪ್ರದರ್ಶಿಸಿ ಗಮನ ಸೆಳೆದಿತ್ತು.

26ರಿಂದ ನವರಾತ್ರಿ ಕಾರ್ಯಕ್ರಮ

ನಗರದ ಯಶವಂತಪುರ ಸರ್ಕಲ್ ಸಮೀಪವಿರುವ ಮಹಾಯಾಗ ಕ್ಷೇತ್ರ ಶ್ರೀ ಗಾಯತ್ರಿ ದೇವಸ್ಥಾನದಲ್ಲಿ ಸೆ.26 ರಿಂದ ಅ.5 ರವರೆಗೆ ಶತಚಂಡಿಕಾ ಹೋಮ ಹಾಗೂ ಶರನ್ನವರಾತ್ರಿ ಸಂಗೀತ ನೃತ್ಯೋತ್ಸವ ಕಾರ್ಯಕ್ರಮ ನಡೆಯಲಿದೆ. ಪ್ರತಿ ದಿನ ಬೆಳಿಗ್ಗೆ 7 ಗಂಟೆಗೆ ಪೂಜೆ ಮತ್ತು ವಿಶೇಷ ಅಲಂಕಾರವಿರುತ್ತದೆ. ಸಂಜೆ 6.30ಕ್ಕೆ ವಿವಿಧ ನೃತ್ಯ ಮತ್ತು ಕಲಾ ಶಾಲೆಗಳಿಂದ ಭರತನಾಟ್ಯ, ಕೂಚಿಪುಡಿ ನೃತ್ಯ, ಕಥಕ್ ಸೇರಿದಂತೆ ವಿವಿಧ ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಯಕ್ಷಸಿರಿ



ಇಂದು–ನಾಳೆ ಸಿರಿಕಲಾ ಯಕ್ಷೋತ್ಸವ

ಬೆಂಗಳೂರಿನ 'ಸಿರಿಕಲಾ ಮೇಳ' ಸಂಘಟನೆಯವರು ಸೆ.23 ರಿಂದ 25ರವರೆಗೆ ನಗರದ ಮೂರು ಕಡೆಗಳಲ್ಲಿ 'ಸಿರಿಕಲಾ ಯಕ್ಷೋತ್ಸವ' ಎಂಬ ತ್ರಿವಳಿ ಯಕ್ಷಗಾನ ಪ್ರದರ್ಶನ ಆಯೋಜಿಸಿದ್ದಾರೆ.

ಶುಕ್ರವಾರ (ಸೆ.23)ದಿಂದ ಕಾರ್ಯಕ್ರಮ ಆರಂಭವಾಗಿದೆ. ಉದಯಭಾನು ಕಲಾಸಂಘದಲ್ಲಿ 'ಕೌರವ ಸಂಜಯ ತಾಳಮದ್ದಳೆ'ಯೊಂದಿಗೆ ಕಾರ್ಯಕ್ರಮ ಉದ್ಘಾಟನೆಯಾಗಿದ್ದು, 'ವಿಜಯ ಯಕ್ಷಗಾನ' ಪ್ರದರ್ಶನವೂ ನಡೆದಿದೆ.

ಶನಿವಾರ ಸಂಜೆ 5.30ಕ್ಕೆ ಆರ್‌ಬಿಐ ಬಡಾವಣೆಯ ಬಿಬಿಎಂಪಿ ಕಚೇರಿ ಆವರಣದಲ್ಲಿ 'ಲವಕುಶ' ಯಕ್ಷಗಾನ ಪ್ರದರ್ಶನವಿದೆ.

ಭಾನುವಾರ 5.30ಕ್ಕೆ ವಿಜಯ ಬ್ಯಾಂಕ್ ಕಾಲೊನಿಯ ಮೂಲ್ಕಿ ಸುಂದರಾಂ ಶೆಟ್ಟಿ ಸಭಾಭವನದಲ್ಲಿ 'ರಾಜಾ ರುದ್ರಕೋಪ' ಯಕ್ಷಗಾನ ಪ್ರದರ್ಶನವಿದೆ.

ಯಕ್ಷಗಾನ ಪ್ರದರ್ಶನದಲ್ಲಿ ಸರ್ವೇಶ್ವರ ಹೆಗಡೆ ಮೂರೂರು, ಸುಬ್ರಾಯ ಹೆಬ್ಬಾರ, ಗಜಾನನ ಭಂಡಾರಿ ಬೋಳ್ಗೆರೆ, ಕಾರ್ತೀಕ ಧಾರೇಶ್ವರ, ಶ್ರೀಧರ ಭಟ್ ಕಾಸರಕೋಡು, ಪ್ರಶಾಂತ ವರ್ಧನ, ವಿನಯ ಹೊಸ್ತೋಟ, ಭರತ್ ರಾಜ್ ಪರ್ಕಳ, ಪ್ರಶಾಂತ ಬಾಸೊಳ್ಳಿ, ಸಾಯಿಕುಮಾರ್, ನಾಗಶ್ರೀ ಗೀಜಗಾರ್, ಅರ್ಪಿತಾ ಹೆಗಡೆ, ಮಾನಸಾ ಉಪಾಧ್ಯ, ಸಿಂಧು ಹೆಬ್ಬಾರ ಮತ್ತಿತರರು ಕಲಾವಿದರಾಗಿ ಪಾಲ್ಗೊಳ್ಳುತ್ತಿದ್ದಾರೆ. ಸುರೇಶ ಹೆಗಡೆ ಕಡತೋಕ ಅವರ ಸಂಯೋಜನೆಯಲ್ಲಿ ಈ ಎಲ್ಲ ಕಾರ್ಯಕ್ರಮಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗೆ ಸಂಪರ್ಕ- 9986590511

ಮೊಟೊರೊಲಾ ನೂತನ ಟ್ಯಾಬ್ಲೆಟ್



ತಂತ್ರಜ್ಞಾನ

ಸ್ಮಾರ್ಟ್‌ಫೋನ್ ಮತ್ತು ಗ್ಯಾಜೆಟ್ ಲೋಕದಲ್ಲಿ ಹೆಸರು ಗಳಿಸಿರುವ ಮೊಟೊರೊಲಾ, ನೂತನ ಟ್ಯಾಬ್ಲೆಟ್ ಬಿಡುಗಡೆ ಮಾಡಿದೆ. ಲೆನೊವೊ ಕಂಪನಿ ಒಡೆತನದಲ್ಲಿರುವ ಮೊಟೊ ರೊಲಾ, ದೇಶದಲ್ಲಿ ಮೊಟೊ ಟ್ಯಾಬ್ G62 ಆ್ಯಂಡ್ರಾಯ್ಡ್ ಟ್ಯಾಬ್ಲೆಟ್ ಪರಿಚಯಿಸಿದೆ.

10.6 ಇಂಚಿನ ಎಲ್‌ಸಿಡಿ ಡಿಸ್‌ಪ್ಲೇ, ಫೇಸ್ ಅನ್‌ಲಾಕ್ ವ್ಯವಸ್ಥೆ, ನ್ಯಾನೊ ಎಲ್‌ಟಿಯ ಸಿಮ್ ಮತ್ತು 3.5ಎಂಎಂ ಆಡಿಯೋ ಜ್ಯಾಕ್ ಪೋರ್ಟ್ ಹೊಸ ಮೊಟೊ ಟ್ಯಾಬ್‌ನಲ್ಲಿದೆ ಎಂದು ಕಂಪನಿ ಹೇಳಿದೆ.

ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 680 ಒಕ್ಟಾ-ಕೋರ್ ಪ್ರೊಸೆಸರ್ ಜತೆಗೆ ಅಡ್ರೆನೊ 610 ಗ್ರಾಫಿಕ್ಸ್ ಬೆಂಬಲ, ಆ್ಯಂಡ್ರಾಯ್ಡ್ 12 ಓಎಸ್, 4 GB LPDDR4X RAM ಮತ್ತು 64 GB ಸ್ಟೋರೇಜ್ ಇರಲಿದೆ. ಜತೆಗೆ 7,700mAh ಬ್ಯಾಟರಿ ಮತ್ತು 20W ಫಾಸ್ಟ್ ಚಾರ್ಜಿಂಗ್ ಬೆಂಬಲ ಹೊಂದಿದೆ. ಹಿಂಭಾಗದಲ್ಲಿ 8 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು 8 ಮೆಗಾಪಿಕ್ಸೆಲ್ ಸೆಲ್ಫಿ ಇದರಲ್ಲಿದೆ. ಶಓಮಿ ಎಂಐ ಪ್ಯಾಡ್ 5 ಬಿಡುಗಡೆ: ವೈಶಿಷ್ಟ್ಯಗಳು, ಬೆಲೆ ವಿವರ ಇಲ್ಲಿದೆ..

ಫ್ಲಿಪ್‌ಕಾರ್ಟ್ ಮೂಲಕ ಆಗಸ್ಟ್ 25ರಿಂದ ಲಭ್ಯವಿದೆ. Wi-Fi ಮಾದರಿಗೆ ₹15,999 ಮತ್ತು LTE ಆವೃತ್ತಿಗೆ ₹17,999 ದರವಿದೆ.



ಇಂದು 'ಜೂಪಿಟರ್' ನಾಟಕ ಪ್ರದರ್ಶನ

ಪ್ರವರ ಥಿಯೇಟರ್ ತಂಡ, 'ಜೂಪಿಟರ್' - ಪತ್ತೇದಾರಿ ಕನ್ನಡ ನಾಟಕವನ್ನು ಪ್ರಸ್ತುತಪಡಿಸುತ್ತಿದೆ. ಈ ನಾಟಕವು ಶರ್ಲಾಕ್ ಹೋಮ್ಸ್‌'ನ ಕನ್ನಡ ಅವತರಣಿಕೆಯಾಗಿದೆ. ಸರ್ ಆರ್ಥರ್ ಕಾನಾನ್ ಡಾಯಲ್ ರಚಿಸಿರುವ ಕಥೆಯೊಂದನ್ನು ಆಧರಿಸಿ ಎಸ್. ವಿ.ಕೃಷ್ಣಶರ್ಮ ಈ ನಾಟಕವನ್ನು ರಚಿಸಿದ್ದಾರೆ. ಹನು ರಾಮಸಂಜೀವ ನಿರ್ದೇಶನ ಮಾಡಿದ್ದಾರೆ.

ಸಮಯ: ಸಂಜೆ 7.00 ಗಂಟೆಗೆ

ಸ್ಥಳ: ಕೆ.ಹೆಚ್. ಕಲಾಸೌಧ, ಹನುಮಂತನಗರ

ನಾಳೆ ಡೆಸ್ಡೆಮೊನಾ ರೂಪಕಂ



ನೃತ್ಯ ಮತ್ತು ಸ್ಟೆಮ್ ಡಾನ್ಸ್ ಕಂಪನಿಯಿಂದ 'ಡೆಸ್ಡೆಮೊನ ರೂಪಕಂ' ಪ್ರದರ್ಶನ. ಎಂ.ಡಿ. ಪಲ್ಲವಿ ಹಾಗೂ ಬಿಂದುಮಾಲಿನಿ ನಾರಾಯಣಸ್ವಾಮಿ ಅವರು ನಡೆಸಿಕೊಡಲಿದ್ದಾರೆ. ಈ ನಾಟಕವು ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗೂ ಜನಪದ ಸಂಗೀತವನ್ನು ಒಳಗೊಂಡಿದೆ. ಸಂಗೀತ, ಕಾವ್ಯ, ಸಂಭಾಷಣೆ ಮೂರನ್ನು ಒಳಗೊಂಡ ರೂಪಕ. ಶೇಕ್ಸ್‌ಪಿಯರ್‌ನ 'ಒಥೆಲ್ಲೊ' ನಾಟಕ ಆಧಾರಿತ ಕಥೆಗೆ ಸಹಕಥೆಯನ್ನು ಎಂ.ಡಿ.ಪಲ್ಲವಿ, ಬಿಂದುಮಾಲಿನಿ, ವೀಣಾ ಅಪ್ಪಯ್ಯ, ಅಭಿಷೇಕ್ ಮಜುಂದಾರ್, ಇರ್ವಾಟಿ ಕಾರ್ನಿಕ್ ಬರೆದಿದ್ದಾರೆ.

ಪ್ರದರ್ಶನದ ದಿನ: ಇದೇ 25, ಭಾನುವಾರ, ಸಮಯ: ಸಂಜೆ 5.30 ರಿಂದ 7ಗಂಟೆ, ಸ್ಥಳ: ಮಲ್ಲೇಶ್ವರಂನಲ್ಲಿರುವ ನಾಟ್ಯ ಸ್ಟೆಮ್ ಸ್ಟುಡಿಯೋ